



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 3 ಬುಧವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 137 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಬಿಜೆಪಿ ಬಾಗಿಲಲ್ಲಿ ಕೆ.ಎನ್.ರಾಜಣ್ಣ!

## • ಡಿಕೆಶಿ ಆಪ್ತ ಹೆಚ್.ಸಿ. ಬಾಲಕೃಷ್ಣ ಬಾಂಬ್ • ಕಾಂಗ್ರೆಸ್‌ನಲ್ಲಿ ಸಾಕಷ್ಟು ಗೊಂದಲ ಸೃಷ್ಟಿಸಿ ಈಗ ಪಕ್ಷ ತೊರೆಯಲು ಮುಂದಾಗಿದ್ದಾರೆ

ಬೆಂಗಳೂರು, ಸೆ.2(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಿಂದ ಪದಚ್ಯುತಗೊಂಡ ಕೆ.ಎನ್.ರಾಜಣ್ಣ ಬಿಜೆಪಿ ಬಾಗಿಲು ತಟ್ಟಿದ್ದಾರೆಂದು ಕಾಂಗ್ರೆಸ್ ಶಾಸಕ ಹೆಚ್.ಸಿ. ಬಾಲಕೃಷ್ಣ ಬಾಂಬ್ ಸಿಡಿಸಿದ್ದಾರೆ.


ಹೆಚ್.ಸಿ.ಬಾಲಕೃಷ್ಣ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಣ್ಣ ಈಗಾಗಲೇ ಬಿಜೆಪಿಗೆ ಅರ್ಜಿ ಸಲ್ಲಿಸಿದ್ದಾರೆ. ಅವರ ಮಾತಿನಿಂದಲೇ ಅವರು ಕೆಟ್ಟಿದ್ದಾರೆ. ಕಾಂಗ್ರೆಸ್‌ನಲ್ಲಿ ಎಲ್ಲಾ ಅಧಿಕಾರ ಅನುಭವಿಸಿದ ರಾಜಣ್ಣ ಈಗ ಪಕ್ಷಕ್ಕೆ ಮಸಿ ಬಳಿಯಲು ಹೊರಟಿದ್ದಾರೆ. ರಾಜಣ್ಣ ಬಿಜೆಪಿ–ಜೆಡಿಎಸ್ ಮುಖಂಡರ ಮನೆಗಳ ಬಾಗಿಲಿಗೆ ತೆರಳಿರುವುದು, ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವುದು ಎಲ್ಲವೂ ನಮ್ಮ ನಾಯಕರುಗಳಿಗೆ ತಿಳಿದಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವ ಕುಮಾರ್ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಸಾರ್ವಜನಿಕವಾಗಿ ಗೊಂದಲ ಸೃಷ್ಟಿಸಿ ನಂತರ ಪಕ್ಷ ತೊರೆಯುವ ನಿರ್ಧಾರ ಕೈಗೊಂಡಿದ್ದಾರೆ. ಪಕ್ಷ ಮತ್ತು ಸರ್ಕಾರದಲ್ಲಿ ಅವರಿಗೆ ಯಾರೂ ತೊಂದರೆ ಕೊಡಲಿಲ್ಲ, ಆದರೆ, ಅವರ ಹೇಳಿಕೆಗಳಿಂದಲೇ ಅಧಿಕಾರ ಕಳೆದುಕೊಳ್ಳಬೇಕಾಯಿತು. ವರಿಷ್ಠರ ವಿರುದ್ಧವೇ ಮಾತನಾಡಿದರೆ ಯಾವ ಪಕ್ಷವೂ ಸಹಿಸುವುದಿಲ್ಲ. ರಾಜಣ್ಣ ಅವರಿಗೆ ಅಷ್ಟೂ ತಿಳಿಯದೆ. ಅವರ ಇತ್ತೀಚಿನ ಧೋರಣೆಗಳು ನಮಗೆ ಯಾರಿಗೂ ಸರಿ ಎನಿಸಲಿಲ್ಲ. ಉಪ ಮುಖ್ಯಮಂತ್ರಿ ಶಿವಕುಮಾರ್ ಆಪ್ತ ವಲಯದಲ್ಲಿ ಬಾಲ ಕೃಷ್ಣ ಗುರುತಿಸಿಕೊಂಡಿದ್ದಾರೆ. ವರಿಷ್ಠರ ವಿರುದ್ಧವೇ ರಾಜಣ್ಣ ಸಮಾವೇಶ ನಡೆಸಲು ಮುಂದಾಗಿರುವ ಬೆನ್ನಲ್ಲೇ ಇಂತಹ ಹೇಳಿಕೆ ನೀಡಿದ್ದಾರೆ.

### ಇವರೆಲ್ಲಾ ಬಿಜೆಪಿಗೆ ಹೋಗೋದೇ 'ಸೆಪ್ಟೆಂಬರ್ ಕ್ರಾಂತಿ'!

ಬೆಂಗಳೂರು: ಕೆ.ಎನ್. ರಾಜಣ್ಣ ಅವರು ಬಿಜೆಪಿಗೆ ಸೇರಲು ಅರ್ಜಿ ಸಲ್ಲಿಸಿದ್ದಾರೆ ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪ್ತ, ಕಾಂಗ್ರೆಸ್ ಶಾಸಕ ಹೆಚ್.ಸಿ. ಬಾಲಕೃಷ್ಣ ಸ್ಫೋಟಕ ಹೇಳಿಕೆಗೆ ರಾಜಣ್ಣ ಪುತ್ರ ರಾಜೇಂದ್ರ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಬಾಲಕೃಷ್ಣ, ಈಗಾಗಲೇ ಜೆಡಿಎಸ್, ಬಿಜೆಪಿ ಎಲ್ಲಾ ಆದ ನಂತರ ಈಗ ಕಾಂಗ್ರೆಸ್‌ಗೆ ಬಂದಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.


ರಾಜೇಂದ್ರ

ಕಾಣದ ಕೈಗಳಿಂದಾಗಿ ರಾಜಣ್ಣ ನವರನ್ನು ಮಂತ್ರಿಗಿರಿಯಿಂದ ತೆಗೆದರು. ಕೆಲವರು ತೆವಲು–ತೀಟೆ ತೀರಿಸಿಕೊಳ್ಳಲು ಈ ರೀತಿ ಮಾತನಾಡುತ್ತಾರೆ. ರಾಜಣ್ಣನವರು ಎಂದಿಗೂ ಪಕ್ಷ ಬಿಡಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ರಾಜಣ್ಣನವರೇನು ಸದನದಲ್ಲಿ ಆರ್‌ಎಸ್‌ಎಸ್ ಗೀತೆ ಹಾಡಿಲ್ವಲ್ಲ. ಚಡ್ಡಿ ಹಾಕೊಂಡು ಆರ್‌ಎಸ್‌ಎಸ್ ಶಾಖೆಗಳಿಗೆ ಹೋಗಿ ಲ್ವಲ್ಲ. ಬಾಲಕೃಷ್ಣ, ಈ ರೀತಿ ಮಾತನಾಡಿ, ಯಾರನ್ನೋ ಮೆಚ್ಚಿಸಿದೆ ಅನ್ಕೊಂಡಿರಬಹುದು. ರಾಜಣ್ಣ ಹೇಳಿದಂತೆ ಇವರೆಲ್ಲಾ ಬಿಜೆಪಿಗೆ ಹೋದರೂ ಆಶ್ಚರ್ಯ ಇಲ್ಲ ಎಂದು ತಿರುಗೇಟು ನೀಡಿದ್ದಾರೆ. ▸ 6ನೇ ಪುಟಕ್ಕೆ

# ಧರ್ಮಸ್ಥಳ ಪ್ರಕರಣ
## ಹಣಕಾಸು ವ್ಯವಹಾರದ ತನಿಖೆಗಿಳಿದ ಇಡಿ!

**ಮಂಗಳೂರು:** ಧರ್ಮಸ್ಥಳ ಪ್ರಕರಣ ಸಂಬಂಧ ಎಸ್‌ಐಟಿ ತನಿಖೆ ಮುಂದುವರೆದಿದ್ದು, ಈ ನಡುವೆ ಸದ್ದಿಲ್ಲದೆ ಜಾರಿ ನಿರ್ದೇಶನಾಲಯ (ಇಡಿ) ಪ್ರವೇಶಿಸಿರುವುದು ಮತ್ತಷ್ಟು ಕುತೂಹಲ ಹೆಚ್ಚಿಸಿದೆ.



ಮುಸುಕುಧಾರಿ ಚಿನ್ನಯ್ಯ, ಯೂಟ್ಯೂಬರ್ ಸಮೀರ್, ಮಹೇಶ್ ತಿಮರೋಡಿ, ಗಿರೀಶ್ ಮಟ್ಟಣ್ಣವರ್ ವಿಚಾರಣೆಯನ್ನು ಎಸ್‌ಐಟಿ ನಡೆಸುತ್ತಿದ್ದು, ತನಿಖೆಯನ್ನು ಎನ್‌ಐಎಗೆ ವಹಿಸಬೇಕೆಂಬ ಆಗ್ರಹ ಕೇಳಿಬರುತ್ತಿದೆ. ಇದೆಲ್ಲದರ ನಡುವೆ ವಿದೇಶದಿಂದ ಹಣ ವಿನಿಮಯವಾಗುತ್ತಿದೆ ಎಂಬ ಆರೋಪದ ಸಂಬಂಧ ಸದ್ದಿಲ್ಲದೆ ಇಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಪ್ರಕರಣ ತನಿಖೆಗೆ ವಿಶೇಷ ತನಿಖಾ ತಂಡ ದಿಂದ ಮಾತ್ರ ಸಾಧ್ಯವಾಗುವುದಿಲ್ಲ. ಎನ್‌ಐಎ ಅಥವಾ ▸ 6ನೇ ಪುಟಕ್ಕೆ





# ಜನಸಂಖ್ಯೆಗನುಸಾರ ಬಾರ್, ವೈನ್‌ಶಾಪ್‌ಗೆ ಹೊಸದಾಗಿ ಲೈಸೆನ್ಸ್

## • ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ್ ಘೋಷಣೆ • ಪ್ರೀಮಿಯಂ ಬ್ರ್ಯಾಂಡ್ ಮದ್ಯದ ದರ ಇಳಿಕೆಗೆ ಚಿಂತನೆ

ಬೆಂಗಳೂರು, ಸೆ.2(ಕೆಎಂಶಿ)– ಜನಸಂಖ್ಯೆಗೆ ಅನುಗುಣವಾಗಿ ಬಾರ್ ಮತ್ತು ವೈನ್ ಶಾಪ್‌ಗಳಿಗೆ ಪರವಾನಗಿ ನೀಡುವುದಾಗಿ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ಇಂದಿಲ್ಲಿ ಘೋಷಿಸಿದ್ದಾರೆ.


ಆರ್.ಬಿ.ತಿಮ್ಮಾಪುರ್

ಸರ್ಕಾರಕ್ಕೆ ಹೆಚ್ಚು ಆದಾಯ ತರುವ ಉದ್ದೇಶದಿಂದ ಇಂತಹ ತೀರ್ಮಾನದ ಜೊತೆಗೆ ಪ್ರೀಮಿಯಂ ಬ್ರ್ಯಾಂಡ್ ಮದ್ಯದ ದರ ಇಳಿಕೆ ಬಗ್ಗೆಯೂ ಚಿಂತನೆ ನಡೆದಿದೆ ಎಂದರು. ಇಲಾಖಾ ಪ್ರಗತಿ ಪರಿಶೀಲನೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಹಂತದಲ್ಲಿ ಸಿಎಲ್–2 ಮತ್ತು ಸಿಎಲ್–9ನ 571 ವೈನ್ ಶಾಪ್ ಮತ್ತು ಬಾರ್‌ಗಳಿಗೆ ಪರವಾನಗಿ ನೀಡಲಾಗುವುದು. ಎಂಎಸ್‌ಐಎಲ್ 571 ಮಳಿಗೆಗಳನ್ನು ನಡೆಸುತ್ತಿದ್ದು ಇವುಗಳ ಪರವಾನಗಿಯನ್ನು ಸಾರ್ವಜನಿಕ ಹರಾಜು ಮಾಡಲಾಗುವುದು. ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಜನಸಂಖ್ಯೆಗೆ ಅನುಗುಣವಾಗಿ ಹೊಸ ಬಾರ್ ಮತ್ತು ವೈನ್‌ಶಾಪ್‌ಗಳಿಗೆ ಪರವಾನಗಿ ▸ 6ನೇ ಪುಟಕ್ಕೆ

ಮೈಸೂರು ಮಿತ್ರ



# ಶಿಕ್ಷಕರು ಟಿಇಟಿ ಪರೀಕ್ಷೆ ಬರೆಯುವುದು ಕಡ್ಡಾಯ



ನವದೆಹಲಿ, ಸೆ.2–ಶಿಕ್ಷಕ ಹುದ್ದೆಗೆ ನೇಮಕಗೊಳ್ಳಲು ಮತ್ತು ಸೇವೆಯಲ್ಲಿರುವ ಶಿಕ್ಷಕರು ಬಡ್ತಿ ಪಡೆಯಲು ಶಿಕ್ಷಕರ ಅರ್ಹತಾ ಪರೀಕ್ಷೆ (TET) ಕಡ್ಡಾಯ ಅವಶ್ಯಕತೆಯಾಗಿದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಆಗಸ್ಟೀನ್ ಜಾರ್ಜ್ ಮಸಿಹ್ ಅವರ ಪೀಠವು ತಮ್ಮ ತೀರ್ಪಿನಲ್ಲಿ, ನಿವೃತ್ತಿ ಹೊಂದಲು 5 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆಯಲ್ಲಿರುವವರು ಎರಡು ವರ್ಷಗಳ ಒಳಗೆ TETಗೆ ಅರ್ಹತೆ ಪಡೆಯಬೇಕು. ಇಲ್ಲದಿದ್ದರೆ, ಅವರು ರಾಜೀನಾಮೆ ನೀಡಬಹುದು ಅಥವಾ ಸರ್ಕಾರದ ಕೊನೆಯ ಪ್ರಯೋಜನಗಳನ್ನು ಪಡೆದುಕೊಂಡು ಕಡ್ಡಾಯ ನಿವೃತ್ತಿಗೆ ಅರ್ಜಿ ಸಲ್ಲಿಸಬಹುದು ಎಂದು ಹೇಳಿದೆ.

ನಿವೃತ್ತರಾಗಲು ಐದು ವರ್ಷಗಳಿಗಿಂತ ಕಡಿಮೆ ಅವಧಿ ಹೊಂದಿದ್ದರೆ ಪರಿಹಾರ ನೀಡಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. ಅಂಥವರು ಟಿಇಟಿ ಪರೀಕ್ಷೆ ತೆಗೆದುಕೊಳ್ಳಬೇಕಿಲ್ಲ. ಆದರೆ ಅವರು ಬಡ್ತಿಗೆ ಅರ್ಹರಾಗಿರುವುದಿಲ್ಲ ಎಂದು ಹೇಳಿದೆ.

ಬೋಧನಾ ಸೇವೆಗೆ TET ಕಡ್ಡಾಯವೇ ಎಂಬ ಬಗ್ಗೆ ತಮಿಳುನಾಡು ಮತ್ತು ಮಹಾರಾಷ್ಟ್ರದ ಅರ್ಜಿಗಳನ್ನು ಒಳಗೊಂಡಂತೆ ಹಲವಾರು ಅರ್ಜಿಗಳನ್ನು ಆಲಿಸಿದ ನಂತರ ಸುಪ್ರೀಂ ಕೋರ್ಟ್ ಪೀಠವು ತೀರ್ಪು ನೀಡಿತು. ಮೇಲ್ಮನವಿ ಸಲ್ಲಿಸಿದವರಲ್ಲಿ ಒಬ್ಬರಾದ ಅಂಜುಮನ್ ಇಶಾತ್-ಎ-ತಲೀಮ್ ಟ್ರಸ್ಟ್ (ಮಾನ್ಯತೆ ಪಡೆದ ಅಲ್ಪಸಂಖ್ಯಾತ ಶಿಕ್ಷಣ ಸಮಾಜ) ಸಹ ಈ ಪ್ರಕರಣದಲ್ಲಿ ಮಹಾರಾಷ್ಟ್ರ ರಾಜ್ಯದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ರಾಜ್ಯವು ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಟಿಇಟಿ ಯನ್ನು ಕಡ್ಡಾಯಗೊಳಿಸಬಹುದೇ ಮತ್ತು ಅದು ಅವರ ಹಕ್ಕುಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬ ಪ್ರಶ್ನೆಯನ್ನು ಉನ್ನತ ಕೋರ್ಟ್ ದೊಡ್ಡ ಪೀಠಕ್ಕೆ ಉಲ್ಲೇಖಿಸಿತು.

ಆರ್‌ಟಿಇ ಕಾಯ್ದೆಯ ನಿಬಂಧನೆಗಳನ್ನು ಸೆಕ್ಷನ್ 2(ಎನ್ ) ನಲ್ಲಿ ವ್ಯಾಖ್ಯಾನಿಸಲಾದ ಎಲ್ಲಾ ಶಾಲೆಗಳು ಪಾಲಿಸಬೇಕು. ಅಲ್ಪಸಂಖ್ಯಾತರು ಸ್ಥಾಪಿಸಿದ ಮತ್ತು ನಿರ್ವಹಿಸುವ ಶಾಲೆಗಳನ್ನು ಹೊರತುಪಡಿಸಿ, ಧಾರ್ಮಿಕ ಅಥವಾ ಭಾಷಾವಾರು, ಅಂತಹ ಸಮಯದ ಉಲ್ಲೇಖವನ್ನು ನಿರ್ಧರಿಸುವವರೆಗೆ ರೂಪಿಸಲಾದ ಪ್ರಶ್ನೆಗಳಿಗೆ ಉತ್ತರಗಳಿಗೆ ಒಳಪಟ್ಟಿರುತ್ತದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಪೀಠ ಹೇಳಿದೆ.

## ಕೆ.ಆರ್.ಬ್ಯಾಂಕ್‌ಗೆ ಸಚಿವ ದಿನೇಶ್ ಗುಂಡೂರಾವ್ ಭೇಟಿ



ಕೃಷ್ಣರಾಜ ಸಹಕಾರಿ ಬ್ಯಾಂಕಿನ ನವೀಕೃತ ಕಟ್ಟಡಕ್ಕೆ ಸಚಿವ ದಿನೇಶ್ ಗುಂಡೂರಾವ್, ಸಹಕಾರಿ ಮುಖಂಡ ಹೆಚ್.ವಿ.ರಾಜೀವ್ ಭೇಟಿ ನೀಡಿದರು. ಅಧ್ಯಕ್ಷ ಬಸವರಾಜು, ನಿರ್ದೇಶಕರಾದ ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ತಾಯೂರ್ ಗಣೇಶ ಮೂರ್ತಿ, ವ್ಯವಸ್ಥಾಪಕ ಅನಂತವೀರಪ್ಪ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

## ಸೆ.7, ಅಖಿಲ ಭಾರತ ಭಾವಸಾರ್ ಕ್ಷತ್ರಿಯ ಮಹಾಸಭೆ, ಕಾರ್ಯಕಾರಿ ಸಮಿತಿ ಸಭೆ

ಮೈಸೂರು,ಸೆ.2(ಜಿಎ)–ಅಖಿಲ ಭಾರತ ಭಾವಸಾರ್ ಕ್ಷತ್ರಿಯ ಮಹಾಸಭೆ ಹಾಗೂ ಕರ್ನಾಟಕ ರಾಜ್ಯ ಕಾರ್ಯಕಾರಿ ಸಮಿತಿ ಸಭೆ ಸೆ.7ರಂದು ಬೆಳಗ್ಗೆ 10.30ಕ್ಕೆ ಮೈಸೂರು–ಹುಣಸೂರು ರಸ್ತೆಯಲ್ಲಿರುವ ವಿಠಲ ರುಕ್ಮಿಣಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ ಎಂದು ರಾಜ್ಯಾಧ್ಯಕ್ಷ ಎನ್.ವಿ. ಶ್ರೀನಿವಾಸರಾವ್ ಪಿಸ್ಸೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಸುಮಾರು 1,500 ಮಂದಿ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಸಭೆಯಲ್ಲಿ ಜಾತಿಗಣತಿಯಲ್ಲಿ ಭಾವಸಾರ್ ಸಮುದಾಯಕ್ಕೆ ಅನ್ಯಾಯವಾಗಿರುವುದರ ಬಗ್ಗೆ ಚರ್ಚಿಸಿ, ಅದನ್ನು ಸರಿಪಡಿಸಲು ಸರ್ಕಾರದ ಗಮನ ಸೆಳೆಯುವುದರ ಬಗ್ಗೆ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಗಣತಿ ವೇಳೆ ಮಾತೃಭಾಷೆ ಮರಾಠಿ ಎಂದು ತಿಳಿಸಿದ ಕಾರಣ ಮರಾಠ ಜಾತಿಗೆ ಸೇರಿಸಲಾಗಿದೆ. ಇದರಿಂದಾಗಿ ಸರ್ಕಾರದ ಸವಲತ್ತು ದೊರೆಯುತ್ತಿಲ್ಲ. ಮರಾಠಿ ಮಾತೃಭಾಷೆಯಾದರೂ ಸಹ ವೃತ್ತಿಯಲ್ಲಿ ಭಾವಸಾರ ಕ್ಷತ್ರಿಯರು ದರ್ಜಿಗಳಾಗಿದ್ದು, ಪ್ರತ್ಯೇಕ ಜಾತಿಯವರಾಗಿದ್ದಾರೆ. ರಾಜ್ಯದಲ್ಲಿ ಸುಮಾರು 8 ಲಕ್ಷ ಜನಸಂಖ್ಯೆ ಇದ್ದರೂ ಕಡಿಮೆ ಸಂಖ್ಯೆ ದಾಖಲಿಸಲಾಗಿದೆ. ಇದರಿಂದಾಗಿ ಮೀಸಲಾತಿ ದೊರಕುತ್ತಿಲ್ಲ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲು ಚಿಂತನೆ ನಡೆದಿತ್ತಾದರೂ, ಕೇಂದ್ರ ಸರ್ಕಾರ ಈಗ ಜಾತಿಗಣತಿಗೆ ಮುಂದಾಗಿರುವ ಕಾರಣ ಕಾದು ನೋಡುವ ನಿರ್ಧಾರಕ್ಕೆ ಬರಲಾಗಿದೆ ಎಂದರು. ಗೋಷ್ಠಿಯಲ್ಲಿ ಶಿವಾಜಿರಾವ್ ರಂಪೋರೆ, ಅರ್ಚನಾ ವಾಘೋನಿ ಮತ್ತಿತರರು ಉಪಸ್ಥಿತರಿದ್ದರು.

## ಸೆ.9ಕ್ಕೆ ಮೈಸೂರು ಕಲಾಮಂದಿರದಲ್ಲಿ ಸಂಗೀತೋತ್ಸವ

ಮೈಸೂರು, ಸೆ.2(ಜಿಎ)–ಮೈಸೂರು ಅರಮನೆ ಆಸ್ಥಾನ ಮೃದಂಗ ವಿದ್ವಾನ್ ಎಂ.ಆರ್.ರಾಜಪ್ಪ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಸೆ.9ರಂದು ಸಂಜೆ 4.30ಕ್ಕೆ ಸಂಗೀತೋತ್ಸವ ಕಾರ್ಯಕ್ರಮವನ್ನು ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿದ್ವಾನ್ ಎಂ.ಆರ್. ರಾಜಪ್ಪ ಅವರ ಪುತ್ರ ಡಾ.ಎಂ.ಆರ್. ಹನುಮಂತರಾಜು ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಆಳ್ವಾಸ್ ಪ್ರತಿಷ್ಠಾನ ಸಂಸ್ಥೆ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಉದ್ಘಾಟಿಸುವರು. ಅತಿಥಿಗಳಾಗಿ ಉದ್ಯಮಿ ಜಗನ್ನಾಥ್ ಶೆಣೈ, ಲಹರಿ ಕಂಪನಿಯ ವೇಲು, ವಿಜ್ಞಾನ ಸಾಹಿತಿ ಪ್ರೊ.ಎಸ್.ರಾಮಪ್ರಸಾದ್, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಆಗಮಿಸುವರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ವಿದುಷಿ ಡಾ.ಕೃಪಾಫಡ್ಕೆ ಶಿಷ್ಯವೃಂದದಿಂದ ನೃತ್ಯೋತ್ಸವ, ಸರಸ್ವತಿ ವಾದ್ಯವೃಂದದಿಂದ ಲಯನಾದ ತರಂಗ ಸಂಗೀತ ಕಾರ್ಯಕ್ರಮ, ನಾಗನಂದಿನಿ ತೆಂಕುತಿಟ್ಟು ಯಕ್ಷಗಾನ ಪ್ರದರ್ಶನವಿದೆ ಎಂದು ಹೇಳಿದರು.

## ಸೆ.7ರಂದು ವಾರ್ಷಿಕ ಮಹಾಸಭೆ

ಮೈಸೂರು,ಸೆ.2–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಮಹದೇವಪ್ಪ ಅಧ್ಯಕ್ಷತೆಯಲ್ಲಿ ಸೆ.7ರಂದು ಬೆಳಗ್ಗೆ 10.30ಕ್ಕೆ ಪಂಡಿತ್ ಶ್ರೀ ನಾರಾಯಣಾಚಾರ್ಯ ಕಲ್ಯಾಣ ಮಂದಿರದಲ್ಲಿ ಕರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.


## ನಿಧನ

### ಕೋಮಲ



ಮೈಸೂರು, ಸೆ.2– ಮೈಸೂರಿನ ಶ್ರೀರಾಂಪುರದ ಪ್ರೀತಿ ಲೇಔಟ್ ನಿವಾಸಿಯಾಗಿದ್ದ ದಿವಂಗತ ನಾಗರಾಜ್ ಅವರ ಪತ್ನಿ ಎಲ್.ಕೋಮಲ (79) ಅವರು ಮಂಗಳವಾರ ಮುಂಜಾನೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ದಿವಂಗತರು ಪುತ್ರರಾದ ಧನಂಜಯ, ಹರೀಶ್, ರವಿ, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮಂಗಳವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಮಂಜುಳಾ



ಮೈಸೂರಿನ ಶಕ್ತಿನಗರದ ನಿವಾಸಿ ಮಂಜುಳಾ ವಿ. (ಲೇಟ್ ಪುರುಷೋತ್ತಮ್ ಅವರ ಧರ್ಮಪತ್ನಿ) ಅವರು ಮಂಗಳವಾರ ಸಂಜೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ 64 ವರ್ಷ ವಯಸ್ಸಾಗಿತ್ತು. ದಿವಂಗತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ(ಸೆ.3) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ಪಾದದ ಬಳಿಯಿರುವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೂವರು ಸಾಧಕರಿಗೆ ಮಯೂರ ವರ್ಮ ಪ್ರಶಸ್ತಿ ಪ್ರದಾನ



ನನ್ನವ್ವ ಸಾಂಸ್ಕೃತಿಕ ಕಲಾತಂಡದಿಂದ ಮಂಗಳವಾರ ಸಾಧಕರಿಗೆ ಮಯೂರ ವರ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

### ಹತ್ತು ಮಂದಿ ಶಿಕ್ಷಕರಿಗೆ ಶಿಕ್ಷಣ ರತ್ನ ಪ್ರಶಸ್ತಿ

ಮೈಸೂರು,ಸೆ.2(ಜಿಎ)–ತಿ.ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿಯ ನನ್ನವ್ವ ಸಾಂಸ್ಕೃತಿಕ ಕಲಾತಂಡದ ವತಿಯಿಂದ ಮೂವರು ಸಾಧಕರಿಗೆ ಮಯೂರ ವರ್ಮ ಹಾಗೂ ಹತ್ತು ಮಂದಿ ಶಿಕ್ಷಕರಿಗೆ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರಾಜ್ಯ ಮಟ್ಟದ ಶಿಕ್ಷಕರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಮಂಗಳವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಅವರಿಗೆ ಮಯೂರ ವರ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಹುಣಸೂರು ತಾಲೂಕಿನ ನೇರಳಕುಪ್ಪೆ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಕುಮಾರಸ್ವಾಮಿ, ಟಿ.ನರಸೀಪುರ ತಾಲೂಕಿನ ಗರ್ಗೇಶ್ವರಿ ಹಿಲಾಲ್ ಸಂಯುಕ್ತ ಪದವಿಪೂರ್ವ ಕಾಲೇಜಿನ ಕನ್ನಡ ಭಾಷಾ ಶಿಕ್ಷಕ ಮು.ನಾ.ರಮೇಶ್, ಕೇತುಪುರ ಸರ್ಕಾರಿ ಪ್ರೌಢಶಾಲೆಯ ಸಮಾಜ ವಿಜ್ಞಾನ ಶಿಕ್ಷಕ ಉತ್ತಂಬಳ್ಳಿ ನಾಗರಾಜು, ಮಳವಳ್ಳಿ ತಾಲೂಕಿನ ಚಿಕ್ಕಬಾಗಿಲು ಸರ್ಕಾರಿ ಪ್ರೌಢಶಾಲೆ ಗಣಿತ ಶಿಕ್ಷಕ ಪ್ರಸನ್ನ, ನಂಜನಗೂಡು ತಾ. ಶ್ರೀನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಸಿ.ಕಲ್ಪನಾ, ಪಿರಿಯಾಪಟ್ಟಣ ತಾಲೂಕಿನ ಇಟ್ಟಾಗಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಆರ್.ಎ.ಜಾವಿದ್ ಪಾಷ, ಯಳಂದೂರು ತಾಲೂಕಿನ ಯರಗಂಬಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕನ್ನಡ ಶಿಕ್ಷಕ ಆರ್.ರವಿಕುಮಾರ್, ಎಚ್.ಡಿ.ಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಮಾದರಿ ಶಾಲೆಯ ಸಹ ಶಿಕ್ಷಕಿ ವಿಲ್ಮಾ ಒಲಿವೇರಾ, ಮದ್ದೂರು ತಾಲೂಕಿನ ಗೆಜ್ಜಲಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಬಿ.ಚಂದ್ರಮ್ಮ ಹಾಗೂ ಮೈಸೂರು ತಾಲೂಕಿನ ದೇವಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕಿ ಟಿ.ಎಸ್.ಪ್ರೇಮಲತಾ ಅವರಿಗೆ ಡಿಡಿಪಿಐ ಎಸ್.ಟಿ.ಜವರೇಗೌಡ ಅವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರಾಜ್ಯ ಮಟ್ಟದ 'ಶಿಕ್ಷಕ ರತ್ನ' ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ರಂಗನಟ, ನಿರ್ದೇಶಕ ಹಾಗೂ ಸಂಘಟಕ ರಾಜಶೇಖರ ಕದಂಬ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರಾಭಿವೃದ್ಧಿಯಲ್ಲಿ ಶಿಕ್ಷರ ಪಾತ್ರ ಕುರಿತು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಎನ್.ವಿ. ರಮೇಶ್ ಉಪನ್ಯಾಸ ನೀಡಿದರು. ರಾಷ್ಟ್ರಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ನ. ಗಂಗಾಧರಪ್ಪ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಜಿಲ್ಲೆಗಳಿಂದ ಬಂದಿದ್ದ ಹಲವಾರು ಕವಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ನನ್ನವ್ವ ಸಾಂಸ್ಕೃತಿಕ ಕಲಾತಂಡದ ಅಧ್ಯಕ್ಷ ಹಾಗೂ ಸಾಹಿತಿಯೂ ಆದ ಯಾಚೇನಹಳ್ಳಿ ಮಹದೇವ, ಕೆಎಸ್ ಆರ್‌ಟಿಸಿ ನಿವೃತ್ತ ನೌಕರ ಡಿ.ಪುಟ್ಟಸ್ವಾಮಿ, ಬಿ.ಪ್ರಿಯಾ ಕಾರ್ತಿಕೇಯನ್, ಹೂಟಗಳ್ಳಿ ಎಂ.ಪಿ.ಗೀತಾ ಮತ್ತಿತರರು ಉಪಸ್ಥಿತರಿದ್ದರು.

## ನಾಳೆ ಶ್ರೀ ಹೊಸಮಠದ ನಿರಂಜನ ಪಟ್ಟಾಧಿಕಾರ ಮಹೋತ್ಸವ
# ಚಿದಾನಂದ ಸ್ವಾಮೀಜಿಯವರ ಅಮೃತ ಮಹೋತ್ಸವ

ಮೈಸೂರು,ಸೆ.2(ಜಿಎ)–ಶ್ರೀ ಹೊಸಮಠದ ನಿರಂಜನ ಪಟ್ಟಾಧಿಕಾರ ಮಹೋತ್ಸವ, ಚಿದಾನಂದ ಸ್ವಾಮೀಜಿಯವರ ಅಮೃತ ಮಹೋತ್ಸವದ ಗುರುವಂದನೆ, ಚಿದ್ಬೆಳಕು ಗ್ರಂಥ ಮತ್ತು ಚಿದಾಮೃತ ಚಿತ್ರಸಂಪುಟ ಬಿಡುಗಡೆ ಕಾರ್ಯಕ್ರಮ ಸೆ.4ರ ಬೆಳಗ್ಗೆ 10.30ಕ್ಕೆ ಶ್ರೀ ಹೊಸಮಠದ ಆವರಣದಲ್ಲಿ ನಡೆಯಲಿದೆ ಎಂದು ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಚಿದಾನಂದ ಸ್ವಾಮೀಜಿಯವರಿಗೆ ಗುರುವಂದನೆ ಸಲ್ಲಿಸಲಾಗುವುದು. ಗುರು ಮಲ್ಲೇಶ್ವರ ಮಹಾಸಂಸ್ಥಾನದ ಮಹಾಂತ ಸ್ವಾಮೀಜಿ, ಸೂರ್ಯಸಿಂಹಾಸನ ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಇನ್ನಿತರರು ಆಶೀರ್ವಚನ ನೀಡಲಿದ್ದಾರೆ.

ಕಾರ್ಯಕ್ರಮವನ್ನು ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಸಚಿವ ವಿ.ಸೋಮಣ್ಣ ಉದ್ಘಾಟಿಸುವರು. ಗುರುಮಹಾಂತ ಸ್ವಾಮೀಜಿ ತ್ರೈಮಾಸಿಕ ಸಂಚಿಕೆ ಬಿಡುಗಡೆಗೊಳಿಸುವರು. ಈ ವೇಳೆ 'ಚಿದ್ಬೆಳಕು' ಗ್ರಂಥವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು 'ಚಿದಾಮೃತ' ಚಿತ್ರ ಸಂಪುಟವನ್ನು ಶಾಸಕ ಜಿ.ಟಿ.ದೇವೇಗೌಡ ಲೋಕಾರ್ಪಣೆಗೊಳಿಸುವರು. ಶಾಸಕ ಟಿ.ಎಸ್.ಶ್ರೀವತ್ಸ ಗುರುವಂದನಾ ನುಡಿ ಆಡಲಿದ್ದು, ಶಾಸಕರಾದ ಹೆಚ್.ಎಂ. ಗಣೇಶ್ ಪ್ರಸಾದ್, ಕೆ.ಹರೀಶ್‌ಗೌಡ ಇನ್ನಿತರರು ಅತಿಥಿಗಳಾಗಿರಲಿದ್ದಾರೆ.

ಈ ವೇಳೆ ಎಂ.ಬಿ.ರಾಕೇಶ್ ಅವರಿಗೆ ವಿರಕ್ತಾಶ್ರಮಾಧಿಕಾರಿ, ಷಟ್ಸ್ಥಳ ಬ್ರಹ್ಮೋಪದೇಶ ನಡೆಯಲಿದೆ. 21ನೇ ಪೀಠಾಧಿಕಾರಿಯಾದ ಚಿದಾನಂದ ಸ್ವಾಮೀಜಿ 1982ರಲ್ಲಿ ಶ್ರೀಮಠದ ಉತ್ತರಾಧಿಕಾರಿಗಳಾಗಿ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದ್ದಾರೆಂದರು. ಗೋಷ್ಠಿಯಲ್ಲಿ ಹಿನಕಲ್ ಬಸವರಾಜು, ಮಹೇಶ್, ನಾಗಭೂಷಣ್ ಇತರರಿದ್ದರು.




ಮೈಸೂರು ವಿಜಯನಗರ 4ನೇ ಹಂತದ ನಾಲ್ವಡಿ ಲಯನ್ಸ್ ಟೀಮ್‌ನಿಂದ 6ನೇ ವರ್ಷದ ಗಣೇಶೋತ್ಸವವನ್ನು ಆಚರಿಸಲಾಯಿತು.

## ಶಾಸಕ ಟಿ.ಎಸ್.ಶ್ರೀವತ್ಸರಿಗೆ ಸನ್ಮಾನ...



ಮೈಸೂರಿನ ಆಲನಹಳ್ಳಿಯಲ್ಲಿರುವ ಶ್ರೀ ಗಣಪತಿ ದೇವಸ್ಥಾನದಲ್ಲಿ ನಡೆದ ಅನ್ನದಾಸೋಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಟಿ.ಎಸ್. ಶ್ರೀವತ್ಸ ಅವರನ್ನು ದೇವಸ್ಥಾನದ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ದೇವಸ್ಥಾನದ ಅಧ್ಯಕ್ಷ ಗುರುಸ್ವಾಮಿ, ವಿನಯ್ ಪಾಂಚಜನ್ಯ, ಮಾಲಯ್ಯ, ಪುಟ್ಟಸ್ವಾಮಿಗೌಡ, ಚೌಡೇಗೌಡ, ಮಧುಸೂದನ್, ಕೀರ್ತಿ ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.2–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ, ಆರ್ಯ ಈಡಿಗ ನೌಕರರ ಸಂಘ, ಆರ್ಯ ಈಡಿಗ ಮಹಿಳಾ ಸಂಘದ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದೆ. ಅರ್ಹ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮೈಸೂರಿನಲ್ಲಿರುವ ಸಂಘದ ಕಚೇರಿಯಲ್ಲಿ ಅರ್ಜಿಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಸೆ.10ರೊಳಗೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ (ಅಂಕಪಟ್ಟಿ, ವಿಳಾಸ ದೃಢೀಕರಣ, 2 ಭಾವಚಿತ್ರ) ಸಲ್ಲಿಸಬೇಕಾಗಿ ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9341916963, 8884094943 ಸಂಪರ್ಕಿಸಬಹುದು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

03.09.2025 ಬುಧವಾರ, ಮಳೆ ನಕ್ಷತ್ರ: ಪುಬ್ಬ 31.08.2025ರಿಂದ 13.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಪಾಲಿಟೆಕ್ನಿಕ್, ಇನ್ನೋವೇಶನ್ ಸೆಲ್ ಮತ್ತು ಅಲ್ಯೂಮ್ನಿ ಅಸೋಸಿಯೇಷನ್ :** ಅಂತರರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ನಿರ್ದೇಶಕ ಎಸ್. ಪುಟ್ಟಬಸಪ್ಪ, ಉಪಸ್ಥಿತರು : ಡಾ. ಆರ್. ದತ್ತಕುಮಾರ್, ಡಾ. ಎಸ್. ಶ್ರೀನಾಥ್, ಡಾ. ವಿ. ವಿಕ್ರಮ್ ಆತ್ರೇಯ, ಡಾ. ರಂಜಿತ್ ಬಿ. ಗೌಡ, ಡಾ. ಅರ್ಪಿತಾಸ್ವಾಮಿ, ಸ್ಥಳ: ಜೆಎಸ್‌ಎಸ್ ಪಾಲಿಟೆಕ್ನಿಕ್ ಆವರಣ, ಬೆಳಗ್ಗೆ 9ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಸೋಂಕು ಮತ್ತು ಕಣ್ಣಿನಲ್ಲಿ ಮಾಂಸ ಬೆಳವಣಿಗೆ ಶಿಬಿರ–ಕಣ್ಣು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ಸೋರುವುದು, ಕಣ್ಣು ತುರಿಸುವುದು, ಶುಷ್ಕ ನೇತ್ರ, ಆಭರಣ ಮತ್ತು ಸೌಂದರ್ಯವರ್ಧಕಗಳಿಂದ ಆಗಿರುವ ಚರ್ಮದ ಅಲರ್ಜಿ ಮತ್ತು ಚರ್ಮಕ್ಕೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ, ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಪಂಚಮುಖಿ ಗಣಪತಿ ಗೆಳೆಯರ ಬಳಗ :** ಶ್ರೀ ವಿನಾಯಕ ಪೂಜಾ ಮಹೋತ್ಸವ, ಸಂಜೆ 5.30ಕ್ಕೆ ವಾದ್ಯಗೋಷ್ಠಿಯೊಂದಿಗೆ ಬನ್ನಿಮಂಟಪದ ಪ್ರಮುಖ ಬೀದಿಗಳಲ್ಲಿ ಗಣಪತಿಮೂರ್ತಿ ಮೆರವಣಿಗೆ, ನಂತರ ವಿಸರ್ಜನೆ, ಸ್ಥಳ: ಹನುಮಂತನಗರ, ಬನ್ನಿಮಂಟಪ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ಇನ್‌ಸೈಟ್ಸ್ ಟು ಫೋರೆನ್ಸಿಕ್ ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ಡಾ. ಎಂ. ಅರುಣ್, ಡಾ. ಜಿ.ಬಿ. ಅರವಿಂದ್, ಡಾ. ಜಿ.ಜೆ. ಸತೀಶ, ಬಿ.ಎಲ್. ಕಾಂತಾಶ್ರೀ, ಕೆ.ಎಸ್. ಸುಕೃತ, ಎಂ. ಮೇಘನಾ, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಎನ್. ಭಾರತಿ, ಸ್ಥಳ: ಮಹಾವಿದ್ಯಾಲಯ ಆವರಣ, ಬೆಳಗ್ಗೆ 10ಕ್ಕೆ.

■ **ಸಿಎಸ್‌ಬಿ–ಸಿಎಸ್‌ಆರ್‌ಟಿಐ :** ರೇಷ್ಮೆ ಮತ್ತು ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಕೇಂದ್ರ ರೇಷ್ಮೆ ಮಂಡಳಿ ಸದಸ್ಯ ಕಾರ್ಯದರ್ಶಿ ಪಿ. ಶಿವಕುಮಾರ್, ಕೇಂದ್ರ ರೇಷ್ಮೆ ಮಂಡಳಿ ನಿರ್ದೇಶಕ ಡಾ. ಎಸ್. ಮಂಥಿರಾ ಮೂರ್ತಿ, ಜಂಟಿ ಕಾರ್ಯದರ್ಶಿ ಡಾ. ನರೇಂದ್ರ ಬಾಬು, ನಿರ್ದೇಶಕ ಡಾ.ಪಿ. ದೀಪ, ಪದ್ಮನಾಭ ನಾಯಕ್, ಡಾ. ಕೆ.ಎನ್. ಮಧುಸೂದನ್, ಸ್ಥಳ: ಸಿಎಸ್‌ಬಿ–ಸಿಎಸ್‌ಆರ್‌ಟಿಐ ಆವರಣ, ಬೆಳಗ್ಗೆ 10ಕ್ಕೆ.

■ **ಎಜುಕೇಷನಲ್ ಮಲ್ಟಿಮೀಡಿಯಾ ರಿಸರ್ಚ್ ಸೆಂಟರ್ :** ಕೃತಕ ಬುದ್ಧಿಮತ್ತೆ ಕುರಿತು ತರಬೇತಿ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿ : ರಕ್ಷಕ್ ಜೈನ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ :** ದಿವಂಗತ ಡಿ. ದೇವರಾಜ ಅರಸ್ ಅವರ 110ನೇ ಜನ್ಮ ದಿನಾಚರಣೆ ಅಂಗವಾಗಿ ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ ಮತ್ತು ಸಂಸ್ಕೃತಿ ಪೋಷಕ ಡಾ. ಕೆ. ರಘುರಾಂ ವಾಜಪೇಯಿ ಅವರಿಗೆ ಅರಸು ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ. ಅರವಿಂದ ಮಾಲಗತ್ತಿ, ಪ್ರಶಸ್ತಿ ಪ್ರದಾನ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ. ನಾಗೇಶ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪಾಲಿಟೆಕ್ನಿಕ್ :** ಘಟಿಕೋತ್ಸವ ಮತ್ತು ಅಂತರರಾಷ್ಟ್ರೀಯ ತಾಂತ್ರಿಕ ಪ್ರಬಂಧ ಪ್ರಸ್ತುತಿ ಸಮಾರೋಪ, ಉಪಸ್ಥಿತರು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಕೆ. ವಿವೇಕಾನಂದ, ಇನ್ಫೋಸಿಸ್‌ನ ಶ್ರೀಕಂಠ ಗುಪ್ತ, ಸ್ಥಳ: ಸೆಮಿನಾರ್ ಹಾಲ್, ಜೆಎಸ್‌ಎಸ್ ಪಾಲಿಟೆಕ್ನಿಕ್, ಸಂಜೆ 4ಕ್ಕೆ.

■ **ರಂಗ ರತ್ನಾಕರ :** ರಿಚರ್ಡ್ ಲೂಯಿಸ್ ತಂಡ, ಬೆಂಗಳೂರು ಅವರಿಂದ ನಗೆಹಬ್ಬ, ಜನ್ನಿ ತಂಡ ಅವರಿಂದ ರಂಗ ಗೀತೆಗಳ ಗಾಯನ, ಉದ್ಘಾಟನೆ : ಪ್ರಸಾರಾಂಗ ವಿಶ್ರಾಂತ ನಿರ್ದೇಶಕ ಕೆ.ಟಿ. ವೀರಪ್ಪ, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ವಿ. ಸೂರ್ಯನಾರಾಯಣಸ್ವಾಮಿ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕಿರಗಸೂರು ರಾಜಪ್ಪ, ಎಚ್.ಎಸ್. ಗೋವಿಂದೇಗೌಡ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ರಂಗಾಯಣ ಆವರಣ, ಸಂಜೆ 5 ರಿಂದ.

■ **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಮತ್ತು ಕಲ್ಚರ್ :** ಕಲಾ ಸಪ್ತಮಿ ಸಾಪ್ತಾಹಿಕ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಉದ್ಯಮಿ ಡಾ. ಎಂ. ಜಗನ್ನಾಥ ಶೆಣೈ, ಡಾ. ಸಿ.ಜಿ. ನರಸಿಂಹನ್, ವಿದುಷಿ ಸುಕನ್ಯಾ ಮತ್ತು ತಂಡದಿಂದ ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮ, ಸ್ಥಳ: ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣ, ಸಂಜೆ 5.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 64ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗಮಕ ವಾಚನ ಕಾರ್ಯಕ್ರಮ, ಕಾವ್ಯ : ಜೈಮಿನಿ ಭಾರತ, ವಾಚನ : ವಿದುಷಿ ಸತ್ಯ ಲಕ್ಷ್ಮಿ ಪದ್ಮೇಶ್, ವ್ಯಾಖ್ಯಾನ : ವಿದ್ವಾನ್ ಸಿ.ಎಂ. ಸುಬ್ಬಣ್ಣ, ಸಂಜೆ 6.45 ರಿಂದ ವಿದ್ವಾನ್ ಡಾ. ಶೇರ್‌ತಲೈರಂಗನಾಥ ಶರ್ಮಾ ಅವರಿಂದ ಗಾಯನ, ವಿದ್ವಾನ್ ವಿಠ್ಠಲ್ ರಾಮಮೂರ್ತಿ–ಪಿಟೀಲು, ವಿದ್ವಾನ್ ಬೆಂಗಳೂರು ಪ್ರವೀಣ್–ಮೃದಂಗ, ವಿದ್ವಾನ್ ವಾಜಪಲ್ಲಿ ಕೃಷ್ಣಕುಮಾರ್–ಘಟಂ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

**ಕೆ.ಆರ್. ಸಾಗರದಲ್ಲಿಂದು**

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ :** ಪತ್ರಾಗಾರ ಕೂಟ, ಉದ್ಘಾಟನೆ : ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹೆಚ್.ವಿ. ಶಿಲ್ಪಶ್ರೀ, ಮುಖ್ಯ ಅತಿಥಿಗಳು : ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್. ಮಂಜುನಾಥ್, ಪತ್ರಕರ್ತ ಗಣಂಗೂರು ನಂಜೇಗೌಡ, ಸ್ಥಳ : ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು– ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ ಪುಟ್ಟಿ, ಜಯಂತಿ ವಿ. ಭಟ್ ಹಾಗೂ ಹೇಮಾ.ಎನ್., ವ್ಯಾಖ್ಯಾನ–ಡಾ.ಎನ್.ಎಸ್.ತಾರಾನಾಥ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30–ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ಮನೋನಂದನ–ಸೈಕೋಥೆರಪಿ ಎಂದರೇನು–ಸೈಕೋಥೆರಪಿ ಮತ್ತು ಆಪ್ತಸಲಹೆಗೆ ಇರುವ ವ್ಯತ್ಯಾಸ ಹಾಗೂ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಸೈಕೋಥೆರಪಿಯ ಪಾತ್ರ ಕುರಿತು ತಿಳಿಸಿಕೊಡಲಿದ್ದಾರೆ ಮಾನಸಿಕ ರೋಗ ತಜ್ಞರಾದ ಡಾ. ಅಭಿಜಿತ್ ಎಚ್.ಆರ್., 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಅಬ್ದುಲ್ ಹಾಲಿಮ್ ಜಾಫರ್ ಖಾನ್–ಸೀತಾರ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಶಾಂತಲಾ ವಟ್ಟಂ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಿ.ಕೆ.ಜಯರಾಮನ್–ಹಾಡುಗಾರಿಕೆ, 4.00 ಮಹಿಳಾರಂಗ–ಸಾಧನಾ ಶಿಖರ –ಹವ್ಯಾಸಿ ಸೈಕ್ಲಿಸ್ಟ್ ವೀಣಾ ಅಶೋಕ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್.ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಕೆ.ಆರ್.ಪೇಟೆ ತಾಲೂಕು ಅಕ್ಕಿ ಹೆಬ್ಬಾಳು ಹೋಬಳಿ ಬಸವನಹಳ್ಳಿಯ ಬಿ. ಬಸವರಾಜು ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು, ಪದ್ಮಶ್ರೀ ಪುರಸ್ಕೃತರು, ಮೈಸೂರಿನ ಸಿಎಫ್‌ಟಿಆರ್‌ಐನ ನಿವೃತ್ತ ನಿರ್ದೇಶಕರು ಹಾಗೂ ನವದೆಹಲಿಯ ಸಿಎಸ್‌ಐಆರ್ ಇಂಡಿಯಾದ ಪ್ರತಿಷ್ಠಿತ ವಿಜ್ಞಾನಿಗಳೂ ಆದ ಡಾ.ವಿಶ್ವೇಶ್ವರಯ್ಯ ಪ್ರಕಾಶ್ ಅವರೊಂದಿಗಿನ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30–ಕ್ರೀಡಾಲೋಕ, 10.00–ನಾಟಕ–ಗುಚ್ಛ–ಪ್ರಹಸನಗಳ ಸಂಕಲನ

ಮೈಸೂರು ಮಿತ್ರ ಬುಧವಾರ 3 ಸೆಪ್ಟೆಂಬರ್ 2025

# ಮೈಸೂರು ರಾಜವಂಶಸ್ಥರ ಆತಿಥ್ಯ ಸ್ವೀಕರಿಸಿದ ರಾಷ್ಟ್ರಪತಿ

## ಅರಮನೆ ಸೌಂದರ್ಯ, ವೈಭವಕ್ಕೆ ಮಾರುಹೋದ ದ್ರೌಪದಿ ಮುರ್ಮು, ಕುಟುಂಬ ಸದಸ್ಯರು

ಮೈಸೂರು, ಸೆ.2(ಎಂಟಿವೈ)– ಮೈಸೂರು ಅರಮನೆಯ ಸೌಂದರ್ಯ ಮತ್ತು ವೈಭವಕ್ಕೆ ಮಾರುಹೋದ ರಾಷ್ಟ್ರಪತಿ ದ್ರೌಪದಿ ಮುರ್ಮು, ಇಲ್ಲಿನ ಅಪರೂಪದ ಚಿತ್ರಕಲೆ, ರಾಜರ ಕಾಲದಲ್ಲಿ ಬಳಸಲಾಗುತ್ತಿದ್ದ ಪರಿಕರಗಳನ್ನು ಕಣ್ತುಂಬಿಕೊಂಡು ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು

ಎರಡು ದಿನಗಳ ಮೈಸೂರು ಪ್ರವಾಸ ಕೈಗೊಂಡಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ಆಯಿಷ್ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಮಂಗಳವಾರ ಬೆಳಗ್ಗೆ 8.30ಕ್ಕೆ ಜಯಮಾರ್ತಾಂಡ ದ್ವಾರದ ಮೂಲಕ ಅರಮನೆಗೆ ಆಗಮಿಸಿದರು. ಆನೆ ಬಾಗಿಲಿನಿಂದ ಸವಾರಿ ತೊಟ್ಟಿಗೆ ಕಾರಿನಲ್ಲೇ ಆಗಮಿಸಿದ ದ್ರೌಪದಿ ಮುರ್ಮು ಅವರನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಆತ್ಮೀಯವಾಗಿ ಬರಮಾಡಿಕೊಂಡರು.

ಬಳಿಕ ಅರಮನೆಯ ಖಾಸಗಿ ನಿವಾಸದಲ್ಲಿ ವಿಶೇಷ ಆಹ್ವಾನಿತರಿಗಾಗಿ ಮೀಸಲಿರುವ ಡ್ರಾಯಿಂಗ್ ರೂಂನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಅವರ ಮಗಳ ಇತಿಶ್ರೀ ಮುರ್ಮು ಹಾಗೂ ಕುಟುಂಬ ಸದಸ್ಯರಿಗೆ ರಾಜವಂಶಸ್ಥರು ಆಯೋಜಿಸಿದ್ದ ಉಪಾಹಾರ ಕೂಟದಲ್ಲಿ ಭಾಗಿಯಾದರು. ಈ ವೇಳೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಮೊಮ್ಮಗ ಆದ್ಯವೀರ್ ಒಡೆಯರ್ ಉಪಸ್ಥಿತರಿದ್ದರು.

**ಉಪಾಹಾರ ಸವಿದ ರಾಷ್ಟ್ರಪತಿಗಳು:** ಉಪಾಹಾರ ಕೂಟದಲ್ಲಿ ರಾಷ್ಟ್ರಪತಿಗಳಿಗೆ ಇಷ್ಟದ ಆಹಾರ ಪದಾರ್ಥಗಳಿಗೆ ಆದ್ಯತೆ ನೀಡಲಾಗಿತ್ತು. ಎಳನೀರು, ಕಿವಿ ಫ್ರೂಟ್, ಪ್ಲಮ್ ಮತ್ತು ಪರಂಗಿಹಣ್ಣು ಸೇರಿದಂತೆ ವಿವಿಧ ಬಗೆಯ ಫಲಾಹಾರದ ಜೊತೆಗೆ ಸಾಂಪ್ರದಾಯಿಕ ಮೈಸೂರು ಭಕ್ಷ್ಯಗಳಾದ ಮಸಾಲೆ ದೋಸೆ, ಇಡ್ಲಿ–ಸಾಂಬಾರ್, ಚಟ್ನಿ, ಶ್ಯಾವಿಗೆ ಉಪ್ಪಿಟ್ಟು, ಸಬ್ಬಕ್ಕಿ ವಡೆ, ಮೈಸೂರು ಪಾಕ್, ಗೋಧಿ ಹಾಲ್ಬಾಯಿ ಮತ್ತು ಬಾದಾಮ್ ಹಲ್ವಾ ಊಟ ಬಡಿಸಲಾಯಿತು.

ಅಲ್ಲದೆ, ರಾಗಿ ಮತ್ತು ಗೋಧಿ ಬಿಸ್ಕೆಟ್, ಚಹಾ ಮತ್ತು ಕಾಫಿಯನ್ನು ವ್ಯವಸ್ಥೆ ಮಾಡಲಾಗಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು, ಅವರ ಮಗಳು ಇತಿಶ್ರೀ ಮುರ್ಮು ಹಾಗೂ ರಾಜವಂಶಸ್ಥರು ಎಲ್ಲರೂ ಬೆಳ್ಳಿ ತಟ್ಟೆಯಲ್ಲೇ ಉಪಾಹಾರ ಸೇವಿಸಿದರು.

**ಅರಮನೆ ಅಂದಕ್ಕೆ ಮಾರುಹೋದರು:** ಉಪಾಹಾರ ಸ್ವೀಕರಿಸಿದ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಪ್ರಮೋದಾದೇವಿ ಒಡೆಯರ್ ಅರಮನೆ ವೀಕ್ಷಣೆಗೆ ಕರೆದೊಯ್ದರು. ಮೊದಲು ದರ್ಬಾರ್ ಹಾಲ್ ವೀಕ್ಷಿಸಿದರು. ಅಲ್ಲದೆ, ಅರಮನೆಯ ವಿವಿಧೆಡೆ ಪ್ರದರ್ಶನಕ್ಕಿಟ್ಟಿರುವ ಅಪರೂಪದ ಚಿತ್ರಕಲೆ, ವಿವಿಧ ಪರಿಕರಗಳನ್ನು ವೀಕ್ಷಿಸಿ ಸಂಭ್ರಮಿಸಿದರು. ಈ ವೇಳೆ ರಾಷ್ಟ್ರಪತಿಗಳಿಗೆ ಪ್ರಮೋದಾದೇವಿ ಅವರು ಚಿತ್ರಕಲೆ ಬಗ್ಗೆ ವಿವರಣೆ ನೀಡಿದರು. ಬಳಿಕ ಬೆಳಗ್ಗೆ 10.30ರ ವೇಳೆಗೆ ಅರಮನೆಯಿಂದ ರಾಷ್ಟ್ರಪತಿಗಳು ನಿರ್ಗಮಿಸಿದರು.



ಮೈಸೂರು ಅರಮನೆಗೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅರಮನೆಯ ಸವಾರಿ ತೊಟ್ಟಿ ಬಳಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಬರಮಾಡಿಕೊಂಡರು.

> ಗೌರವಾನ್ವಿತ ರಾಷ್ಟ್ರಪತಿಗಳಿಗೆ ಆತಿಥ್ಯ ನೀಡುವುದು ನಮಗೆ ಒಂದು ಸದವಕಾಶ ಮಾತ್ರವಲ್ಲ, ಸಂತಸದ ಕ್ಷಣವಾಗಿತ್ತು.
> – ಪ್ರಮೋದಾದೇವಿ ಒಡೆಯರ್

### ರಾಷ್ಟ್ರಪತಿಗಳಿಗೆ ಧನ್ಯವಾದ ತಿಳಿಸಿದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್

ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ಮತ್ತು ರಾಜ್ಯದ ರಾಜ್ಯಪಾಲರನ್ನು ನಮ್ಮ ನಿವಾಸದಲ್ಲಿ ಸ್ವಾಗತಿಸುವುದು, ಅವರಿಗೆ ಆತಿಥ್ಯ ನೀಡುವುದು ನನಗೆ ಅತೀವ ಸಂತೋಷ ಮತ್ತು ಹೆಮ್ಮೆ ವಿಷಯ. ನನ್ನ ಆಹ್ವಾನವನ್ನು ಸ್ವೀಕರಿಸಿ ಆಗಮಿಸಿದ್ದಕ್ಕಾಗಿ ನಾನು ಅವರಿಗೆ ಹೃತ್ಪೂರ್ವಕ ಧನ್ಯವಾದ ಹೇಳಬಯಸುತ್ತೇನೆ. ಈ ಹೆಮ್ಮೆ ಮತ್ತು ಗೌರವದ ಕ್ಷಣಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನನಗೆ ಸಂತೋಷವಾಗಿದೆ.



ಅರಮನೆಯ ಖಾಸಗಿ ನಿವಾಸದ ಪಕ್ಕದಲ್ಲಿನ ಪ್ರಾಣಿ ಪ್ರಸಾದನ ಮುಂದೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಅವರ ಮಗಳು ಇತಿಶ್ರೀ ಮುರ್ಮು, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಆಧ್ಯವೀರ್ ನರಸಿಂಹರಾಜ ಒಡೆಯರ್ ಅವರನ್ನು ಕಾಣಬಹುದು.



ಅರಮನೆಯ ಡ್ರಾಯಿಂಗ್ ರೂಂನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಉಪಾಹಾರ ಕೂಟಕ್ಕೆ ಮಾಡಿದ್ದಂತಹ ವಿಶೇಷ ಆಸನ ವ್ಯವಸ್ಥೆ

## ರೇಣುಕಾಸ್ವಾಮಿ ಕೊಲೆ ಪ್ರಕರಣ: ಪವಿತ್ರಾ ಗೌಡ ಹೊಸ ಜಾಮೀನು ಅರ್ಜಿ ಮತ್ತೆ ವಜಾ!

ಬೆಂಗಳೂರು, ಸೆ.2– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮತ್ತೆ ಜೈಲುಪಾಲಾಗಿರುವ ಎ1 ಆರೋಪಿ ಪವಿತ್ರಾ ಗೌಡ ಜಾಮೀನು ಅರ್ಜಿಯನ್ನು 57ನೇ ಸೆಷನ್ಸ್ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.



ಚಿತ್ರದುರ್ಗದ ರೇಣುಕಾಸ್ವಾಮಿ, ಪವಿತ್ರಾ ಗೌಡ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿದನೆಂಬ ಕಾರಣಕ್ಕಾಗಿ, ನಟ ದರ್ಶನ್ ಹಾಗೂ ಅವರ ಗ್ಯಾಂಗ್ ಅಪಹರಿಸಿ ಬೆಂಗಳೂರಿಗೆ ತಂದು, ಪಟ್ಟಣಗೆರೆಯಲ್ಲಿನ ಶೆಡ್‌ನಲ್ಲಿ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದರು. ಈ ಪ್ರಕರಣದಲ್ಲಿ ಪವಿತ್ರಾ ಗೌಡ ಪ್ರಮುಖ ಆರೋಪಿಯಾಗಿದ್ದಾರೆ. ಇತ್ತೀಚೆಗೆ ನಟ ದರ್ಶನ್ ಆಪ್ತರಾದ ಪವಿತ್ರಾ ಗೌಡ ಜಾಮೀನು ಕೋರಿ ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಅವರ ಪರ ವಾದಿಸಿದ ವಕೀಲ ಬಾಲನ್, ಸುಪ್ರೀಂಕೋರ್ಟ್ ಈ ಹಿಂದೆ ನೀಡಿದ್ದ ಆದೇಶವನ್ನು ಪ್ರಶ್ನಿಸದಿದ್ದರೂ ಚಾರ್ಜ್‌ಶೀಟ್ ಸಲ್ಲಿಕೆಯಲ್ಲಿ ತಾಂತ್ರಿಕ ದೋಷಗಳಿವೆ. ಸಿಆರ್‌ಪಿಸಿ ಅಡಿಯಲ್ಲಿ ಚಾರ್ಜ್‌ಶೀಟ್ ಸಲ್ಲಿಸದೆ ಬಿಎನ್‌ಎಸ್‌ಎಸ್ ಅಡಿಯಲ್ಲಿ ಚಾರ್ಜ್‌ಶೀಟ್ ಸಲ್ಲಿಸಿರುವುದರಿಂದ ಕಾನೂನು ಪ್ರಕಾರ ಅಮಾನ್ಯವಾಗಿದೆ ಹೀಗಾಗಿ ಪವಿತ್ರಾಗೌಡ ಅವರಿಗೆ ಜಾಮೀನು ನೀಡಬೇಕು ಎಂದು ವಾದಿಸಿದರು.

ಆರೋಪಿ ಪರ ವಕೀಲರ ವಾದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರಾಸಿಕ್ಯೂಷನ್ ವಕೀಲ ಸಚಿನ್, ಜಾಮೀನು ನೀಡದಂತೆ ನ್ಯಾಯಾಲಯಕ್ಕೆ ಮನವಿ ಮಾಡಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದ್ದಾರೆ. ಈ ಹಿಂದೆ ಕರ್ನಾಟಕ ಹೈಕೋರ್ಟ್ ಎಲ್ಲಾ ಆರೋಪಿಗಳಿಗೆ ನೀಡಿದ್ದ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. ಕೂಡಲೇ ಅರೆಸ್ಟ್ ಮಾಡುವಂತೆ ಸೂಚಿಸಿತ್ತು. ತದನಂತರ ಆಗಸ್ಟ್ 14 ರಿಂದ ಪವಿತ್ರಾ ಗೌಡ ಮತ್ತೆ ಜೈಲು ಸೇರಿದ್ದಾರೆ.

### ಇತಿಹಾಸ ಪುಟ ಸೇರಿದ ಬಿಬಿಎಂಪಿ

## ಐದು ಮಹಾನಗರ ಪಾಲಿಕೆಗಳಾಗಿ ವಿಂಗಡಿಸಿ ರಾಜ್ಯ ಸರ್ಕಾರದಿಂದ ಅಧಿಸೂಚನೆ!

ಬೆಂಗಳೂರು, ಸೆ.2– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಇನ್ನು ಇತಿಹಾಸದ ಪುಟ ಸೇರಿದ್ದು, ಬೆಂಗಳೂರಿನ ಆಡಳಿತ ಸುಧಾರಣೆಗಾಗಿ ರಾಜ್ಯ ಸರ್ಕಾರ ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ಐದು ಮಹಾನಗರ ಪಾಲಿಕೆಗಳನ್ನಾಗಿ ರಚನೆ ಮಾಡಿ ಮಂಗಳವಾರ ಅಧಿಸೂಚನೆ ಹೊರಡಿಸಿದೆ.



ರಾಜ್ಯ ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಅಂಗೀಕರಿಸಲಾದ 2024ರ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಡಿಯಲ್ಲಿ ಬಿಬಿಎಂಪಿಯನ್ನು ಐದು ಮಹಾನಗರ ಪಾಲಿಕೆಗಳಾಗಿ ರಚನೆ ಮಾಡಲಾಗಿದೆ.

ಈ ಕ್ರಮವು ಬೆಂಗಳೂರು ಪಶ್ಚಿಮ ನಗರ ಮಹಾನಗರ ಪಾಲಿಕೆ, ಬೆಂಗಳೂರು ದಕ್ಷಿಣ ಮಹಾನಗರ ಪಾಲಿಕೆ, ಬೆಂಗಳೂರು ಉತ್ತರ ಮಹಾನಗರ ಪಾಲಿಕೆ, ಬೆಂಗಳೂರು ಪೂರ್ವ ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಕೇಂದ್ರ ಮಹಾನಗರ ಪಾಲಿಕೆಗಳ ರಚನೆಗೆ ದಾರಿ ಮಾಡಿಕೊಡುತ್ತದೆ. ಅಧಿಸೂಚನೆಯಲ್ಲಿ ಐದು ನಿಗಮಗಳ ಗಡಿಗಳನ್ನು ಸಹ ನಿಗದಿಪಡಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಅಡಿಯಲ್ಲಿ ಹೊಸದಾಗಿ ರಚನೆಯಾದ ಮಹಾನಗರ ಪಾಲಿಕೆಗಳಿಗೆ ವ್ಯಾಪಕ ಆಡಳಿತಾತ್ಮಕ ಅನುಭವ ಹೊಂದಿರುವ ಹಿರಿಯ ಅಧಿಕಾರಿಗಳನ್ನು ಆಯುಕ್ತರನ್ನಾಗಿ ನೇಮಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ತಿಳಿಸಿದ್ದರು. ನಾವು ಈ ಐದು ಮಹಾನಗರ ಪಾಲಿಕೆಗಳಿಗೆ ಅಧಿಕಾರಿಗಳ ನೇಮಕಾತಿಯ ಬಗ್ಗೆ ಚರ್ಚಿಸಿದ್ದೇವೆ ಮತ್ತು ಈಗಾಗಲೇ ಸ್ಥಳೀಯವಾಗಿ ಸೇವೆ ಸಲ್ಲಿಸುತ್ತಿರುವವರನ್ನು ನೇಮಿಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಜಿಬಿಎಗೆ ಮುಖ್ಯಮಂತ್ರಿಗಳು ಪದನಿಮಿತ್ತ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದು, ಬೆಂಗಳೂರು ಅಭಿವೃದ್ಧಿ ಸಚಿವರು ಪದನಿಮಿತ್ತ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ.

### ಜೈಲು ಪಾಲಾಗಿರುವ ನಟಿ ರನ್ಯಾರಾವ್‌ಗೆ ಬಿಗ್ ಶಾಕ್

## ಚಿನ್ನ ಕಳ್ಳಸಾಗಣೆ ಕೇಸ್‌ನಲ್ಲಿ 102 ಕೋಟಿ ದಂಡ ಕಟ್ಟುವಂತೆ ಡಿಆರ್‌ಐ ನೋಟಿಸ್

ಬೆಂಗಳೂರು, ಸೆ.2– ಅಕ್ರಮ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ನಟಿ ರನ್ಯಾರಾವ್‌ಗೆ ಇದೀಗ ಬಿಗ್ ಶಾಕ್ ಎದುರಾಗಿದ್ದು, 102.55 ಕೋಟಿ ರೂ ದಂಡ ಪಾವತಿಸುವಂತೆ ಆದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ನೋಟಿಸ್ ನೀಡಿದ್ದಾರೆ.



ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಕ್ರಮವಾಗಿ ಚಿನ್ನ ಕಳ್ಳಸಾಗಣೆ ಮಾಡಿದ್ದ ಹಿನ್ನೆಲೆಯಲ್ಲಿ ಕನ್ನಡದ ನಟಿ ರನ್ಯಾರಾವ್‌ರನ್ನು ಪೊಲೀಸರು ಬಂಧಿಸಿದ್ದರು. ಈ ವೇಳೆ ಡಿಆರ್‌ಐ ಅಧಿಕಾರಿಗಳು ರನ್ಯಾರಾವ್ ಬಳಿ 14.8 ಕೆಜಿ ಚಿನ್ನವನ್ನು ವಶಪಡಿಸಿಕೊಂಡಿದ್ದರು. DRI ತನಿಖೆಯಲ್ಲಿ, ರನ್ಯಾ ರಾವ್ ಸುಮಾರು 15 ದಿನಗಳಲ್ಲಿ 4 ಬಾರಿ ದುಬೈಗೆ ಹೋಗಿ ಚಿನ್ನ ಕಳ್ಳಸಾಗಣೆ ಮಾಡಿದ್ದರು ಎಂದು ಬಹಿರಂಗಗೊಂಡಿತ್ತು.

ನಟಿ ರನ್ಯಾ ರಾವ್ ಅವರಿಗೆ ಕಾಫಿಪೋಸಾ ಅಡಿಯಲ್ಲಿ ಒಂದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದ್ದು, ಜಾಮೀನು ಪಡೆಯುವ ಅವಕಾಶವೇ ಇಲ್ಲದಂತಾಗಿದೆ. ಇನ್ನು ರನ್ಯಾ ವಿರುದ್ಧ ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯನ್ನು (COFEPOSA) ಜಾರಿ ಮಾಡಲಾಗಿದ್ದು, ಈ ವಿಷಯವನ್ನು ನಿರ್ವಹಿಸುವ ಸಲಹಾ ಮಂಡಳಿಯು ಇತ್ತೀಚೆಗೆ ರನ್ಯಾ ರಾವ್‌ಗೆ ಬಂಧನದ ಸಂಪೂರ್ಣ ಅವಧಿಯಲ್ಲಿ ಜಾಮೀನು ಸಿಗುವುದಿಲ್ಲ ಎನ್ನಲಾಗಿದೆ.

## ಹತ್ಯೆಗೀಡಾದವರ ಸಮಾಧಿ ತೋರಿಸುತ್ತೇವೆ

### ಧರ್ಮಸ್ಥಳ ಗ್ರಾಮಸ್ಥರಿಂದ ಎಸ್‌ಐಟಿಗೆ ಪತ್ರ

**ಮಂಗಳೂರು:** ಧರ್ಮಸ್ಥಳ ಪ್ರಕರಣ ಮತ್ತೊಂದು ತಿರುವು ಪಡೆದುಕೊಳ್ಳುತ್ತಿದೆ. ಹತ್ಯೆಗೀಡಾದವರ ಸಮಾಧಿ ತೋರಿಸಲು ಸಿದ್ಧ ಎಂದು ಧರ್ಮಸ್ಥಳ ಗ್ರಾಮಸ್ಥರ ಗುಂಪೊಂದು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳಕ್ಕೆ ಪತ್ರ ಬರೆದಿದೆ.

ಗ್ರಾಮಸ್ಥರ ಪರವಾಗಿ ಧರ್ಮಸ್ಥಳ ನಿವಾಸಿ ತುಕಾರಾಮ ಗೌಡ, ಎಸ್‌ಐಟಿಗೆ ಪತ್ರ ಬರೆದಿದ್ದಾರೆ. ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದು, ನಾವು ಭಯದಲ್ಲಿ ಬದುಕುವಂತಾಗಿದೆ. ಆದರೆ, ನಿಷ್ಪಕ್ಷಪಾತ ಮತ್ತು ಪಾರದರ್ಶಕ ತನಿಖೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಎಸ್‌ಐಟಿ ರಚಿಸಿರುವುದು ನಮ್ಮ ವಿಶ್ವಾಸ ಹೆಚ್ಚಾಗುವಂತೆ ಮಾಡಿದೆ. ಮಾಧ್ಯಮಗಳಲ್ಲಿ ತೋರಿಸಲಾಗಿರುವ ವ್ಯಕ್ತಿಯನ್ನು ನಾವು ಗುರ್ತಿಸಿದ್ದೇವೆ. ಆತ ವಿವಿಧ ಸ್ಥಳಗಳಿಗೆ ಶವಗಳನ್ನು ಸಾಗಿಸುತ್ತಿರುವುದು ಹಾಗೂ ಹೂಳುತ್ತಿರುವುದನ್ನು ನೋಡಿದ್ದೇವೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ಕಾರ್ಯಗಳು ರಹಸ್ಯವಾಗಿ ನಡೆದರೂ, ಹಳ್ಳಿ ಪರಿಸರದಲ್ಲಿ ಈ ವಿಷಯಗಳು ಬಹಿರಂಗವಾಗುವುದು ಸಾಮಾನ್ಯ. ಅಸ್ಥಿಪಂಜರಗಳನ್ನು ಹೂಳಿರುವುದಾಗಿ ದೂರು–ಸಾಕ್ಷಿದಾರ ವ್ಯಕ್ತಿ ಹೇಳಿದ್ದ. ಆದರೆ, ನಂತರ ಹೇಳಿಕೆಯನ್ನು ಹಿಂತೆಗೆದುಕೊಂಡಿದ್ದಾನೆಂದು ಮಾಧ್ಯಮಗಳು ವರದಿ ಮಾಡಿದವು. ಆತ ತನ್ನ ಹೇಳಿಕೆಯನ್ನೇಕೆ ಹಿಂತೆಗೆದುಕೊಂಡ ಎಂಬುದು ಗೊಂದಲ ಸೃಷ್ಟಿಸುತ್ತಿದೆ.

ಆ ವ್ಯಕ್ತಿ ಜನಸಂಚಾರ ಕಡಿಮೆ ಇರುವ ಜಾಗಗಳನ್ನು ಆರಿಸಿಕೊಂಡು ಶವಗಳನ್ನು ಹೂಳುತ್ತಿದ್ದ. ಅವನು ಹೇಳಿದ ಸ್ಥಳಗಳಿಗೆ ಹೋಗಿ ಶೋಧ ಕಾರ್ಯ ನಡೆಸಲು ಎಸ್‌ಐಟಿಗೆ ನಾವು ಸಹಕರಿಸುತ್ತೇವೆ. ಸಮಾಧಿ ಮಾಡಿದ ಸ್ಥಳಗಳನ್ನು ಎಸ್‌ಐಟಿಗೆ ತೋರಿಸಲು ನಾವು ಸಿದ್ಧರಿದ್ದೇವೆ. ಸತ್ಯ ಮತ್ತು ನ್ಯಾಯಕ್ಕಾಗಿ ಎಸ್‌ಐಟಿಗೆ ಸಂಪೂರ್ಣ ಸಹಕಾರ ನೀಡಲು ಸಿದ್ಧರಿದ್ದೇವೆಂದು ಪತ್ರದಲ್ಲಿ ತಿಳಿಸಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ ಪುರೋಹಿತರ್ರೇ, ನನ್ನ ಗಂಡ ಈ ಪಾಟಿ ಕುಡಿದು ಸದಾ ಜಗಳ ಆಡ್ತಿರ್ತಾನೆ. ನೀವು ಸರಿಯಾಗಿ ಜಾತಕ ನೋಡಿರಲಿಲ್ವಾ?

ಪುರೋಹಿತ : ಜಾತಕ ನೋಡಿ ಅವರಿಗೆ ಕುಜ ದೋಷ ಇದೆ ಅಂತ ಹೇಳಿದ್ನಲ್ಲ.

ಹೆಂಡತಿ : ಕುಜ ದೋಷ ಅಂದ್ರೆ?

ಪುರೋಹಿತ : ಕುಡಿದು ಜಗಳ ಆಡೋ ದೋಷ...

ಮೈಸೂರು ಮಿತ್ರ

ಬುಧವಾರ, 3 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ......

ನಮಗೆ ಗೌರವ ಕೊಡದವರ ಬಗ್ಗೆ ಯೋಚಿಸುತ್ತಾ ಕಾಲ ಕಳೆಯುವಷ್ಟು ಬದುಕು ದೊಡ್ಡದಲ್ಲ. ಅದೇ ಸಮಯವನ್ನು ನಮ್ಮನ್ನು ಪ್ರೀತಿಸುವವರೊಂದಿಗೆ ಕಳೆದು ನಿರಾಳರಾಗೋಣ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಜ್ಜಿ ಇಲ್ಲದ ಮನೆ
ಮಜ್ಜಿಗೆ ಇಲ್ಲದ ಊಟ

## ನಿಮ್ಮ ಪತ್ರಗಳು

### ಖಾಲಿ ನಿವೇಶನಗಳ ಸದುಪಯೋಗ ಮಾಡಿ

ಮಾನ್ಯರೆ,

ಮೈಸೂರು ನಗರದ ಕೇಂದ್ರ ಭಾಗದಲ್ಲಿ ಮತ್ತು ಬಡಾವಣೆಗಳಲ್ಲಿ ಹಲವಾರು ಖಾಸಗಿ, ಸರ್ಕಾರಿ ನಿವೇಶನಗಳು ಖಾಲಿ ಇದ್ದು, ಅವುಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಬಿಸಾಡುವ ಅಥವಾ ಸಾರ್ವಜನಿಕರು ಹೇಸಿಗೆ ಮಾಡುವ ಅಥವಾ ಹಾವು, ಚೇಳುಗಳ ಆವಾಸ ಸ್ಥಾನವಾಗಿದ್ದು, ಅವುಗಳ ಅಕ್ಕಪಕ್ಕದಲ್ಲಿ ವಾಸಿಸುವ ಜನರು ಆತಂಕದಲ್ಲಿ ಬದುಕು ನಡೆಸುತ್ತಿರುವುದು ಸರ್ವ ವೇದ್ಯ. ಖಾಸಗಿ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಅವುಗಳ ಮಾಲೀಕರಿಗೆ ಹಲವಾರು ಕಾರಣಗಳಿರಬಹುದು ಮತ್ತು ಸರ್ಕಾರಿ ಸೌಮ್ಯದಲ್ಲಿರುವ ಖಾಲಿ ನಿವೇಶನಗಳ ಬಗ್ಗೆ ಏನು ಹೇಳಿದರೂ ಸಾಲದು. ಈ ಖಾಲಿ ನಿವೇಶನಗಳನ್ನು ಸದುಪಯೋಗಗೊಳಿಸಲು ಸಲಹೆಗಳನ್ನು ನೀಡಲಾಗಿದೆ.

1. **ಖಾಲಿ ಖಾಸಗಿ ನಿವೇಶನಗಳು:** ವಿವಿಧ ಬಡಾವಣೆಗಳಲ್ಲಿರುವ ನಿವಾಸಿಗಳು ಅವರ ಮನೆಯ ಅಕ್ಕಪಕ್ಕದಲ್ಲಿ ಖಾಲಿ ನಿವೇಶನಗಳಿದ್ದರೆ, ಅವುಗಳಿಂದ ಆತಂಕ ಉಂಟಾಗುತ್ತಿದ್ದರೆ, ಅಂತಹ ನಿವೇಶನಗಳ ಮಾಲೀಕರನ್ನು ಸಂಪರ್ಕಿಸಿ, ಅವರಿಂದ ಅನುಮತಿ ಪಡೆದು ಆ ನಿವೇಶನಕ್ಕೆ ಬೇಲಿ ಹಾಕಿಸಿ ಅಲ್ಲೊಂದು ಪುಟ್ಟ ತೋಟವನ್ನು ನಿರ್ಮಿಸಿ, ತಮಗೆ ಬೇಕಾದ ಹೂವು, ಟೊಮ್ಯಾಟೊ ಹಣ್ಣು, ಸೊಪ್ಪು ಸದೆ, ಕಾಯಿಪಲ್ಯೆ ತರಕಾರಿ ಮುಂತಾದ ದಿನ ನಿತ್ಯದ ಸಾವಯವ ಅಗತ್ಯಗಳನ್ನು ಬೆಳೆದುಕೊಳ್ಳಿ, ಮತ್ತು ಆ ಮಾಲೀಕರಿಗೆ, ಅವರಿಗೆ ಬೇಕಾದಾಗ ನಿವೇಶನವನ್ನು ಬಿಟ್ಟುಕೊಡುವುದಾಗಿ ಮತ್ತು ಆ ಜಾಗದಲ್ಲಿ ಮರಗಳಾಗುವ ಪ್ರಭೇದಗಳನ್ನು ನೆಡುವುದಿಲ್ಲ ಎಂದು ಒಂದು ಮುಚ್ಚಳಿಕೆ ಬರೆದುಕೊಡಿ. ಜೊತೆಗೆ ಅದೇ ನಿವೇಶನದ ಸ್ವಲ್ಪ ಜಾಗದಲ್ಲಿ, ನಿಮ್ಮ ಕಾರುಗಳು, ಸ್ಕೂಟರ್ ಮುಂತಾದ ವಾಹನಗಳನ್ನು ಮನೆ ಮುಂದಿನ ರಸ್ತೆಯಲ್ಲಿ ನಿಲ್ಲಿಸಿಕೊಳ್ಳುವ ಬದಲು ಪಕ್ಕದ ನಿವೇಶನದಲ್ಲೇ ಅನುಮತಿ ಕೋರಿ, ನಿಲ್ಲಿಸಿಕೊಂಡು, ಸದುಪಯೋಗ ಪಡೆದುಕೊಳ್ಳಿ. ಅದಕ್ಕೆ ತಕ್ಕ ಸಂಭಾವನೆ ನಿವೇಶನದಾರರು ಕೇಳಿದರೆ, ನೀಡಿ. ಇದರಿಂದ ನಿವೇಶನದ ಮಾಲೀಕರಿಗೆ ಅವರ ನಿವೇಶನವು ಭದ್ರವಾಗಿದೆ ಎನ್ನುವ ಸಮಾಧಾನವಾದರೆ, ಅಕ್ಕ ಪಕ್ಕದವರಿಗೆ ಹಾವು ಚೇಳುಗಳಿಂದ, ಗಿಡ ಗಂಟಿಗಳ ಹಾವಳಿಯಿಂದ ಆಗುತ್ತಿದ್ದ ಆತಂಕ ಮತ್ತು ಆ ನಿವೇಶನವು ಸಾರ್ವಜನಿಕ ಶೌಚಾಲಯವಾಗಿರುವುದು ಸಂಪೂರ್ಣ ನಿಲ್ಲುತ್ತದೆ. ಜನರು ಬೇಕಾದ ಆರೋಗ್ಯಕರ ಸಾವಯವ ತರಕಾರಿಗಳನ್ನು ಬೆಳೆದುಕೊಳ್ಳುವುದಲ್ಲದೆ ಜೊತೆಗೆ ನಗರವನ್ನು ಸ್ವಚ್ಛ ಹಸಿರುಮಯ ಮಾಡುವ ನಿಟ್ಟಿನಲ್ಲಿ ಭಾಗಿಯಾಗುವ ಸಂತೋಷ ಮತ್ತು ಅವರ ವಾಹನಗಳು ಭದ್ರವಾಗಿರುವ ಸಮಾಧಾನ ಇರುತ್ತವೆ.

2. **ಸ್ವಚ್ಛ ಮೈಸೂರು:** ಈ ಸುಲಭ ಸಾಧ್ಯವಾದ ಆವಿಷ್ಕಾರಿಕ ಸಾರ್ವಜನಿಕರ ಸಹಭಾಗಿತ್ವಕ್ಕೆ ತೋಟಗಾರಿಕೆ ಇಲಾಖೆ, ನಗರ ಪಾಲಿಕೆ, ಎಂಡಿಎ, ತಮ್ಮ ಸಹಾಯ ಹಸ್ತವನ್ನು ನೀಡಿದರೆ ಒಳಿತು. ತೋಟಗಾರಿಕೆ ಇಲಾಖೆಯವರು ಈ ಕಾರ್ಯಕ್ರಮಕ್ಕೆ ಭಾಗಿಯಾಗುವ ನಿವಾಸಿಗಳಿಗೆ ಉತ್ತಮ ತಳಿಗಳ ಬೀಜ, ಸಸಿ ಮತ್ತು ತೋಟಗಾರಿಕೆ ಸಲಹೆಗಳನ್ನು ನೀಡಬಹುದು. ಪಾಲಿಕೆಯ ತ್ಯಾಜ್ಯ ವಸ್ತು ಸಂಸ್ಕಾರ ಘಟಕಗಳಲ್ಲಿ ಉತ್ಪತ್ತಿಯಾಗುವ ಸಾವಯವ ಗೊಬ್ಬರವನ್ನು ಪೌರ ಕಾರ್ಮಿಕರ ಮೂಲಕ ಸಾರ್ವಜನಿಕರಿಗೆ ಬೇಕಾದ ಗೊಬ್ಬರವನ್ನು ಕೊಳ್ಳಲು ಇಚ್ಛೆ ಇರುವವರ ಮನೆ ಬಾಗಿಲಿಗೆ ತಲುಪಿಸುವ ಸಹಾಯ ಮಾಡಬಹುದು. ಮೈಸೂರು ಅಭಿವೃದ್ಧಿ ಪ್ರಾಧಿಕಾರವೂ (ಮುಡಾ) ಕೂಡ ಅಂತಹ ನಿವೇಶನಗಳಿಗೆ ಬೊಂಬಿನ ಬೇಲಿಗಳನ್ನೂ ಹಾಕಲು ಸಹಾಯ ಹಸ್ತ ನೀಡಬಹುದು. ಈ ಆವಿಷ್ಕಾರಿಕ ವಿಧಾನವನ್ನು ಜನರ ಮಾಲೀಕತ್ವ ವಿರುವ ನಿವೇಶನಗಳಿಗಲ್ಲದೆ, ಖಾಲಿ ಕೈಗಾರಿಕಾ ನಿವೇಶನಗಳಿಗೆ ಮತ್ತು ಖಾಲಿ ಸಿ.ಎ. ನಿವೇಶನಗಳಿಗೂ ಅನ್ವಯ ಆಗುವಂತೆ ನಾವೆಲ್ಲಾ ನೋಡಿಕೊಳ್ಳಬೇಕು ಮತ್ತು ನಮ್ಮ ಮೈಸೂರು ನಗರವನ್ನು ಹಸಿರುಮಯ ಮಾಡುವ ನಿಟ್ಟಿನಲ್ಲಿ ಶ್ರಮಿಸಬೇಕು.

3. **ಆದಾಯ, ಸರ್ಕಾರಿ ಸೌಮ್ಯದ ಖಾಲಿ ಜಾಗಗಳು:** ನಗರದ ಹಳೆ ಬಡಾವಣೆಗಳಾದ ಯಾದವಗಿರಿ ಮುಂತಾದ ಕಡೆ ಹಿಂದಿನ ಕಾಲದ ಕಿರಿದಾದ 'ಸೇವಾ ರಸ್ತೆ'ಗಳಿವೆ (Conservancy Lanes). ಅವುಗಳು ದಶಕಗಳಿಂದ ನಿರುಪಯೋಗವಾಗಿವೆ, ದುರುಪಯೋಗವೂ ಆಗುತ್ತಿದೆ, ಕೆಲವು ಅತಿಕ್ರಮವಾಗಿವೆ. ಇಂದಿನ ನಿವೇಶನಗಳ ದರಗಳ ಪ್ರಕಾರ, ಅವುಗಳ ಬೆಲೆ ನೂರಾರು ಕೋಟಿ. ಅಂಥಾ ಖಾಲಿ ಜಾಗಗಳ ಸರ್ವೇ ಮಾಡಿ, ಬೆಲೆ ಕಟ್ಟಿ, ಅಕ್ಕ ಪಕ್ಕದ ನಿವಾಸಿಗಳಿಗೇ ಮಾರಿದರೆ ಪಾಲಿಕೆಗೆ ಕೋಟ್ಯಾಂತರ ಆದಾಯ ಸಿಗುವುದು. ಅಂತೆಯೇ, ಹಲವಾರು ನಿವೇಶನಗಳನ್ನು ಸಾರ್ವಜನಿಕ ಸೇವೆಗಾಗಿ (CA sites) ಷರತ್ತುಗಳ ಮೇರೆಗೆ ನೀಡಲಾಗಿದೆ. ಆದರೆ ಅವುಗಳು ದಶಕಗಳಿಂದ ಖಾಲಿ ಇವೆ. ಹಾಗೆಯೇ ಕೈಗಾರಿಕಾ ನಿವೇಶನಗಳೂ ಉಪಯೋಗವಾಗದೆ ಖಾಲಿ ಬಿದ್ದಿವೆ. ಷರತ್ತುಗಳು ಉಲ್ಲಂಘನೆಯಾಗಿದ್ದರೆ ಅಂಥವುಗಳನ್ನು ವಾಪಸ್ ಪಡೆದು ಪುನಃ ಮಾರಿದರೆ ಸರ್ಕಾರಕ್ಕೆ ಒಳ್ಳೆ ಆದಾಯ ಬರುವುದು.

–ವಸಂತಕುಮಾರ್ ಮೈಸೂರು ಮಠ, ಪರಿಸರವಾದಿ, ಮೈಸೂರು

### ಆಸ್ತಿ ನೋಂದಣಿ, ಮುದ್ರಾಂಕ ಶುಲ್ಕಗಳ ಹೆಚ್ಚಳ ಸರಿಯಲ್ಲ

ಮಾನ್ಯರೆ,

ಇತ್ತೀಚೆಗೆ ರಾಜ್ಯ ಸರ್ಕಾರ, ಸ್ಥಿರಾಸ್ತಿ ಮೇಲಿನ ವ್ಯವಹಾರಗಳ ದಸ್ತಾವೇಜುಗಳಿಗೆ ವಿಧಿಸುತ್ತಿರುವ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಕಳೆದ ಆಗಸ್ಟ್ 31ರಿಂದ ಹೆಚ್ಚಿಸಿರುವುದು ಸರಿಯಲ್ಲ. ಈಗಾಗಲೇ ಪರಿಷ್ಕರಣೆ ಮಾಡಲಾಗಿರುವ ಶುಲ್ಕದಲ್ಲಿ ಶೇಕಡಾ 1 ರಿಂದ ಶೇಕಡಾ 2 ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆ, ವಿದ್ಯುತ್, ಹಾಲಿನ ದರ ಏರಿಕೆ, ಸ್ಟಾಂಪ್ ಪೇಪರ್ ಮೇಲಿನ ದರ ಏರಿಕೆ, ವಿದ್ಯುತ್ ಸುಂಕ, ಬಸ್ ಪ್ರಯಾಣ ದರ, ಜನನ ಮತ್ತು ಮರಣ ಪ್ರಮಾಣ ಪತ್ರ ಪಡೆಯುವ ಶುಲ್ಕ ಏರಿಕೆ ಮುಂತಾದವುಗಳಿಂದ ಕಂಗೆಟ್ಟಿರುವ ರಾಜ್ಯದ ಜನರ ಮೇಲೆ ಈಗ ಮತ್ತಷ್ಟು ಹೊರೆ ಬಿದ್ದಿದೆ. ಈ ಹೊರೆ, ಕೇವಲ ಸೀಮಿತ ಜನರಿಗೆ ಮಾತ್ರ ಅನ್ವಯ ಎಂಬ ವಾದವನ್ನು ಒಪ್ಪಬಹುದಾದರೂ ಸಹ, ಒಟ್ಟಾರೆಯಾಗಿ, ಬೆಲೆ ಏರಿಕೆ ಸಮರ್ಥನೀಯವಲ್ಲವೆನ್ನಬಹುದು. ನೆರೆಯ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ವಿಧಿಸುತ್ತಿರುವ ಶುಲ್ಕ ಕಡಿಮೆ ಎಂಬ ಹೇಳಿಕೆಯನ್ನು ರಾಜ್ಯ ಸರ್ಕಾರ ನೀಡಿ, ನೆರೆಯ ತಮಿಳುನಾಡು, ಕೇರಳ, ತೆಲಂಗಾಣ ಮುಂತಾದ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದ ತೆರಿಗೆ ಕಡಿಮೆ ಎಂಬ ಸಮರ್ಥನೆ ನೀಡಿದೆ. ಎಲ್ಲಾ ಬೆಲೆ ಏರಿಕೆಗಳ ಹಿಂದೆ ಒಂದಲ್ಲಾ ಒಂದು ಕಾರಣ ಇದ್ದೇ ಇರುತ್ತದೆ. ಆದರೆ ನಿರಂತರವಾಗಿ ಬೆಲೆಗಳ ಏರಿಕೆ ಮಾಡುತ್ತಲೇ ಹೋದರೆ, ಜನರಿಗೆ ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಸತ್ಯವನ್ನು ರಾಜ್ಯ ಸರ್ಕಾರ ಮನಗಾಣಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

## ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

# ಕ್ರಿಯಾಕಲ್ಪ

ಕರ್ನಾಟಕದಲ್ಲಿ ಸಂಸ್ಕೃತಿಯ ಕ್ಷೇತ್ರಕ್ಕೆ ಇಳಿದು ಶ್ಲಾಘನೀಯ ಕಾರ್ಯವನ್ನು ಮಾಡುತ್ತಿರುವ ಹಲವಾರು ಪ್ರತಿಭಾವಂತ ತರುಣರು ಇದ್ದಾರೆ. ಕನ್ನಡ, ಇಂಗ್ಲೀಷ್, ಸಂಸ್ಕೃತ ಇತ್ಯಾದಿ ಭಾಷೆಗಳಲ್ಲಿ ಅಧ್ಯಯನವನ್ನು ಮಾಡಿ, ವಿಶಾಲವೂ, ಗಂಭೀರವೂ ಆದ ಓದನ್ನು ಬೆಳೆಸಿಕೊಂಡು ಲೇಖನಗಳಿಂದ, ಪುಸ್ತಕಗಳಿಂದ, ಭಾಷಣಗಳಿಂದ ಇಂತಹವರು ಮಾಡುತ್ತಿರುವ ಭಾಷಾ ಸೇವೆ ಸ್ತುತ್ಯವಾಗಿದೆ. ಅಂತಹ ಒಬ್ಬ ಯುವ ಲೇಖಕರು ಬಿ.ಎನ್. ಶಶಿಕಿರಣ್. ಡಿವಿಜಿ ಅವರ ಇಂಗ್ಲೀಷ್ ಸಾಹಿತ್ಯದ ಹತ್ತು ಸಂಪುಟಗಳನ್ನು ಹಿರಿಯರಾದ ನಾಡೋಜ ಎಸ್.ಆರ್. ರಾಮಸ್ವಾಮಿಯವರೊಡನೆ ಬೆಳಕಿಗೆ ತರುವುದರಲ್ಲಿ ಬಿ.ಎನ್.ಶಶಿಕಿರಣ್ ಅವರ ಪರಿಶ್ರಮ ಉಲ್ಲೇಖನೀಯ. ಈಗಾಗಲೇ ಹಲವು ಪುಸ್ತಕಗಳ ಲೇಖಕರಾಗಿರುವ ಅವರ ಈಚಿನ ಕೃತಿ **'ಕ್ರಿಯಾಕಲ್ಪ'**. ಬಿಡಿಯಾಗಿ ಪ್ರಕಟವಾಗಿದ್ದ ಎಂಟು ಲೇಖನಗಳ ಗುಚ್ಛವೇ ಕ್ರಿಯಾಕಲ್ಪ. ಧರ್ಮದ ವರ್ಮ ಶ್ರೀರಾಮ, ಹೇಮಚಂದ್ರನ ಕಾವ್ಯಾನುಶಾಸನ, ಡಿವಿಜಿ ಅವರ 'ಜೀವನ ಧರ್ಮ ಯೋಗ' ಸರ್ವಾನುಕೂಲ ಗೀತಾ ವಿವೃತಿ, ಮಹತ್ತಿನ ಉಪಾಸನೆ–ದೇವುಡು ನರಸಿಂಹಶಾಸ್ತ್ರಿಗಳ 'ಮಹಾತ್ರಯ'ದ ಸಂಸ್ತವ, ಕುವೆಂಪು ಕಂಡಂತೆ ಕಾವ್ಯ ಮೀಮಾಂಸೆ, ಜೀವರೇಖೆಗಳು– ಸಾ.ಕೃ.ರಾ., ಚಿತ್ರಿಸಿದ ಸತ್ತ್ವಮೂರ್ತಿಗಳು, ಎಂ.ವಿ.ವೆಂಕಟೇಶ ಮೂರ್ತಿಯವರ ವಿನಯೋನ್ನತಿ, ನವಿಲುಗರಿಯ ಸೊಬಗು–ಎಂಬ ಎಂಟು ಲೇಖನಗಳು ಇಲ್ಲಿವೆ. ಒಂದೊಂದು ಲೇಖನವೂ ಎರಡು ಮೂರು ಬಾರಿ ಓದಿಸಿಕೊಳ್ಳಲು ಅರ್ಹವಾಗಿದೆ.

ವಾಲ್ಮೀಕಿ ನಮ್ಮ ದೇಶದ ಆದಿಕವಿ. ದೇಹವನ್ನು ಧರಿಸಿದ ಧರ್ಮ, ಧರೆಗೆ ಇಳಿದು ಬಂದ ವಿಷ್ಣು, ಮರ್ಯಾದಾ ಪುರುಷೋತ್ತಮ ಎಂದು ಕರೆಸಿಕೊಂಡ ರಾಮನು ಧರ್ಮದ ಮರ್ಮವನ್ನು ಅರಿತವನು ಮಾತ್ರವಲ್ಲ, ಧರ್ಮದ ವರ್ಮವಾಗಿ, ಎಂದರೆ ರಕ್ಷಾ ಕವಚವಾಗಿ ಬಾಳಿದವನು ಎಂಬುದನ್ನು ಈ ಲೇಖನವು ತೋರಿಸಿದೆ. ಎರಡನೆಯ ಲೇಖನವು 'ಕಲಿಕಾಲ ಸರ್ವಜ್ಞ' ಎಂಬ ಖ್ಯಾತಿಯನ್ನು ಹನ್ನೆರಡನೆಯ ಶತಮಾನದಲ್ಲಿ ಗಳಿಸಿದ್ದ ಜೈನ ದಾರ್ಶನಿಕ ಹೇಮಚಂದ್ರಾಚಾರ್ಯನನ್ನು ಅವನ 'ಕಾವ್ಯಾನುಶಾಸನ' ಎಂಬ ಗ್ರಂಥವನ್ನು ಕುರಿತದ್ದಾಗಿದೆ. ಭಾರತದಲ್ಲಿ ಜನಿಸಿ ಸಾರ್ಥಕ ಬದುಕನ್ನು ನಡೆಸಿದ ಮಹಾನುಭಾವರ ಗಣನೆಯನ್ನು ಮಾಡಿದರೆ, ಆ ಪಟ್ಟಿಯಲ್ಲಿ ಹೇಮಚಂದ್ರಾಚಾರ್ಯನ ಹೆಸರೂ ಸೇರುತ್ತದೆ. ಗುಜರಾತ್ ರಾಜ್ಯ ಸಂಸ್ಕೃತ ಸಾಹಿತ್ಯಕ್ಕೆ ಕೊಟ್ಟ ಅನರ್ಘ್ಯ ರತ್ನಗಳೆಂದರೆ ಹೇಮಚಂದ್ರನ ಕೃತಿಗಳು.

ಅವುಗಳಲ್ಲಿ ಕಾವ್ಯಾನುಶಾಸನದ ವೈಶಿಷ್ಟ್ಯವೇನು ಎಂಬುದನ್ನು ಬಿ.ಎನ್. ಶಶಿಕಿರಣ್ ಈ ಲೇಖನದಲ್ಲಿ ವಿವರಿಸಿದ್ದಾರೆ. ಆ ಮಹಾನುಭಾವನ ಒಂದೊಂದು ಕೃತಿಯ ಬಗೆಗೂ ಒಂದೊಂದು ಲೇಖನವನ್ನು ಬರೆದು ಆ ಲೇಖನಗಳ ಸಂಕಲನವನ್ನು ಪ್ರಕಟಿಸಿದರೆ ಅನೇಕರಿಗೆ ಅದರಿಂದ ಪ್ರಯೋಜನವಾಗುತ್ತದೆ. ಈ ಲೇಖನದಲ್ಲಿ ಎಲ್ಲಾ ಕೃತಿಗಳ ಸಂಕ್ಷಿಪ್ತ ಪರಿಚಯವೇನೋ ಇದೆ. ಆದರೆ ಆ ಗ್ರಂಥಗಳ ಮಹತ್ತ್ವವನ್ನು ತಿಳಿಸಲು ವಿಸ್ತೃತವಾದ ವಿವರಣೆ ಬೇಕೆನ್ನುವುದು ನನ್ನ ವಿನಮ್ರ ಸೂಚನೆ. ಅನ್ಯಯೋಗವ್ಯವಚ್ಛೇದಿತಾ ದ್ವಾತ್ರಿಂಶಿಕಾ, ಅಯೋಗವ್ಯವಚ್ಛೇದಿಕಾ ದ್ವಾತ್ರಿಂಶಿಕಾ ಇತ್ಯಾದಿಗಳಲ್ಲಿ ಹೇಮಚಂದ್ರನು ನೈಯಾಯಿಕ, ಬೌದ್ಧ, ಅದ್ವೈತಾದಿ ದರ್ಶನಗಳ ದೋಷಗಳನ್ನು ತೋರಿಸಿದ್ದಾನೆ. ಅವುಗಳ ಪರಿಹಾರ ಇಂದೂ ದುಷ್ಕರವೇ. ಈ ವಿಚಾರಗಳು ವಿದ್ವಲ್ಲೋಕಕ್ಕೆ ತಿಳಿಯಬೇಕು.

ಡಿವಿಜಿ ಇಪ್ಪತ್ತನೆಯ ಶತಮಾನದ ವಿಭೂತಿ ಪುರುಷರು. ಗೀತೆಯ ಬಗೆಗೆ ಸಾವಿರಾರು ಪುಸ್ತಕಗಳಿದ್ದರೂ ಡಿವಿಜಿ ಅವರ ಜೀವನ ಧರ್ಮ ಯೋಗದಲ್ಲಿ ಹೊಸ ವಿಷಯಗಳಿವೆ. ಆದ್ದರಿಂದ ಅದು ಉಪಾದೇಯ. ಇದರ ಮುನ್ನುಡಿಯೇ ಒಂದು ಗ್ರಂಥದಂತೆ ಇದ್ದು ಸ್ವಯಂಪೂರ್ಣವಾಗಿದೆ. ಯಾವುದೇ ವೇದಾಂತ ಗ್ರಂಥವನ್ನು ಅರಿತುಕೊಳ್ಳಲು ಒಳ್ಳೆಯ ಪ್ರವೇಶವನ್ನು ಒದಗಿಸುತ್ತದೆ ಎಂಬ ಅಂಶವನ್ನು ಬಿ.ಎನ್. ಶಶಿಕಿರಣ್ ಈ ಪುಸ್ತಕದ ಮೂರನೆಯ ಲೇಖನದಲ್ಲಿ ನಿರೂಪಿಸಿದ್ದಾರೆ. ಈ ಲೇಖನದಲ್ಲಿ ಡಿವಿಜಿ ಅವರ ಚಿಂತನೆಯ ಔನ್ನತ್ಯವೂ, ವಿವಿಧ ಛಂದಸ್ಸುಗಳ ಪ್ರಯೋಗದಲ್ಲಿ ನೈಪುಣ್ಯವೂ ಎತ್ತಿ ತೋರಿಸಲ್ಪಟ್ಟಿದೆ. ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ **ಅರ್ಜುನ ವಿಷಾದಯೋಗ** ಇತ್ಯಾದಿ ಹೆಸರುಗಳಿಗೆ ಪರ್ಯಾಯವಾಗಿ ಡಿವಿಜಿ ನೀಡಿರುವ **ಪ್ರಾಕೃತ ಕಾರುಣ್ಯ ಯೋಗ** ಇತ್ಯಾದಿ ನಾಮಧೇಯಗಳ ಬಗೆಗೂ ಲೇಖಕರು ತಿಳಿಸಿದ್ದಾರೆ.

ಕನ್ನಡ ನಾಡಿನ ಇನ್ನೊಬ್ಬ ಮಹಾವ್ಯಕ್ತಿ ದೇವುಡು ನರಸಿಂಹ ಶಾಸ್ತ್ರಿಗಳು, ಅವರ ಜೀವನದ ಪರಿಚಯ 'ಮಹತ್ತಿನ ಉಪಾಸನೆ' ಎಂಬ ಲೇಖನದಲ್ಲಿ ದೊರಕುತ್ತದೆ. ಅವರ ಮಹಾತ್ರಯ ಎಂದರೆ ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ ಎಂಬ ಮೂರು ಕಾದಂಬರಿಗಳು. ಸಂಸ್ತವ ಎಂದರೆ ಪರಿಚಯ, ಉತ್ತಮ ಸ್ತುತಿ. ಇವೆರಡೂ ಇಲ್ಲಿವೆ. ಅಲ್ಲದೆ ಲೇಖಕ ಶಶಿಕಿರಣರ ಸೂಕ್ಷ್ಮೇಕ್ಷಿಕೆ ಸಾಮಾನ್ಯ ಓದುಗರ ಗಮನಕ್ಕೆ ಬಾರದ ವಿಷಯಗಳನ್ನೂ ತಿಳಿಯಪಡಿಸುತ್ತದೆ. ದೇವುಡು ಸೃಷ್ಟಿಸಿದ ಪಾತ್ರ ಬುಡಿಲ ಮಹಾದರ್ಶನದಲ್ಲಿ ಅಪರಿಗ್ರಹದ ಅನುಪಮ ನಿದರ್ಶನವಾಗಿ ನಿಲ್ಲುತ್ತಾನೆ ಎಂಬ ಅವರ ಅಭಿಪ್ರಾಯ (ಪು. 75) ಇಲ್ಲಿ ಗಮನಾರ್ಹ.

'ಕುವೆಂಪು ಕಂಡ ಕಾವ್ಯ ಮೀಮಾಂಸೆ' ಎಂಬ ಐದನೆಯ ಲೇಖನದಲ್ಲಿ ಮಹಾಕವಿಯೊಬ್ಬರ ವಿಶಾಲಮತಿಯನ್ನು ಅರಿತುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಕಾಣುತ್ತೇವೆ. ಶಶಿಕಿರಣ್ ಬರೆಯುತ್ತಾರೆ – ಕಲ್ಪನೆ ಮತ್ತು ಅಭಿವ್ಯಕ್ತಿಗಳಲ್ಲಿ ತಮ್ಮದಾದ ಛಾಪನ್ನು ಮೂಡಿಸುವ ಕುವೆಂಪು ಪ್ರಕೃತಿಯೇ ಮೈವೆತ್ತು ನುಡಿಯುವಂತೆ ಸರ್ವಸ್ಪರ್ಶಿಯಾಗಿ ಕವನಿಸುತ್ತಾರೆ : ನಿಜಕ್ಕೂ ಅವರದು ನಿಸರ್ಗಸರ್ಗ.' (ಪು. 88). ಕುವೆಂಪು ಚಿಂತನೆಗಳು ಮತ್ತು ಕಲ್ಪನೆಗಳು ಭಾರತೀಯ ಋಷಿಗಳ ಹಾಗೂ ಪಾಶ್ಚಾತ್ಯ ಕವಿಗಳ ಉಕ್ತಿಗಳಿಂದ ಹೇಗೆ ಪ್ರಭಾವಿತವಾಗಿವೆ ಎಂಬುದನ್ನು ಶಶಿಕಿರಣ್ ತೋರಿಸಿದ್ದಾರೆ. ಕುವೆಂಪು ಅವರ ಸಾಹಿತ್ಯವನ್ನು ಈ ತರುಣ ಲೇಖಕರು ಎಷ್ಟು ಆಳವಾಗಿ ಅಭ್ಯಸಿಸಿದ್ದಾರೆ ಎಂಬುದು ಪ್ರಸ್ತುತ ಲೇಖನದಲ್ಲಿ ವ್ಯಕ್ತವಾಗಿದೆ. ಕವಿಯ ಮನೋಭಾವದ ದ್ವೈಧದ ಬಗೆಗೆ ಕುವೆಂಪು ಅವರ ಸಾಲುಗಳನ್ನು ಉದಾಹರಿಸಿದ್ದಾರೆ –

**'ಹೇಳಿದರೆ ಹಾಳಾಗುವುದೋ ಈ ಅನುಭವದ ಸವಿಯು**
**ಹೇಳದಿರೆ ತಾಳಲಾರನೋ ಕವಿಯು' (ಪು. 100)**

ಇದು ಕವಿಗಳೆಂದು ಭಾವಿಸುವವರೆಲ್ಲರೂ ಅನುಸಂಧಾನ ಮಾಡಬೇಕಾದ ಮಾತಲ್ಲವೆ?

ಮುಂದಿನ ಲೇಖನ ನಮ್ಮ ಕಾಲದ ವಿಸ್ಮಯವಾಗಿದ್ದ ಪ್ರೊ. ಎಸ್.ಕೆ. ರಾಮಚಂದ್ರರಾಯರನ್ನು ಕುರಿತದ್ದು. ರಾಯರ ಪುಸ್ತಕಗಳನ್ನು ಓದಿದವರು, ಅವರ ಭಾಷಣಗಳನ್ನು ಕೇಳಿದವರು, ಅವರ ಪಾಠಗಳನ್ನು ಕೇಳಿ ಕಲಿತವರು ಎಂದೂ ಅವರನ್ನು ಮರೆಯಲಾರರು. ಶತಾವಧಾನಿ ಡಾ. ಆರ್. ಗಣೇಶರು ರಾಯರ ಬಗೆಗೆ 'ಸರ್ವತಂತ್ರ ಸ್ವತಂತ್ರ' ಎಂಬ ಪುಸ್ತಕವನ್ನೇ ರಚಿಸಿದ್ದಾರೆ. 'ಜೀವರೇಖೆಗಳು – ಸಾ.ಕೃ.ರಾ. ಚಿತ್ರಿಸಿದ ಸತ್ತ್ವಮೂರ್ತಿಗಳು' ಎಂಬ ಲೇಖನದಲ್ಲಿ ಶಶಿಕಿರಣರು ರಾಮಚಂದ್ರರಾಯರು ನೀಡಿದ ಮೂವತ್ತಕ್ಕೂ ಹೆಚ್ಚು ವ್ಯಕ್ತಿ ಚಿತ್ರಗಳ ವೈಶಿಷ್ಟ್ಯವನ್ನು ತಿಳಿಸಿದ್ದಾರೆ. ಆ ವ್ಯಕ್ತಿಗಳಲ್ಲಿ ಬುದ್ಧ, ಮಹಾವೀರ ಮುಂತಾದವರು ಪ್ರಾಚೀನರು. ಕಲಾತಪಸ್ವಿ ವೆಂಕಟಪ್ಪ, ಆನಂದ ಕುಮಾರಸ್ವಾಮಿ, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ ಮುಂತಾದವರು ಈಚಿನವರು. ರಾಮಚಂದ್ರರಾಯರು ಕೇವಲ ಶಬ್ದಗಳಲ್ಲಿ ಹೇಳುವವರಲ್ಲ, ಸ್ವಯಂ ರೇಖಾಚಿತ್ರಗಳನ್ನು ರಚಿಸಿ ನಮಗೆ ವ್ಯಕ್ತಿಗಳನ್ನು ಪರಿಚಯಿಸುತ್ತಾರೆ ಎಂಬುದನ್ನೂ ಸುಂದರವಾಗಿ ಹೇಳಿದ್ದಾರೆ. ಅಭಿನವ ಗುಪ್ತಪಾದರು ರಾಯರ ವಿಶೇಷ ಗೌರವಕ್ಕೆ ಪಾತ್ರರಾಗಿದ್ದವರು. ಹನ್ನೊಂದನೆಯ ಶತಮಾನದಲ್ಲಿದ್ದ ಮಹಾನುಭಾವರು. ಅವರ ಚಿತ್ರಗಳನ್ನೂ ರಾಯರು ಕೊಟ್ಟಿದ್ದಾರೆ.

'ಎಂ.ವಿ. ವೆಂಕಟೇಶಮೂರ್ತಿಯವರ ವಿನಯೋನ್ನತಿ' ಎಂಬ ಲೇಖನ ಶಶಿಕಿರಣರ ಅನುಭವ ಕಥನ. ಈ ಇಪ್ಪತ್ತನೆಯ ಶತಮಾನದಲ್ಲೂ ಎಂತಹ ಉನ್ನತ ವ್ಯಕ್ತಿತ್ವದ ಜನರಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಈ ಲೇಖನ. ಅವರ ಮನೆಗೆ ಹೋದ ಸಂದರ್ಭವನ್ನು ಶಶಿಕಿರಣ್ ಹೇಗೆ ಚಿತ್ರಿಸಿದ್ದಾರೆ, ಸ್ವಲ್ಪ ನೋಡೋಣ.

"ಅವರ ಮನೆಯ ಹೆಸರು 'ವಸುಂಧರಾ'. ಅಲ್ಲಿಗೆ ಹೋದೊಡನೆಯೇ ನಮ್ಮನ್ನು ಸ್ವಾಗತಿಸುವುದು ಹಲವು ಬಗೆಯ ಗಿಡ–ಮರ–ಬಳ್ಳಿಗಳ ನಳನಳಿಸುವ ಹಸುರು. ಮೊದಲ ಬಾರಿ ಅವರ ಮನೆಗೆ ಹೋಗಬೇಕಿದ್ದಾಗ ಗಣೇಶರು ಹೀಗೆ ವಿಳಾಸದ ಗುರುತು ಹೇಳಿ ಕಳಿಸಿದ್ದರು. 'ಅವರ ಮನೆಯ ಮುಂದೆ ಒಂದು ಶ್ರೀಗಂಧದ ಮರವಿದೆ. ಎತ್ತರಕ್ಕೆ ಬೆಳೆದು ರಸ್ತೆಯ ಅಂಚಿನಿಂದಲೇ ಕಾಣಿಸುತ್ತದೆ. ಅದರ ಗುರುತನ್ನು ಹಿಡಿದು ಹೋದರೆ ಮನೆ ಸುಲಭವಾಗಿ ಸಿಗುತ್ತದೆ. ಆ ಶ್ರೀಗಂಧದ ಮರ ಇಂದಿಗೂ ಅವರ ಮನೆಯ ಮುಂದಿದೆ...ಇತ್ಯಾದಿ. (ಪು. 153–154). ಇಂತಹ ಸರಳ ಪ್ರಸನ್ನ ಕನ್ನಡವನ್ನು ಬರೆಯುವವರು ಇಂದು ಬೇಕು. ವೆಂಕಟೇಶಮೂರ್ತಿಯವರ ಮನೆಯ ಊಟದ ಸವಿಯನ್ನೂ ಶಶಿಕಿರಣ್ ಅದ್ಭುತವಾಗಿ ವರ್ಣಿಸಿದ್ದಾರೆ. "ಅವರ ಶ್ರೀಮತಿ ಸಾಕ್ಷಾತ್ ಅನ್ನಪೂರ್ಣೆ. ಅವರು ಮಾಡುವ ತಿಳಿ ಸಾರು ದೇವ ದುರ್ಲಭವಾದುದು. ಅದನ್ನು ತುಪ್ಪದ ಜೊತೆ ಅನ್ನಕ್ಕೆ ಕಲಸಿ ಸವಿಯುತ್ತಿದ್ದರೆ 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ'. ಮೂರ್ತಿಯವರಿಗೆ ಏನಿದ್ದರೂ ಸಿಹಿತಿಂಡಿಗಳ ಮೇಲೆ ಪಕ್ಷಪಾತ. ಬಿಸಿಬಿಸಿಯಾದ ಗಸಗಸೆ ಪಾಯಸ ಅವರಿಗೆ ಅಚ್ಚುಮೆಚ್ಚು. (ಪು. 156). ಇದನ್ನು ಓದಿದ ನನಗೆ ಏನಾದರೂ ನೆವ ಹೂಡಿಕೊಂಡು ವೆಂಕಟೇಶಮೂರ್ತಿಗಳ ಮನೆಗೆ ಊಟದ ಸಮಯಕ್ಕೆ ಸರಿಯಾಗಿ ಹೋಗಬೇಕು ಎನಿಸಿದೆ. ಲೇಖನದಲ್ಲಿ ಮುಂದೆ ಮೂರ್ತಿಯವರ ವ್ಯಕ್ತಿತ್ವದ ಔನ್ನತ್ಯದ ಬಗೆಗೆ ಓದಿ ಅಷ್ಟು ದೊಡ್ಡವರನ್ನು ನೋಡುವ ಅರ್ಹತೆ ನನಗೆಲ್ಲಿದೆ ಎಂಬ ಭಾವನೆ ಮೂಡಿ ದೂರದಿಂದಲೇ ಅವರ ಪಾದಸ್ಪರ್ಶವನ್ನು ಮಾಡಿ ಈ ಜನ್ಮದಲ್ಲಿ ಇಷ್ಟು ಸಾಕು ಎಂದುಕೊಂಡೆ.

'ನವಿಲು ಗರಿಯ ಸೊಬಗು' ಎಂಬ ಲೇಖನದಲ್ಲಿ ಶಶಿಕಿರಣರು ಶತಾವಧಾನಿ ಗಣೇಶರ 'ಪುಟಗಳ ನಡುವಣ ನವಿಲುಗರಿ' ಎಂಬ ಸಣ್ಣ ಕತೆಗಳ ಸಂಕಲನದ ಬಗೆಗೆ ಬರೆದಿದ್ದಾರೆ. ಆ ಕತೆಗಳನ್ನು ನಾನು ಓದಿಲ್ಲ (ಅದೊಂದು ಮಾತ್ರ ಅಲ್ಲ, ಶತಾವಧಾನಿಗಳು ರಚಿಸಿರುವ ಅಪಾರ ಸಾಹಿತ್ಯದ ಶತಾಂಶವನ್ನೂ ನಾನು ಓದಿಲ್ಲ). ಈ ಲೇಖನದಲ್ಲಿ ಕನ್ನಡದಲ್ಲಿ ಸಣ್ಣ ಕತೆಯ ಇತಿಹಾಸದ ಬಗೆಗೆ ಎಸ್. ದಿವಾಕರ್ ಅವರು ಬರೆದಿರುವ ಗ್ರಂಥದ ಪ್ರಸ್ತಾವವೂ ಇದೆ. ಮತ್ತೆ ಗಣೇಶರ ಸಣ್ಣ ಕತೆಗಳ ವೈಶಿಷ್ಟ್ಯವಿರುವುದು ವಸ್ತುಚಯನದಲ್ಲಿ ಎಂದೂ ಲೇಖಕರು ತಿಳಿಸಿದ್ದಾರೆ.

ಶಶಿಕಿರಣರು ಕತೆಗಾರಿಕೆಯಲ್ಲಿ ಆವಶ್ಯಕವಾದ ತಂತ್ರಗಳ ಬಗೆಗೂ ಬೆಳಕನ್ನು ಚೆಲ್ಲಿದ್ದಾರೆ. ಸಣ್ಣ ಕತೆಯಲ್ಲಿ ಮೌಲ್ಯಗಳ ಸಂಘರ್ಷಗಳನ್ನು ಚಿತ್ರಿಸಲೆಳಸುವುದು ದುಸ್ಸಾಹಸ ಎಂಬ ಅಭಿಪ್ರಾಯವನ್ನು ನಿರಾಕರಿಸಿ 'ಸಮರ್ಥನಾದ ಲೇಖಕ ಯಾವ ಮಾಧ್ಯಮವನ್ನೂ ತನ್ನ ಉದ್ದಿಷ್ಟ ಪ್ರಯೋಜನಕ್ಕಾಗಿ ದುಡಿಸಿಕೊಳ್ಳಬಲ್ಲನೆಂಬ ಸತ್ಯ ಸದ್ಯದ ಸಂಕಲನದಿಂದಲೇ ಸಾಬೀತಾಗಿದೆ' ಎಂದು ಹೇಳಿ ಶತಾವಧಾನಿಗಳ ಸಾರಸ್ವತ ಸಾಧನೆಯನ್ನು ಶ್ಲಾಘಿಸಿದ್ದಾರೆ. ಕತೆಗಳನ್ನು ಓದಿ 'ಚೆನ್ನಾಗಿದೆ' ಎಂದಷ್ಟೇ ಹೇಳಿ ಸುಮ್ಮನಾಗುವವರು ಹಲವರು. ಆದರೆ ಆ ಚೆನ್ನಾಗಿರುವಿಕೆಯ ಕಾರಣವೇನೆಂದು ಕೆದಕಿ ಹುಡುಕಿ ಹೇಳಬಲ್ಲವರು ಶಶಿಕಿರಣರಂತಹ ವಿಮರ್ಶಕರು. ಈ ಲೇಖನವನ್ನು ಓದಿದರೆ ಅನೇಕ ನೂತನ ಕತೆಗಾರರು ತಮ್ಮ ಭಾಷೆಯನ್ನೂ ಶೈಲಿಯನ್ನೂ ತಂತ್ರವನ್ನೂ ತಿದ್ದಿಕೊಳ್ಳಬಹುದೆನಿಸುತ್ತದೆ.

ಶಶಿಕಿರಣ್ ದೋಷಾನ್ವೇಷಿಯಾದ ವಿಮರ್ಶಕರಲ್ಲ. ಇಂದು ಕೃತಿಗಳಲ್ಲಿರುವ ಗುಣಗಳನ್ನು ಮೆಚ್ಚುವ ವಿಮರ್ಶಕರ ಆವಶ್ಯಕತೆಯಿದೆ. ಕನ್ನಡದ ಕತೆಗಳ ಸಂಕಲನವೊಂದು ಬೂಕರ್ ಪ್ರಶಸ್ತಿಯನ್ನು ಗಳಿಸಿ ವಿಶ್ವಮಾನ್ಯತೆಯನ್ನು ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟಿದೆ. ಮೂಲದಲ್ಲೂ ಅನುವಾದದಲ್ಲೂ ಕನ್ನಡದ ಹಿರಿಮೆ ಬೆಳೆಯಲಿ ಎಂಬುದು ನಮ್ಮೆಲ್ಲರ ಆಶಯ. ಅದೇ ರೀತಿಯಲ್ಲಿ ಕನ್ನಡದಲ್ಲಿ 'ಗಟ್ಟಿ ಸಾಹಿತ್ಯವೂ' ಅಪೇಕ್ಷಿತ. ಕ್ರಿಯಾಕಲ್ಪ ಎಂದರೆ ಅಲಂಕಾರ ಶಾಸ್ತ್ರ. ಅದು ಮಾಡುವುದೂ ಕಾವ್ಯಗಳ ಮತ್ತು ಕವಿಗಳ ಮೌಲ್ಯ ಮಾಪನವೇ. ಪ್ರಸ್ತುತ ಕ್ರಿಯಾಕಲ್ಪವು ಆ ಕಾರ್ಯವನ್ನು ಚೆನ್ನಾಗಿ ಮಾಡಿದೆ. ಶ್ರೀ ಬಿ.ಎನ್. ಶಶಿಕಿರಣರು ಕನ್ನಡ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯನ್ನು ಕೊಟ್ಟು ಅದರ ಸಿರಿವಂತಿಕೆಯನ್ನು ಹೆಚ್ಚಿಸಲಿ ಎಂದು ಆಶಿಸೋಣ.



### ಶುಭಾಶಯ...

ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು ಅವರಿಗೆ ಬಿಜೆಪಿ ರಾಷ್ಟ್ರೀಯ ಸಂಘಟನೆ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಪ್ರತಾಪ್‌ಸಿಂಹ, ಸಿದ್ದರಾಜು, ಮೈ.ವಿ.ರವಿಶಂಕರ್, ಎಂ.ಜಿ.ಮಹೇಶ್, ಶಿವಕುಮಾರ್, ಗಿರಿಧರ್, ಮಹೇಶ್, ಜಯರಾಮ್, ಪ್ರದೀಪ್, ರಾಕೇಶ್‌ಭಟ್ ಇದ್ದರು.

## ಅನುಷಾ ಮೈಸೂರು ಮೃಗಾಲಯದ ನೂತನ ಕಾರ್ಯನಿರ್ವಾಹಕ ನಿರ್ದೇಶಕಿ

ಮೈಸೂರು,ಸೆ.2(ಎಂಟಿವೈ)–ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ (ಇಡಿ) ರಾಗಿ ಡಿಸಿಎಫ್ ಪಿ.ಅನುಷಾ (ಎಸ್‌ಎಫ್‌ಎಸ್) ಅವರನ್ನು ನೇಮಕ ಮಾಡಲಾಗಿದೆ. ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರ ಹುದ್ದೆ ಕಳೆದೊಂದು ತಿಂಗಳಿಂದ ಖಾಲಿಯಿತ್ತು. ಬನ್ನೇರುಘಟ್ಟ ಜೈವಿಕ ಉದ್ಯಾನವನ ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು ಮೃಗಾಲಯದ ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ಜೆಎಲ್‌ಆರ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪಿ.ಅನುಷಾ ಅವರನ್ನು ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ನಿಯೋಜಿಸಿ ಆದೇಶಿಸಲಾಗಿದೆ.



ಪಿ.ಅನುಷಾ

**ಮೂವರು ಮಹಿಳಾ ಅಧಿಕಾರಿಗಳು:** ಮೈಸೂರು ಮೃಗಾಲಯ ನೂತನ ಇಡಿ ಆಗಿ ಪಿ.ಅನುಷಾ ಅವರ ನಿಯೋಜನೆ ಮಾಡಿದ್ದು, ಎಸಿಎಫ್ ಆಗಿ ದೀಪಾ ಹಾಗೂ ಆರ್‌ಎಫ್‌ಓ ಆಗಿ ಧನ್ಯಶ್ರೀ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಮುಖ ಸ್ಥಾನದಲ್ಲಿರುವವರು ಮೂವರು ಮಹಿಳಾ ಅಧಿಕಾರಿಗಳೇ ಆಗಿರುವುದು ವಿಶೇಷ.

## ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುವವರಿಗೆ ಕಠಿಣ ಶಿಕ್ಷೆಯಾಗಲಿ

**ರಾಮನಗರ:** ಧರ್ಮಸ್ಥಳ ಸಂಸ್ಥೆಯ ಸಮಾಜಸೇವೆ ಜನರಿಗೆ ಗೊತ್ತಿದೆ. ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೆಲಸ ಮಾಡಬಾರದು. ಈ ಪ್ರಕರಣದ ಪಾತ್ರಧಾರಿಗಳು ಹಾಗೂ ಸೂತ್ರಧಾರಿಗಳನ್ನ ಕಂಡುಹಿಡಿದು ಸೂಕ್ತ ಶಿಕ್ಷೆ ಕೊಡಿಸಬೇಕು ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಮಂಜುನಾಥ್ ಹೇಳಿದ್ದಾರೆ. ರಾಮನಗರದಲ್ಲಿ ಮಾತನಾಡಿದ ಅವರು, ಎರಡೂ ಪಕ್ಷ ಒಂದೇ ದಿನ ಸಮಾವೇಶ ಮಾಡಿದರೆ ತುಂಬಾ ಓವರ್ ಕ್ರೌಡ್ ಆಗುತ್ತೆ. ಸೋಮವಾರ ಕೂಡ 40 ಸಾವಿರ ಜನ ಬಂದಿದ್ದರು. ಆದರೆ ಇಬ್ಬರ ಉದ್ದೇಶ ಧರ್ಮ ಸ್ಥಳದ ವಿರುದ್ಧ ಅಪಪ್ರಚಾರ ತಡೆಯಬೇಕು. ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನ ಕೂಡ ನಡೆಯುತ್ತೆ ಈ ಅಪಪ್ರಚಾರವನ್ನ ಸರ್ವ ಧರ್ಮಗಳೂ ಖಂಡಿಸಬೇಕು. ಷಡ್ಯಂತ್ರ ಮಾಡಿರುವವರು ತಮಿಳುನಾಡು, ಕೇರಳದವರಿದ್ದಾರೆ. ಹೊರಗಿನವರ ಪಾತ್ರ ಇರುವ ಸಾಧ್ಯತೆ ಇದೆ. ಹಾಗಾಗಿ ಇದನ್ನು ಕೇಂದ್ರದ ಒಂದು ಏಜೆನ್ಸಿ ತನಿಖೆ ಮಾಡಬೇಕಿದೆ ಎಂದರು.




ಡಾ.ಮಂಜುನಾಥ್

## ಗಜಪಡೆಗೆ ಇಂದಿನಿಂದ ಭಾರ ಹೊರುವ ತಾಲೀಮು

ಮೈಸೂರು, ಸೆ.2(ಎಂಟಿವೈ)– ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಜಂಬೂಸವಾರಿಗೆ ಇನ್ನು 31 ದಿನ ಬಾಕಿಯಿದ್ದು, ನಾಳೆ(ಸೆ.3)ಯಿಂದ ಕ್ಯಾಪ್ಟನ್ ಅಭಿಮನ್ಯು ಸೇರಿದಂತೆ ವಿವಿಧ ಆನೆಗಳಿಗೆ ಬಾರ ಹೊರುವ ತಾಲೀಮು ಆರಂಭಿಸಲು ಅರಣ್ಯ ಇಲಾಖೆ ಉದ್ದೇಶಿಸಿದೆ.

ತುಂತುರು ಮಳೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ಸೇರಿದಂತೆ ವಿವಿಧ ಕಾರಣಗಳಿಂದ ಗಜಪಡೆಗೆ ಪೂರ್ಣ ಪ್ರಮಾಣದ ತಾಲೀಮು ಆರಂಭಿಸಿರಲಿಲ್ಲ. ಆ. 4ರಂದು ಆಗಮಿಸಿದ ಮೊದಲ ತಂಡದ 9 ಆನೆ ಹಾಗೂ ಆ.25ರಂದು ಆಗಮಿಸಿದ ಎರಡನೇ ತಂಡದ 5 ಆನೆ ಸೇರಿದಂತೆ ಗಜಪಡೆಗೆ ಇದುವರೆಗೂ ಅರಮನೆ ಆವರಣದಲ್ಲೇ ತಾಲೀಮು ನಡೆಸಲಾಗುತ್ತಿತ್ತು. ದಸರಾ ಉದ್ಘಾಟನೆಗೆ ಕೇವಲ 20 ದಿನವಷ್ಟೇ ಇದ್ದು, ನಾಳೆಯಿಂದ ಹಂತ ಹಂತವಾಗಿ ಬಾರ ಹೊರುವ ತಾಲೀಮು ನಡೆಸಿ, ಜಂಬೂಸವಾರಿ ಮೆರವಣಿಗೆಯಲ್ಲಿ 750 ಕೆಜಿ ಚಿನ್ನದ ಅಂಬಾರಿ ಸೇರಿದಂತೆ 1100 ಕೆಜಿ ಭಾರ ಹೊರಲು ಗಜಪಡೆಯ ಗಂಡಾನೆಗಳಿಗೆ ತರಬೇತಿ ನೀಡಲಾಗುತ್ತದೆ.





ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ನಾಳೆ(ಸೆ.3) ಮಧ್ಯಾಹ್ನ 3.30 ಗಂಟೆಗೆ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ಅವರ ನೇತೃತ್ವದಲ್ಲಿ ಗಾದಿ, ನಮ್ದಾ ಹಾಗೂ ತೊಟ್ಟಿಲು ಪೂಜೆ ನಂತರ ಸಂಜೆ 4 ರಿಂದ 4.30ರೊಳಗೆ ಗೋಧೂಳಿ ಲಗ್ನದಲ್ಲಿ ಗಜಪಡೆಯ ನಾಯಕ ಅಭಿಮನ್ಯುವಿಗೆ ಪೂಜೆ ಮಾಡಿ ಗಾದಿ, ನಮ್ದಾದೊಂದಿಗೆ ತೊಟ್ಟಿಲು ಕಟ್ಟಲಾಗುತ್ತದೆ. ನಂತರ 300 ಕೆಜಿ ಮರಳು ಮೂಟೆ ಇಟ್ಟು ತಾಲೀಮು ನಡೆಸಲಾಗುತ್ತದೆ. ಬಳಿಕ ಹಂತ ಹಂತವಾಗಿ 750 ಕೆಜಿ ಮರಳು ಮೂಟೆ ಇಟ್ಟು ತಾಲೀಮು ನಡೆಸಲಾಗುತ್ತದೆ. ಜಂಜೂಸವಾರಿ ವೇಳೆ 750 ಕೆಜಿ ಮರಳು ಮೂಟೆಯೊಂದಿಗೆ 1100 ಕೆಜಿ ಭಾರ ಹೊರುವ 3–4 ತಾಲೀಮು ನಡೆಸಿ ಅಂಬಾರಿ ಆನೆಯನ್ನು ಸಜ್ಜುಗೊಳಿಸಲಾಗುತ್ತದೆ.

## ಇಂದು ಮೈಸೂರಲ್ಲಿ ಮ್ಯಾರಥಾನ್ ಸ್ಪರ್ಧೆ

**ಮೈಸೂರು:** ವಾರ್ಷಿಕ ಕ್ರಿಯಾ ಯೋಜನೆ 2025–26ರಲ್ಲಿ ಹೆಚ್.ಐ.ವಿ/ಏಡ್ಸ್ ಕುರಿತು ಅರಿವಿನ ಮಾಸಾಚಾರಣೆ –2025 ಕಾರ್ಯಕ್ರಮದ ಪ್ರಯುಕ್ತ ಜಿಲ್ಲಾ ಮಟ್ಟದ ಹೆಚ್.ಐ.ವಿ/ಏಡ್ಸ್ ಬಗ್ಗೆ ಅರಿವು, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು ತಾರತಮ್ಯವನ್ನು ತಡೆಗಟ್ಟುವುದು, ಹೆಚ್.ಐ.ವಿ ಮತ್ತು ಏಡ್ಸ್ (ತಡೆ) ಕಾಯ್ದೆ–2017, ರಾಷ್ಟ್ರೀಯ ಸಹಾಯವಾಣಿ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಸಂಬಂಧ ಸೆ.3ರಂದು ಬೆಳಗ್ಗೆ 7 ಗಂಟೆಗೆ ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮ್ಯಾರಥಾನ್ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಬುಧವಾರ 3 ಸೆಪ್ಟೆಂಬರ್ 2025

# ನಾಳೆ ನರ್ತನ ದೀಪ್ತಿ ಕಾರ್ಯಕ್ರಮ

ಮೈಸೂರು, ಸೆ. 2– ಮೈಸೂರಿನ ನೃತ್ಯ ವಿದ್ಯಾಪೀಠದ ವತಿಯಿಂದ ಸೆ.4ರಂದು ಕಿರುರಂಗಮಂದಿರದಲ್ಲಿ ಸಂಸ್ಥೆಯ ಹಿರಿಯ ಗುರುಗಳಾದ ಸಿ.ಎನ್. ಅನಿತಾ ಅವರ ಮಾರ್ಗದರ್ಶನದಲ್ಲಿ ಭರತನಾಟ್ಯ ಪ್ರದರ್ಶನ ಆಯೋಜಿಸಿದೆ. ಸಂಸ್ಥೆಯ ಚಿಗುರು ಪ್ರತಿಭೆಗಳಾದ ಕುಮಾರಿ ಚಿತ್ಕಲ ಜಿ.ಎನ್., ಕುಮಾರಿ ಸೌರವಿ, ಕುಮಾರಿ ನಿರಾಲಿ ಚಿದಂಬರ್ ಮತ್ತು ಯುವ ಪ್ರತಿಭೆ ಕುಮಾರಿ ಜನ್ಮಿತ. ಎಚ್ ವಿಶೇಷ ನೃತ್ಯ ಸಂಯೋಜನೆಯೊಂದಿಗೆ ಭರತ ನಾಟ್ಯ ಪ್ರದರ್ಶನ ನೀಡಲಿದ್ದಾರೆ.

ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಎಸ್.ಉಮೇಶ್ 'ಧರ್ಮ ಮತ್ತು ರಂಗಭೂಮಿ' ವಿಷಯದ ಬಗ್ಗೆ ಧರ್ಮ ಬೋಧನೆ ಮಾಲಿಕೆ–11ರಲ್ಲಿ ಉಪನ್ಯಾಸ ನೀಡಲಿದ್ದಾರೆ. ಮೈಸೂರಿನ ನೃತ್ಯ ಮಂಟಪ ಟ್ರಸ್ಟ್‌ನ ನಿರ್ದೇಶಕಿ ನಾಟ್ಯಶ್ರೀ ವಿದುಷಿ ರೂಪ ಉಪಾಧ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಂಸ್ಥೆಯ ಸಮಿತಿ ಸದಸ್ಯರಾದ ಶೋಭಾ ಬಾಲಕೃಷ್ಣ ಹಾಗೂ ಕಮಲ ಜಿ.ಕೆ. ಮತ್ತು ಗುರು ವಿದುಷಿ ಸಿ.ಎನ್.ಅನಿತಾ ಉಪಸ್ಥಿತರಿರಲಿದ್ದಾರೆ.

ಗುರುವಾರ ಸಂಜೆ 5.45ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ನೃತ್ಯ ಸಂಯೋಜನೆ, ನಿರ್ದೇಶನ ಹಾಗೂ ನಟುವಾಂಗ ನಿರ್ವಹಣೆ ಗುರು ವಿದುಷಿ ಸಿ.ಎನ್. ಅನಿತಾ ಅವರದ್ದು. ಹಾಡುಗಾರಿಕೆಯಲ್ಲಿ ಕುಮಾರಿ ನಯನ ನಾಗರಾಜ್, ಮೃದಂಗ ವಾದನದಲ್ಲಿ ವಿದ್ವಾನ್ ಜಿ.ಟಿ.ಸ್ವಾಮಿ, ಪಿಟೀಲು ವಾದನದಲ್ಲಿ ವಿದ್ವಾನ್ ತಾಂಡವಮೂರ್ತಿ ಪಕ್ಕವಾದ್ಯದಲ್ಲಿ ಸಹಕಾರ ನೀಡಲಿದ್ದಾರೆ. ಶೋಭಾ ಕಾರ್ಯಕ್ರಮ ನಿರೂಪಿಸಲಿದ್ದಾರೆ.

## ಬಿ.ಎಲ್.ಸಂತೋಷ್‌ಗೆ ಸ್ವಾಗತ...



ಕಾರ್ಯ ನಿಮಿತ್ತ ಮಂಗಳವಾರ ಮೈಸೂರಿಗೆ ಆಗಮಿಸಿದ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಹಿರಿಯ ವಕೀಲರು ಹಾಗೂ ಖ್ಯಾತ ಉದ್ಯಮಿ ಎಂ.ಡಿ.ಹರೀಶ್ ಕುಮಾರ್ ಹೆಗ್ಗಡೆ ಆತ್ಮೀಯವಾಗಿ ಸ್ವಾಗತಿಸಿದರು.

### ಇಂದಿನಿಂದ ಸೆ.28ರವರೆಗೆ ಕಾವಾದಲ್ಲಿ ಟೆರಾಕೋಟಾ ಭಿತ್ತಿ ಶಿಲ್ಪ ಶಿಬಿರ ಆರಂಭ

# ಕಲಾವಿದರಲ್ಲಿ ಸರ್ವಕಾಲಿಕ ಪ್ರಜ್ಞೆ ಅನಿವಾರ್ಯ

### ಹಿರಿಯ ದೃಶ್ಯಕಲಾ ವಿಮರ್ಶಕ ಕೆ.ವಿ.ಸುಬ್ರಹ್ಮಣ್ಯಂ ಅಭಿಮತ

ಮೈಸೂರು, ಸೆ.2(ಎಂಕೆ)– ಜನಸಾಮಾನ್ಯರಿಗೆ ಹತ್ತಿರವಾದ ಟೆರಾಕೋಟಾ(ಮಣ್ಣಿನಿಂದ ಮಾಡುವ ಕಲಾಕೃತಿಗಳು) ಕಲಾಕೃತಿಗಳು, ಸಾಮಾನ್ಯರ ಮಾಧ್ಯಮವಾಗಿದೆ ಎಂದು ಹಿರಿಯ ದೃಶ್ಯ ಕಲಾ ವಿಮರ್ಶಕ ಕೆ.ವಿ.ಸುಬ್ರಹ್ಮಣ್ಯಂ ಅಭಿಪ್ರಾಯಿಸಿದರು.

ಮೈಸೂರು ದಸರಾ ಮಹೋತ್ಸವ–2025 ಅಂಗವಾಗಿ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಆವರಣದಲ್ಲಿ ದಸರಾ ಲಲಿತಕಲೆ ಮತ್ತು ಕರಕುಶಲಕಲೆ ಉಪ ಸಮಿತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸಹಯೋಗದೊಂದಿಗೆ ಸೆ.3ರಿಂದ 8ರವರೆಗೆ ಹಾಗೂ ಸೆ.22ರಿಂದ 28ರವರೆಗೆ ಹಮ್ಮಿಕೊಂಡಿರುವ 'ಟೆರಾಕೋಟಾ ಭಿತ್ತಿಶಿಲ್ಪ ಶಿಬಿರ' ಉದ್ಘಾಟಿಸಿ ಅವರು ಮಾತನಾಡಿದರು.

ಕಲಾವಿದರಿಗೆ ಮುಖ್ಯವಾಗಿ ನಿನ್ನೆ, ಇಂದು ಮತ್ತು ನಾಳೆ ಎಂಬುದರ ಅರಿವಿನ ಐತಿಹಾಸಿಕ ಪ್ರಜ್ಞೆ ಇರಬೇಕು. ಕಲಾಕೃತಿಯೊಂದನ್ನು ರೂಪಿಸುವಾಗ, ಈ ಹಿಂದೆ ಅದೇ ಮಾದರಿಯಲ್ಲಿ ಕಲಾಕೃತಿಗಳನ್ನು ರೂಪಿಸಲಾಗಿದೆಯೇ ಎಂಬುದನ್ನು ಗಮನಿಸಿ, ರೂಪಿಸಿದ್ದರೆ ಅವುಗಳನ್ನು ಸೂಕ್ಷ್ಮತೆಯಿಂದ ಪರಿಶೀಲಿಸಿ, ಅವಸರ ಪಡದೆ, ತನ್ನದೇ ಆಲೋಚನೆ ಮೂಲಕ ರೂಪಿಸಿದರೆ, ವಿಶಿಷ್ಟ ಮತ್ತು ವಿಭಿನ್ನವಾಗಿ ಮೂಡಿಬರಲಿದೆ ಎಂದು ಸಲಹೆ ನೀಡಿದರು.

ಬದುಕಿಗೆ ಹತ್ತಿರವಾದ ಕಲೆ ಮತ್ತು ಕಲಾಕೃತಿಗಳನ್ನು ರೂಪಿಸುವಾಗ ಮತ್ತು ನೋಡುವಾಗ ಮನಸ್ಸಿಗೆ ಬಹಳ ಸಂತೋಷ ಸಿಗಲಿದೆ. ಕಲೆಯಿಂದ ಕೊಡುವ ಜೀವನವನ್ನು ಸುಂದರವಾಗಿ ರೂಪಿಸಿಕೊಳ್ಳಬೇಕು. ನಮಗಿಂತಲೂ ಮೊದಲೇ ಸಾಕಷ್ಟು ಜನ ಕಲಾ ಕ್ಷೇತ್ರದಲ್ಲಿ ಅದ್ಭುತ ಕೊಡುಗೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಅರಿತುಕೊಂಡಿರಬೇಕು.

ಕಲೆಯಲ್ಲಿ ಕಾಪಿ ಮಾಡುವುದು ತಪ್ಪಲ್ಲ. ಕಾಪಿ ಮಾಡಿದರೂ ಯಥಾವತ್ತಾಗಿ ಕಾಪಿ ಮಾಡಲು ಸಾಧ್ಯವೇ ಇಲ್ಲ. ತಾಳ್ಮೆಯಿಂದ ಮತ್ತೆ ಮತ್ತೆ ನೋಡಿ, ಹತ್ತಾರು ಬಾರಿ ವಿವಿಧ ವಿನ್ಯಾಸಗಳಲ್ಲಿ ರೂಪಿಸಿದರೆ ಮಾತ್ರವೇ ಉತ್ತಮ ಕಲಾಕೃತಿಯೊಂದನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಹತ್ತು ಮಂದಿ ಕಲಾವಿದರು ಒಂದೇ ಕಲಾಕೃತಿಯನ್ನು ರೂಪಿಸಿದರೂ ಒಂದಲ್ಲ ಒಂದು ವ್ಯತ್ಯಾಸ ಇರಲಿದೆ. ಅದೇ ರೀತಿ ಪ್ರತಿಯೊಬ್ಬ ಕಲಾವಿದ ಅಥವಾ ವ್ಯಕ್ತಿ ಯಾರದ್ದಾದರೂ ಪ್ರಭಾವಕ್ಕೆ ಒಳಗಾಗಿರುತ್ತಾರೆ ಎಂದು ತಿಳಿಸಿದರಲ್ಲದೆ ಟೆರಾಕೋಟಾ ಕಲೆ ಜನಸಾಮಾನ್ಯರಿಗೆ ಹತ್ತಿರವಾದ ಕಲೆಯಾಗಿದೆ. ಪಂಚಭೂತಗಳಲ್ಲಿ ಒಂದಾದ ಮಣ್ಣಿನಿಂದ ಮಾಡುವ ಟೆರಾಕೋಟಾ ಕಲಾಕೃತಿಗಳನ್ನು ನೋಡುವುದೇ ಆನಂದ ಎಂದು ವರ್ಣಿಸಿದರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಎಂ.ಸಿ. ರಮೇಶ್ ಮಾತನಾಡಿ, ಭಾರತದ ವಾಸ್ತುಶಿಲ್ಪ ಇತಿಹಾಸವನ್ನು ಅಧ್ಯಯನ ಮಾಡಬೇಕು. ಕಲಾವಿದನಾಗುವ ಇಚ್ಛೆ ಇದ್ದರೆ, ಶ್ರಮವಹಿಸಬೇಕಾಗುತ್ತದೆ. ಶ್ರಮ ಇಲ್ಲದೆ ಕಲಾವಿದನಾಗಲೂ ಸಾಧ್ಯವಿಲ್ಲ. ಪಂಚಭೂತಗಳಲ್ಲಿ ಒಂದಾದ ಮಣ್ಣಿನಿಂದ ಕಲಾಕೃತಿಗಳನ್ನು ರೂಪಿಸುವುದೇ ಟೆರಾಕೋಟಾ ಕಲಾಕೃತಿಗಳು ಎಂದಿಗೂ ವಿಶೇಷ. ಪ್ಲಾಸಿಕ್ ಬಾಟಲ್‌ನಲ್ಲಿ ನೀರು ಕುಡಿಯುವುದಕ್ಕೂ ಮಣ್ಣಿನಿಂದ ಮಾಡಿದ ಮಡಿಕೆ ನೀರು ಕುಡಿಯುವುದಕ್ಕೂ ಬಹಳ ವ್ಯತ್ಯಾಸ ಇರುವಂತೆ ಟೆರಾಕೋಟಾ ಕಲಾಕೃತಿಗಳು ತನ್ನದೇ ವೈಶಿಷ್ಟತೆ ಹೊಂದಿವೆ ಎಂದರು.


ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಉಪವಿಶೇಷಾಧಿಕಾರಿ ಎ.ದೇವರಾಜು, ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಕಾವಾ ಕಾಲೇಜು ಆಡಳಿತಾಧಿಕಾರಿ ನಿರ್ಮಲ ಎಸ್.ಮಠಪತಿ, ಕಾರ್ಯದರ್ಶಿ ಕೆ.ರಾಘವೇಂದ್ರ, ಟೆರಾಕೋಟ ಭಿತ್ತಿಶಿಲ್ಪ ಶಿಬಿರ ನಿರ್ದೇಶಕ ಉಲ್ಲಾಸ್ಕರ್ ಡೇ ಮತ್ತಿತರರಿದ್ದರು.



ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿರುವ 'ಟೆರಾಕೋಟಾ ಭಿತ್ತಿಶಿಲ್ಪ ಶಿಬಿರ'ವನ್ನು ಹಿರಿಯ ದೃಶ್ಯ ಕಲಾ ವಿಮರ್ಶಕ ಕೆ.ವಿ.ಸುಬ್ರಹ್ಮಣ್ಯಂ ಉದ್ಘಾಟಿಸಿದರು.

> "ಮೈಸೂರು ಶೈಲಿಯ ಚಿತ್ರಕಲೆಯನ್ನು ಕಾಪಿ ಮಾಡುತ್ತಾರೆ ಎಂಬ ಕಂಪ್ಲೇಟ್ ಸದಾ ಕೇಳುತ್ತೇವೆ. ಕಾಪಿ ಮಾಡುವುದು ನಿಜವಾದರೂ ಬಣ್ಣಗಳ ಸಂಯೋಜನೆಯಲ್ಲಿ, ರೂಪದಲ್ಲಿ ಏನೋ ವ್ಯತ್ಯಾಸ ಇದ್ದೇ ಇರುತ್ತದೆ. 50 ಜನ ಒಂದು ಪೇಂಟಿಂಗ್ ಮಾಡಿದರೂ ಒಂದೇ ರೀತಿ ಇರಲು ಸಾಧ್ಯವಿಲ್ಲ. ಒಬ್ಬೊಬ್ಬರದ್ದು ಒಂದೊಂದು ರಸಭಾವದಿಂದ ಕೂಡಿರುತ್ತದೆ. ಹಾಗಾಗಿ ಕಾಪಿ ಮಾಡುವುದು, ಪ್ರಭಾವಕ್ಕೆ ಒಳಗಾಗುವುದು ಸಹಜ. –ಕೆ.ವಿ.ಸುಬ್ರಹ್ಮಣ್ಯಂ, ಹಿರಿಯ ದೃಶ್ಯ ಕಲಾ ವಿಮರ್ಶಕ

## ಖ್ಯಾತ ಹೋಟೆಲ್ ಉದ್ಯಮಿ ಜಿ.ಅಶೋಕ್ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಮಂಗಳವಾರ ತಮ್ಮ 59ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಮೈಸೂರು ಹೋಟೆಲ್ ಮಾಲೀಕರ ಸಂಘದ ಧರ್ಮದತ್ತಿ ಉಪಾಧ್ಯಕ್ಷರೂ ಆದ ಖ್ಯಾತ ಹೋಟೆಲ್ ಉದ್ಯಮಿ ಹಾಗೂ ಗುತ್ತಿದಾರರಾದ ಜಿ.ಅಶೋಕ್ ಅವರನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಕಾರ್ಯಕಾರಿ ಸಮಿತಿ ಸದಸ್ಯರಾದ ಹೆಚ್.ಪಿ. ಚಂದ್ರು, ಕೆ.ಎಸ್.ಅರುಣ್, ಸುರೇಶ್ ಉಗ್ರಯ್ಯ, ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಸುಬ್ರಮಣ್ಯತಂತ್ರಿ, ಮಾಜಿ ಕಾರ್ಯದರ್ಶಿ ಹೆಚ್.ಕೆ.ರಮೇಶ್, ಜಿ.ಅರುಣ್, ಮಹದೇವ, ಲಕ್ಷ್ಮಣ್, ಶ್ರೀನಿವಾಸ್, ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**ಮೈಸೂರು:** ಕರ್ನಾಟಕ ಸರ್ಕಾರದ ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2025–26ನೇ ಸಾಲಿಗೆ ನಾವೀನ್ಯತೆ, ತಾರ್ಕಿಕ ಸಾಧನೆ, ಕ್ರೀಡೆ ಮತ್ತು ಕಲೆ, ಸಾಂಸ್ಕೃತಿಕ, ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 5ರಿಂದ 18 ವರ್ಷದೊಳಗಿನ ಬಾಲಕರಿಗೆ 'ಹೊಯ್ಸಳ' ಮತ್ತು ಬಾಲಕಿಯರಿಗೆ 'ಕೆಳದಿ ಚೆನ್ನಮ್ಮ' ಪ್ರಶಸ್ತಿ ನೀಡಲಾಗುತ್ತಿದ್ದು, 4 ಕ್ಷೇತ್ರಗಳಿಂದ ಪ್ರಶಸ್ತಿಗೆ ಆಯ್ಕೆಯಾದ 8 ಮಕ್ಕಳಿಗೆ ತಲಾ ರೂ. 10,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

ಅರ್ಜಿ ನಮೂನೆಯನ್ನು ಸೆ.22ರ ಸಂಜೆ 5.30ರೊಳಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀ ಶಕ್ತಿ ಭವನ, ಕೃಷ್ಣದೇವರಾಯ ವೃತ್ತ, ವಿಜಯನಗರ 2ನೇ ಹಂತ, ಮೈಸೂರು ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ: 0821–2495432 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಸಂಶೋಧನಾ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಜ್ಞಾನ ವೃದ್ಧಿಸಿಕೊಳ್ಳಿ

### ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಟಿ.ಯೋಗೀಶ ಕಿವಿಮಾತು

ಮೈಸೂರು, ಸೆ.2– ಸಂಶೋಧನಾ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ನನಗೆ ನಾನೇ ಶ್ರೇಷ್ಠ ಎಂದು ತಿಳಿದುಕೊಂಡು ಶ್ರಮಪಟ್ಟು ಪುಸ್ತಕಗಳನ್ನು ಹೆಚ್ಚಾಗಿ ಓದಿಕೊಂಡು ಜ್ಞಾನವನ್ನು ವೃದ್ಧಿಸಿಕೊಳ್ಳಿ, ಶ್ರಮಕ್ಕೆ ತಕ್ಕ ಫಲ ಇದ್ದೇ ಇದೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಟಿ.ಯೋಗೀಶ ತಿಳಿಸಿದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿರುವ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ 10 ದಿನಗಳ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ಸಂಶೋಧನಾ ವಿದ್ಯಾರ್ಥಿಗಳಾಗಿ ಆಗಮಿಸಿರುವ ನೀವು ಎಲ್ಲಿಂದ ಬಂದಿದ್ದೀರೋ ಅದು ಮುಖ್ಯವಲ್ಲ. ನಾನೇ ಮೊದಲಿಗನಾಗುತ್ತೇನೆ ಎಂದು ದೃಢ ಸಂಕಲ್ಪ ಮಾಡಿ. ಸಾಧನೆ ಮಾಡಿ ಆಗ ಯಶಸ್ಸು ಕಾಣಲು ಸಾಧ್ಯವಿದೆ ಎಂದರು.

ನಾನು ಕಾಲೇಜಿನಲ್ಲಿ ಓದುವಾಗ ಇಂಗ್ಲೀಷಿನಲ್ಲಿ 35 ಅಂಕ ಪಡೆಯಲು ಕಷ್ಟಪಡುತ್ತಿದ್ದೆ. ಆದರೆ ಶ್ರಮಪಟ್ಟಿದ್ದರಿಂದ ರ್‍ಯಾಂಕ್ ಪಡೆದೆ. ಈಗ ನಿಮ್ಮ ಮುಂದೆ ಅಧಿಕಾರಿಯಾಗಿ ನಿಂತಿದ್ದೇನೆ. ಸಮಾಜಕ್ಕೆ ನೀವು ಕೊಡುಗೆ ನೀಡಬೇಕಾದರೆ ನೀವು ಚೆನ್ನಾಗಿರಬೇಕು. ಏನೇ ಕೆಲಸ ಮಾಡಿದರೂ ಅಚ್ಚುಕಟ್ಟಾಗಿ ಮಾಡಿ. ನಿಮಗೆ ಅಗತ್ಯವಿರುವ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಿಕೊಡುತ್ತೇವೆ. ಈ ಸಂಸ್ಥೆ ಇನ್ನೂ ಚೆನ್ನಾಗಿ ಕೆಲಸ ಮಾಡಲು ನಿಮ್ಮ ಅಭಿಪ್ರಾಯ ಸಲಹೆಗಳನ್ನು ಕೊಡಿ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪರಿಶಿಷ್ಟ ಪಂಗಡದ ಜನರನ್ನು ಅಭಿವೃದ್ಧಿಪಡಿಸಲು ಅಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ, ಪ್ರೋತ್ಸಾಹ ನೀಡುತ್ತಿದ್ದಾರೆ ಎಂದರು.

ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಿಖರ ಮಾಹಿತಿ ಸಂಗ್ರಹಿಸಲು ಸಂಶೋಧನಾಧಿಕಾರಿಗಳಿಗೆ ಟ್ಯಾಬ್ ವಿತರಿಸಿದರು. ಸಮಾರಂಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಹಂಪಿ ವಿವಿಯ ಪ್ರೊ.ಹೆಚ್.ಡಿ. ಪ್ರಶಾಂತ್, ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಎಂ.ಕೆ. ಮಲ್ಲೇಶ್, ಲೆಕ್ಕಾಧಿಕಾರಿ ಬಿ.ಆರ್.ಭವ್ಯ, ಅಧೀಕ್ಷಕರಾದ ಎಂ.ವಿ.ನಾಗರತ್ನ, ಡಾ.ಮೋಹನ್, ಅರುಣ್‌ಪ್ರಭು, ಗಂಗಾಧರ್, ಕಚೇರಿ ಸಿಬ್ಬಂದಿ ಇದ್ದರು.



ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿರುವ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಟಿ.ಯೋಗೀಶ ಉದ್ಘಾಟಿಸಿದರು.

# ಒಳ ಮೀಸಲಾತಿಯಲ್ಲಿ ಸುಪ್ರೀಂಕೋರ್ಟ್ ಸೂಚನೆ ಪಾಲಿಸಿಲ್ಲ

### ● ಮಾಜಿ ಡಿಸಿಎಂ–ಹಾಲಿ ಸಂಸದ ಗೋವಿಂದ ಕಾರಜೋಳ ಆಕ್ಷೇಪ ● ಎಲ್ಲಾ ಜನಾಂಗಕ್ಕೂ ಒಪ್ಪಿಗೆ ಆಗುವ ರೀತಿ ರೂಪಿಸದಿದ್ದರೆ ಮತ್ತೆ ಹೋರಾಟದ ಎಚ್ಚರಿಕೆ

ಬೆಂಗಳೂರು,ಸೆ.2(ಕೆಎಂಶಿ)–ಸಚಿವ ಸಂಪುಟ ಸಭೆಯಲ್ಲಿ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಅಥವಾ ಮಾಧುಸ್ವಾಮಿ ನೇತೃತ್ವದ ವರದಿ ಅಂಗೀಕರಿಸುವ ಮೂಲಕ ಅಲೆಮಾರಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಲೆಮಾರಿ ಸಮುದಾಯಗಳಿಗೆ ಅನ್ಯಾಯವಾಗಿದ್ದು ರಾಜ್ಯಾದ್ಯಂತ ಪ್ರತಿಭಟನೆಗೆ ಮುಂದಾಗಿದ್ದಾರೆ. ಸಮಾನರು–ಅಸಮಾನರನ್ನು ಒಂದೇ ಪ್ರವರ್ಗದಲ್ಲಿ ತರಬಾರದೆಂಬ ಸುಪ್ರೀಂ ಕೋರ್ಟ್ ಸೂಚನೆ ಪಾಲನೆ ಆಗಿಲ್ಲ ಎಂದರು.

ನ್ಯಾ.ನಾಗಮೋಹನ್ ದಾಸ್ ವರದಿ ಪರಿಗಣಿಸದೆ, ರಾಜಕೀಯ ಲಾಭಕ್ಕಾಗಿ ತೇಪೆ ಹಚ್ಚುವ ವರ್ಗೀಕರಣ ಮಾಡಲಾಗಿದೆ. ಇದನ್ನು ಒಪ್ಪಲಾಗದು. ಸರ್ಕಾರ ತರಾತುರಿಯಲ್ಲಿ ನೇಮಕಾತಿ ಪ್ರಾರಂಭ ಮಾಡಿದೆ. ಕೆಪಿಎಸ್‌ಸಿಗೂ ನಿರ್ದೇಶನ ನೀಡಿದ್ದು, ಗೊಂದಲದ ನಡುವೆ ಪ್ರಾರಂಭವಾಗಿರುವ ನೇಮಕಾತಿ ಪ್ರಕ್ರಿಯೆಗಳನ್ನು ಕೂಡಲೇ ನಿಲ್ಲಿಸಬೇಕು. ಉದ್ಯೋಗ, ಶಿಕ್ಷಣ, ಅನುದಾನಕ್ಕೂ ಆದೇಶ ಅನ್ವಯ ಆಗುವಂತೆ ಮಾರ್ಪಾಡು ಮಾಡಬೇಕು. ಸರ್ವಪಕ್ಷಗಳ ಚುನಾಯಿತ ಜನಪ್ರತಿನಿಧಿಗಳ ವಿಶೇಷ ಸಭೆ ಕರೆದು, ಸಭೆಗೆ ಮೀಸಲಾತಿ ಜ್ಞಾನ ಇರುವ ಹಾಗೂ ನಿವೃತ್ತ ಅಧಿಕಾರಿಗಳನ್ನೂ ಆಹ್ವಾನಿಸಬೇಕು. ಇಲ್ಲಿ ಕೈಗೊಳ್ಳುವ ತೀರ್ಮಾನ ಎಲ್ಲರಿಗೂ ಒಪ್ಪಿಗೆ ಆಗಲಿದೆ.



ಗೋವಿಂದ ಕಾರಜೋಳ

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಪಡೆದುಕೊಂಡ ಮಾಧುಸ್ವಾಮಿ ವರದಿ ಎಲ್ಲ ಜನಾಂಗಕ್ಕೂ ಒಪ್ಪಿಗೆ ಆಗುವಂತದ್ದಾಗಿತ್ತು. ಮಾದಿಗ ಶೇ.6, ಛಲವಾದಿ ಶೇ.5.5, ಲಂಬಾಣಿ, ಭೋವಿ, ಕೊರಮ, ಕೊರಚ ಶೇ.4.5, ಅಲೆಮಾರಿಗಳಿಗೆ ಶೇ.1 ಮೀಸಲಾತಿ ಶಿಫಾರಸ್ಸು ಮಾಡಿದ್ದರು. ಇದನ್ನು ನಿರ್ಲಕ್ಷಿಸಿ 150 ಕೋಟಿ ರೂ. ಖರ್ಚು ಮಾಡಿ ನ್ಯಾ.ನಾಗಮೋಹನ್‌ದಾಸ್ ವರದಿ ಮಾಡಿಸಿ, ಅದನ್ನೂ ಮಾನ್ಯ ಮಾಡದೆ. ಸಿದ್ದರಾಮಯ್ಯ ಸರ್ಕಾರ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದೆ.

ಸುಪ್ರಿಂಕೋರ್ಟ್‌ನ ಸಂವಿಧಾನ ಪೀಠದ ತೀರ್ಪಿಗೆ ಮಸಿ ಬಳಿಯುವ ಕೆಲಸ ಸಿದ್ದರಾಮಯ್ಯ ಸರ್ಕಾರ ಮಾಡಿದೆ, ರಾಜಕೀಯ ಒತ್ತಡಕ್ಕೆ ಮಣಿದು 3 ಗುಂಪುಗಳಾಗಿ ವಿಂಗಡಿಸಿ 'ಎ' ಗುಂಪಿಗೆ ಶೇ.6, 'ಬಿ' ಗುಂಪಿಗೆ ಶೇ.6, 'ಸಿ' ಗುಂಪಿಗೆ ಶೇ. 5 ನೀಡಿದ್ದಾರೆ ಎಂದರು.

ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿ, ಒಳ ಮೀಸಲಾತಿ ಜಾರಿ ದಿಕ್ಕು ದೆಸೆ ಇಲ್ಲದ ಅರ್ಥಹೀನ, ಮಾದಿಗರ ಕನಸು, ಹೋರಾಟಕ್ಕೆ ಮಂಕುಬೂದಿ ಎರಚಲಾಗಿದೆ. ಅಲೆಮಾರಿಗಳನ್ನು ಸ್ಪರ್ಶ ಜನಾಂಗದ ಜೊತೆ ಸೇರಿಸಿ ದ್ರೋಹ ಮಾಡಲಾಗಿದೆ, ನಮ್ಮ ಬೇಡಿಕೆ ಈಡೇರದಿದ್ದರೆ ಮತ್ತೊಮ್ಮೆ ಮಾದಿಗರ ದೊಡ್ಡ ಚಳವಳಿ ನಡೆಸಿ ಸರ್ಕಾರಕ್ಕೆ ಬುದ್ಧಿ ಕಲಿಸುತ್ತೇವೆ ಎಂದರು.

## ಕೆ.ಹೆಮ್ಮನಹಳ್ಳಿಯಲ್ಲಿ ಭಗೀರಥ ವಿಜಯ ಯಕ್ಷಗಾನ ಬಯಲಾಟ

ಮೈಸೂರು, ಸೆ.2–ನಗರದ ಹೊರವಲಯದ ಗದ್ದಿಗೆ ರಸ್ತೆಯಲ್ಲಿರುವ (ಬೋಗಾದಿಯಿಂದ 9 ಕಿಮೀ) ಕೆ. ಹೆಮ್ಮನಹಳ್ಳಿ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಶುಕ್ರವಾರ (ಸೆ.5) ಸಂಜೆ 6 ಗಂಟೆಯಿಂದ ಭಗೀರಥ ವಿಜಯ ಯಕ್ಷಗಾನ ಬಯಲಾಟ ಪ್ರದರ್ಶನ ನಡೆಯಲಿದೆ. ಸಗರ ಚಕ್ರವರ್ತಿಯ ಅಶ್ವಮೇಧ ಯಾಗ, ಯಾಗದ ಕುದುರೆ ಕಳವು, ಕುದುರೆ ಹುಡುಕಲು ಹೋದ ಆತನ ಮಕ್ಕಳ ಅಕಾಲ ಮರಣ, ವೃತಾಸುರ, ಕಾಲಾಕ್ಷ, ಕಾಲಯರ ಉಪಟಳ, ಅಗಸ್ತ್ಯರಿಂದ ಸಮುದ್ರ ಆಪೋಷಣೆ, ಸಗರನ ಮೊಮ್ಮಗ ಭಗೀರಥ ತಪಸ್ಸು ಆಚರಿಸಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಒಲಿಸಿ ದೇವ ಲೋಕದಲ್ಲಿ ಹರಿಯುತ್ತಿದ್ದ ಪವಿತ್ರ ಗಂಗೆಯನ್ನು ಭೂಮಿಗಿಳಿಸಿದ ಕಥೆ ಈ ಯಕ್ಷಗಾನದ ಕಥಾಸಾರಾಂಶ. ದಕ್ಷಿಣ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಶ್ರೀ ಧರ್ಮಸ್ಥಳ, ಕಟೀಲು ಹನುಮಗಿರಿಯ ಜನಪ್ರಿಯ ಕಲಾವಿದರ ತಂಡವನ್ನು ಒಳಗೊಂಡ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ ನಿಡ್ಲೆ, ಧರ್ಮಸ್ಥಳ ಇವರು ಈ ಯಕ್ಷಗಾನ ಪ್ರದರ್ಶಿಸಲಿದ್ದಾರೆ.

## ಇಂದಿನಿಂದ ಪೈಗಂಬರ್ ಮೊಹಮ್ಮದ್ ಸೀರತ್ ಅಭಿಯಾನ



ಶಾಂತಿ ಪ್ರಕಾಶನ ವತಿಯಿಂದ ಪ್ರಕಟಿಸಿರುವ 'ಪ್ರವಾದಿ ಮೊಹಮ್ಮದರನ್ನು (ಸ) ಅರಿಯಿರಿ' ಮತ್ತು 'ಭಾರತೀಯ ಸಮಾಜದಲ್ಲಿ ಪ್ರವಾದಿ ಮೊಹಮ್ಮದರ(ಸ) ಆದರ್ಶದ ಔಚಿತ್ಯ' ಕೃತಿಗಳನ್ನು ಕೆ.ಎಸ್.ಶಿವರಾಮು ಬಿಡುಗಡೆಗೊಳಿಸಿದರು.

ಮೈಸೂರು, ಸೆ.2(ಜಿಎ)–ಜಮಾಅತೆ ಇಸ್ಲಾಮೀ ಹಿಂದ್‌ನ ಮೈಸೂರು ಶಾಖೆ ವತಿಯಿಂದ ಸೆ.3ರಿಂದ 14ರವರೆಗೆ 'ನ್ಯಾಯದ ಹರಿಕಾರ ಪೈಗಂಬರ್ ಮೊಹಮ್ಮದ್' ಸೀರತ್(ಚರಿತ್ರೆ) ಅಭಿಯಾನದ ಅಂಗವಾಗಿ ವಿವಿಧ ಸೇವಾ ಕಾರ್ಯದ ಜೊತೆ ಪೈಗಂಬರ್ ಮೊಹಮ್ಮದ್ ಅವರ ಸಂದೇಶವನ್ನು ಸಾರಲಾಗುತ್ತಿದೆ ಎಂದು ಸಂಘಟನೆಯ ವಲಯ ಶಾಖೆ ಅಧ್ಯಕ್ಷ ಮೊಹಮ್ಮದ್ ಅಸ್ಲಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರೆಬಿಕ್ ಕ್ಯಾಲೆಂಡರ್ ಪ್ರಕಾರ ಪ್ರವಾದಿ ಪೈಗಂಬರ್ ಮೊಹಮ್ಮದ್ ಈ ತಿಂಗಳಿನಲ್ಲಿ ಜನಿಸಿದರು. ಈ ಹಿನ್ನೆಲೆಯಲ್ಲಿ ರಾಜ್ಯ ಜಮಾಅತೆ ಇಸ್ಲಾಮೀ ಹಿಂದ್ ಸಂಘಟನೆ ವತಿಯಿಂದ ಸೆ.3ರಿಂದ 14ರವರೆಗೆ ರಕ್ತದಾನ ಶಿಬಿರ, ಸ್ವಚ್ಛತಾ ಕಾರ್ಯಕ್ರಮ ಹಾಗೂ ಪ್ರವಾದಿ ಮೊಹಮ್ಮದ್‌ರ ಜೀವನ ಮೌಲ್ಯಗಳನ್ನು ತಿಳಿಸಲು ಮುಂದಾಗಿದೆ ಎಂದು ಹೇಳಿದರು.

ಮೈಸೂರಿನಲ್ಲಿ ಸೆ.13ರಂದು ಸಂಜೆ 7 ಗಂಟೆಗೆ ಸಿದ್ಧಿಕ್ ನಗರದಲ್ಲಿರುವ ಮಿಲನ್ ಫಂಕ್ಷನ್ ಹಾಲ್‌ನಲ್ಲಿ 'ಪ್ರವಾದಿ ಮಹಮ್ಮದ್ (ಸ)ನ್ಯಾಯದ ಹರಿಕಾರ' ಎಂಬ ಸೀರತ್ ಸಮಾವೇಶವನ್ನು ಆಯೋಜಿಸಲಾಗಿದ್ದು, ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಮಠಾಧೀಶರು, ಧಾರ್ಮಿಕ ಗುರುಗಳು, ಗಣ್ಯ ವ್ಯಕ್ತಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.


ಈ ವೇಳೆ ಶಾಂತಿ ಪ್ರಕಾಶನದ ವತಿಯಿಂದ ಪ್ರಕಟಿಸಿರುವ 'ಪ್ರವಾದಿ ಮೊಹಮ್ಮದರ(ಸ) ಅರಿಯಿರಿ' ಮತ್ತು 'ಭಾರತೀಯ ಸಮಾಜದಲ್ಲಿ ಪ್ರವಾದಿ ಮೊಹಮ್ಮದರ(ಸ) ಆದರ್ಶದ ಔಚಿತ್ಯ' ಎಂಬ ಎರಡು ಕೃತಿಗಳನ್ನು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಶಿವರಾಮು, 'ಪ್ರವಾದಿ ಮೊಹಮ್ಮದ್ ಅವರು ಜಾತಿ, ಧರ್ಮವನ್ನು ಮೀರಿ ಸೌಹಾರ್ದತೆಯಿಂದ ಬದುಕಬೇಕು ಎಂದು ತಿಳಿಸಿದ್ದಾರೆ. ಆದರೆ ಇಂದು ಸಮಾಜದಲ್ಲಿ ರಾಜಕಾರಣಿಗಳು ಓಟ್ ಬ್ಯಾಂಕ್‌ಗಾಗಿ ಜಾತಿ, ಧರ್ಮಗಳ ನಡುವೆ ವೈಷಮ್ಯವನ್ನು ಮೂಡಿಸುತ್ತಿದ್ದಾರೆ ಎಂದರು.

ದಸರಾ ನಾಡಹಬ್ಬ. ಅದು ಒಂದು ಕೋಮು, ಧರ್ಮಕ್ಕೆ ಸೀಮಿತವಲ್ಲ. ದಸರಾ ಒಂದು ಧರ್ಮದ ಹಬ್ಬ ಎಂಬುದು ತಪ್ಪು. ರಾಜ್ಯಸರ್ಕಾರ ಬಾನು ಮುಷ್ತಾಕ್ ಅವರ ಸಾಹಿತ್ಯ ಪ್ರಭುತ್ವದ ಅಂಶದಿಂದ ದಸರಾ ಉದ್ಘಾಟನೆಗೆ ಆಯ್ಕೆ ಮಾಡಿದೆ. ಆದರೆ, ಕೆಲ ವ್ಯಕ್ತಿಗಳು ಅಪಸ್ವರ ಸೃಷ್ಟಿಸುತ್ತಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಅಬ್ದುಸ್ಸಲಾಮ್, ಕಲೀಮ್ ಅಹ್ಮದ್, ಮುಹಮ್ಮದ್ ಅಸ್ಲಂ, ಖಲೀಲುರ್ರಹ್ಮಾನ್ ವಸೀಮ್, ನೂರ್ ಮುಹಮ್ಮದ್ ಮರ್ಚೆಂಟ್, ಮುಹಮ್ಮದ್ ಉಮರ್ ಫಾರೂಖ್, ಶೇಖ ಅಸದುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

# ಮೈಸೂರಿನ ಸಿಎಸ್‌ಆರ್‌ಟಿಐ ನಿರ್ದೇಶಕರ ವಸತಿ ಗೃಹದಲ್ಲಿ ಮರಗಳ ಮಾರಣ ಹೋಮ





ಮೈಸೂರಿನ ಜೆಎಲ್‌ಬಿ ರಸ್ತೆಯ ಸಿಎಸ್‌ಆರ್‌ಟಿಐ ನಿರ್ದೇಶಕರ ವಸತಿ ಗೃಹದಲ್ಲಿ ಮರಗಳನ್ನು ಕತ್ತರಿಸಿರುವ ದೃಶ್ಯ

ಮೈಸೂರು, ಸೆ.2(ಬಿಎಲ್‌ಯು)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿಎಸ್‌ಆರ್‌ಟಿಐ)ಯ ನಿರ್ದೇಶಕರ ವಸತಿ ಗೃಹದ ಆವರಣದಲ್ಲಿ ಮರಗಳ ಮಾರಣ ಹೋಮವೇ ನಡೆದಿದೆ.

ಮರ ಉಳಿಸಿ, ಪರಿಸರ ಸಂರಕ್ಷಿಸಿ, ಸಂದೇಶ ಸಾರುವ ಸರ್ಕಾರದ ಇಲಾಖೆಗಳೇ ವೃಕ್ಷ ನಾಶ ಮಾಡುತ್ತಿವೆ. ಈಗ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಿಎಸ್‌ಆರ್‌ಟಿಐ ಸರದಿ. ಸಿಎಸ್‌ಆರ್‌ಟಿಐನ ನಿರ್ದೇಶಕರ ವಸತಿ ಗೃಹದಲ್ಲಿ ಸುಮಾರು 10 ಕ್ಕೂ ಹೆಚ್ಚು ಮರಗಳನ್ನು ಕತ್ತರಿಸಿದ್ದಾರೆ. ವಸತಿ ಗೃಹ ಆವರಣದಲ್ಲಿ ಸಮೃದ್ಧವಾಗಿ ಬೆಳೆದಿದ್ದ ವೃಕ್ಷಗಳನ್ನು ಕಡಿದು ವಿಕೃತಿ ಮೆರೆಯಲಾಗಿದೆ.

ಸಿಎಸ್‌ಆರ್‌ಟಿಐ ನಿರ್ದೇಶಕರಿಗೆ ಜೆಎಲ್‌ಬಿ ರಸ್ತೆಯ ಸೆಂಟ್ರಲ್ ಸಿಲ್ಕ್ ಬೋರ್ಡ್‌ನ ಆವರಣದಲ್ಲಿ ವಸತಿ ಗೃಹ ನೀಡಲಾಗಿದೆ. ಎರಡು ವರ್ಷಕ್ಕೊಮ್ಮೆ ನಿರ್ದೇಶಕರು ಬದಲಾಗುತ್ತಾರೆ. ಯಾವ ನಿರ್ದೇಶಕರೂ ಇಲ್ಲಿ ವಾಸ್ತವ್ಯ ಹೂಡಿರುವುದು ಕಂಡಿಲ್ಲ. ಹಾಗಾಗಿ ವಸತಿ ಗೃಹ ಭೂತ ಬಂಗಲೆಯಂತೆ ಬಿಂಬಿತವಾಗಿದೆ.

ಯಾರೂ ವಾಸ್ತವ್ಯ ಹೂಡದೆ, ಯಾವ ತೊಂದರೆ ಇಲ್ಲದೆ ಹತ್ತಾರು ವರ್ಷಗಳಿಂದ ಹಸಿರಿನಿಂದ ಕಂಗೊಳಿಸುತ್ತಿದ್ದ ಮರಗಳನ್ನು ಈಗ ಕತ್ತರಿಸಲಾಗಿದೆ. ಪರಿಸರ ಸಂರಕ್ಷಣೆ ಮಾಡಿ ಎಂದು ಸಂದೇಶ ಸಾರುವ ಸರ್ಕಾರಿ ಅಧಿಕಾರಿಗಳೇ ಮರಗಳಿಗೆ ಕೊಡಲಿ ಹಾಕಿರುವುದು ಪರಿಸರ ಪ್ರೇಮಿಗಳಿಗೆ ಬೇಸರ ತರಿಸಿದೆ.

# ನೆಲಸಮಗೊಂಡ ಗಿರಿಜಾ ಚಿತ್ರಮಂದಿರ

ಮಂಡ್ಯ, ಸೆ.2–ತೊಂಬತ್ತರ ದಶಕದಲ್ಲಿ ಕನ್ನಡ ಸಿನಿಮಾಗಳಿಗೆ, ತದನಂತರ ಪರ ಭಾಷಾ ಚಿತ್ರಕ್ಕೆ ಬಹು ಬೇಡಿಕೆಯ ಚಿತ್ರ ಮಂದಿರವಾಗಿ ಹೆಸರುವಾಸಿಯಾಗಿದ್ದ ಗಿರಿಜಾ ಚಿತ್ರಮಂದಿರ ನೆಲಸಮಗೊಂಡಿದೆ.

ಪ್ರೇಕ್ಷಕರ ಕೊರತೆ, ಆರ್ಥಿಕ ಸಂಕಷ್ಟ, ಚಿತ್ರಮಂದಿರವನ್ನು ನಡೆಸುವುದಕ್ಕೆ ಆಗದ ಹಿನ್ನಲೆಯಲ್ಲಿ ಮಾಲೀಕರು ಕೊರೋನಾ ಆರಂಭಕ್ಕೂ ಮುನ್ನ 2017ರಲ್ಲಿ ಚಿತ್ರಮಂದಿರವನ್ನು ಸ್ಥಗಿತಗೊಳಿಸಿದ್ದರು. ಅದಾದ ಮೇಲೆ ನಾನಾ ಕಾರಣಗಳಿಂದ ಚಿತ್ರಮಂದಿರ ಪುನರಾರಂಭವಾಗಲೇ ಇಲ್ಲ. ಇದೀಗ ಚಿತ್ರ ಮಂದಿರವನ್ನು ಸಂಪೂರ್ಣ ನೆಲಸಮಗೊಳಿಸಲಾಗಿದ್ದು, ಮುಂದೆ ವಾಣಿಜ್ಯ ಮಳಿಗೆಗಳು ತಲೆಯೆತ್ತುವ ಸಾಧ್ಯತೆ ಇದೆ.



ನಗರದಲ್ಲಿ ಪ್ರಸಿದ್ಧಗೊಂಡಿದ್ದ ಗಿರಿಜಾ ಚಿತ್ರಮಂದಿರ ಹಿಂದಿನ ಮತ್ತು ಇಂದಿನ ಚಿತ್ರ

**ದಶಕದ ಚಿತ್ರಮಂದಿರ:** 70ರ ದಶಕದಲ್ಲಿ ನಿರ್ಮಾಣಗೊಂಡಿದ್ದ ಈ ಚಿತ್ರಮಂದಿರ ಅಂದಿನ ಕನ್ನಡ ಚಿತ್ರಗಳಿಗೆ ಹೆಸರುವಾಸಿಯಾಗಿತ್ತು. ನಗರದ ಫ್ಯಾಕ್ಟರಿ ವೃತ್ತದಿಂದ ಸ್ವಲ್ಪ ಮುಂದೆ ಇದ್ದ ಈ ಚಿತ್ರಮಂದಿರ ನಗರದ ಹೃದಯ ಭಾಗದಿಂದ ಸಮಾರು ಮೂರ್‍ನಾಲ್ಕು ಕಿ.ಮೀ ದೂರವಿದ್ದರೂ ಇಲ್ಲಿ ಪ್ರದರ್ಶನವಾಗುವ ಚಿತ್ರಗಳಿಗೆ ಬಹು ಬೇಡಿಕೆ ಇತ್ತು. ಆ ಕಾಲಘಟ್ಟದಲ್ಲಿ ಸಂಜಯ, ನಂದಾ ಹಾಗೂ ಗಿರಿಜಾ ಚಿತ್ರಮಂದಿರ ನಗರ ಭಾಗದಲ್ಲಿ ಪ್ರಮುಖವಾಗಿದ್ದರಿಂದ ಅಂದಿನ ಕನ್ನಡ ಸಿನಿಮಾಗಳಿಗೆ ಈ ಚಿತ್ರಮಂದಿರ ಹೆಸರುವಾಸಿಯಾಗಿತ್ತು.

**ಡಾ.ರಾಜ್ ಚಿತ್ರಗಳಿಗೆ ಬೇಡಿಕೆ:** ನಗರದಲ್ಲಿ ವರನಟ ಡಾ.ರಾಜ್‌ಕುಮಾರ್ ಸಿನಿಮಾಗಳಿಗೆ ಸಂಜಯ ನೆಚ್ಚಿನ ಚಿತ್ರ ಮಂದಿರವಾಗಿದ್ದರೂ ಗಿರಿಜಾ ಚಿತ್ರ ಮಂದಿರದಲ್ಲೂ ಡಾ.ರಾಜ್‌ಕುಮಾರ್ ಸಿನಿಮಾಗಳಿಗೆ ಬೇಡಿಕೆ ಇತ್ತು. ಗಂಧದ ಗುಡಿ, ಬಬ್ರುವಾಹನ, ಸಿಪಾಯಿರಾಮು, ಬಹದ್ದೂರ್ ಗಂಡು, ಸಂಪತ್ತಿಗೆ ಸವಾಲ್ ಸಿನಿಮಾಗಳು ಇಲ್ಲಿ ನೂರು ದಿನಕ್ಕೂ ಅಧಿಕ ಪ್ರದರ್ಶನ ಕಂಡಿದ್ದರೆ, ಡಾ.ರಾಜ್ ಇನ್ನೂ ಅನೇಕ ಸಿನಿಮಾಗಳು ಇಲ್ಲಿ ಬಿಡುಗಡೆಯಾಗಿ ಯಶಸ್ವಿ ಕಂಡಿದೆ. ಇದಲ್ಲದೆ ಶಂಕರ್‌ನಾಗ್ ನಟನೆಯ ಆಟೋರಾಜ, ಅಂಬರೀಷ್ ನಟನೆಯ ಹೃದಯ ಬಂಧನ, ರಾಣಿ ಮಹಾರಾಣಿ, ದಿಗ್ವಿಜಯ, ಡಾ.ವಿಷ್ಣುವರ್ಧನ್ ನಟನೆಯ ಮೋಜುಗಾರ ಸೊಗಸುಗಾರ, ಕಳ್ಳಕುಳ್ಳ ಸೇರಿದಂತೆ ಇನ್ನೂ ಅನೇಕ ಕನ್ನಡ ಚಿತ್ರಗಳು ಇಲ್ಲಿ ನೂರು ದಿನಕ್ಕೂ ಹೆಚ್ಚಿನ ಪ್ರದರ್ಶನ ಕಂಡು ದಾಖಲೆ ಬರೆದಿವೆ.

**ಪರಭಾಷಾ ಚಿತ್ರಗಳಿಗೆ ಹೆಸರುವಾಸಿ:** 90ರ ದಶಕದಲ್ಲಿ ನಗರದಲ್ಲಿ ಗುರುಶ್ರೀ, ಸಿದ್ಧಾರ್ಥ, ಮಹಾವೀರ ಚಿತ್ರಮಂದಿರಗಳು ತಲೆ ಎತ್ತಿದ ಕಾರಣ ಹೊರ ವಲಯದಲ್ಲಿದ್ದ ಗಿರಿಜಾ ಚಿತ್ರಮಂದಿರದಲ್ಲಿ ಕನ್ನಡ ಚಿತ್ರದ ಬೇಡಿಕೆ ಕ್ಷೀಣಿಸಿತು. ಕ್ರಮೇಣ ಈ ಚಿತ್ರ ಪರಭಾಷಾ ಸೆಂಟರ್ ಆಗಿತ್ತು. ಅಷ್ಟೊತ್ತಿಗಾಗಲೇ ತೆರೆಕಂಡಿದ್ದ ಅಮಿತಾಬ್ ಬಚ್ಚನ್ ಅಭಿನಯದ ಶೋಲೆ, ಡಾನ್ ಭರ್ಜರಿ ಯಶಸ್ಸು ಕಂಡಿತ್ತು. 90ರ ನಂತರ ಬಂದ ಅನೇಕ ಪರಭಾಷಾ ಸಿನಿಮಾಗಳು ಸೂಪರ್‌ಹಿಟ್ ಆಗಿ ಗಿರಿಜಾ ಚಿತ್ರಮಂದಿರದಲ್ಲಿ ಪರಭಾಷಾ ಸಿನಿಮಾಗಳೇ ಯಶಸ್ಸು ಗಳಿಸಿದ್ದವು.

# ಜಿಲ್ಲಾಧಿಕಾರಿಗಳಿಂದ ರಾಷ್ಟ್ರೀಯ ಹೆದ್ದಾರಿ ಪರಿಶೀಲನೆ

ಮಂಡ್ಯ, ಸೆ.2– ಜಿಲ್ಲೆಯಲ್ಲಿ ಹಾದು ಹೋಗಿರುವ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಡಾ॥ ಕುಮಾರ ಪರಿಶೀಲನೆ ನಡೆಸಿದರು.

ಶ್ರೀರಂಗಪಟ್ಟಣ ತಾಲೂಕಿನ ತೂಬಿನಕೆರೆ ಗ್ರಾಮದ ಬಳಿಯಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಅಪೂರ್ಣ ಒಳಚರಂಡಿ ಕಾಮಗಾರಿಯ ಪರಿಶೀಲನೆ ನಡೆಸಿ, ಸದರಿ ಕಾಮಗಾರಿ ಪೂರ್ಣಗೊಳಿಸುವಂತೆ ಹಾಗೂ ಜಿಲ್ಲಾದ್ಯಂತ ಅಪೂರ್ಣಗೊಂಡಿರುವ ಒಳ ಚರಂಡಿಗಳ ಕಾಮಗಾರಿಗಳನ್ನೂ ಸಹ ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

ತೂಬಿನಕೆರೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆಯ ನಿರ್ಗಮನ ಕೇಂದ್ರದ ಬಳಿ ಹೆಚ್ಚು ವಾಹನಗಳ ದಟ್ಟಣೆಯಾಗುತ್ತಿದ್ದು, ಇದರಿಂದಾಗಿ ನಿರಂತರವಾಗಿ ಹೆಚ್ಚಿನ ಅಪಘಾತಗಳಾಗುತ್ತಿರುವುದರಿಂದ ಚಾಲಕರಿಗೆ ಹಾಗೂ ಪಾದಚಾರಿಗಳಿಗೆ ನಿಖರವಾಗಿ ಹಾಗೂ ಸ್ಪಷ್ಟವಾಗಿ ಸೂಚನೆ ನೀಡುವ ಫಲಕಗಳನ್ನು ಅಳವಡಿಸಿ, ಅಂಡರ್ ಪಾಸ್‌ಗಳಲ್ಲಿ ಚಾಲಕರಿಗೆ ವಾಹನ ಚಾಲನೆಯ ಸಮಯದಲ್ಲಿ ಅತಿ ಹೆಚ್ಚಿನ ಬೆಳಕಿನ ವ್ಯವಸ್ಥೆಗಾಗಿ ಸೂಕ್ತ ಲೈಟಿಂಗ್ಸ್ ವ್ಯವಸ್ಥೆ ಮಾಡಬೇಕು. ಅಕ್ಕ–ಪಕ್ಕದ ಗ್ರಾಮಗಳ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪಾದಚಾರಿ ಸೇತುವೆಗಳನ್ನು ನಿರ್ಮಾಣ ಮಾಡಲು ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.



ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸಂಬಂಧಿಸಿದಂತೆ ಡಿಸಿ ಡಾ॥ ಕುಮಾರ ಪರಿಶೀಲನೆ ನಡೆಸಿದರು.

ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ರಾಷ್ಟ್ರ ಮಟ್ಟದ ಅತ್ಯುತ್ತಮ ಯೋಜನೆಯಾಗಿದ್ದು, ಜಿಲ್ಲೆಯ ಸಾರಿಗೆ, ಪ್ರವಾಸೋದ್ಯಮ ವಲಯಗಳ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ. ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಜೊತೆಗೆ ಸುರಕ್ಷಿತ ರಸ್ತೆ ಪ್ರಯಾಣಕ್ಕೆ ಅನುಕೂಲವಾಗಿರುವ ಹೆದ್ದಾರಿಗೆ ಸಂಬಂಧಿಸಿದಂತೆ ಅಪೂರ್ಣವಾಗಿರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸುವಂತೆ, ಜೊತೆಗೆ ಅಪಘಾತಗಳನ್ನು ತಪ್ಪಿಸುವಲ್ಲಿ ಸೂಕ್ತ ರಸ್ತೆ ಸುರಕ್ಷತಾ ಕ್ರಮಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಹೆಚ್ಚುವರಿ ಆರಕ್ಷಕ ಅಧೀಕ್ಷಕ ತಿಮ್ಮಯ್ಯ ರಾಷ್ಟ್ರೀಯ ಹೆದ್ದಾರಿ ಯೋಜನಾ ನಿರ್ದೇಶಕ ಎಂ.ಎಸ್ ಒಬಲೇ ಈ ವೇಳೆ ಹಾಜರಿದ್ದರು.

# ಸರಗಳ್ಳನ ಬಂಧನ: ಚಿನ್ನಾಭರಣ ವಶ

ನಾಗಮಂಗಲ, ಸೆ.2– ತಾಲೂಕಿನ ಹಲವು ಕಡೆ ಸರಗಳ್ಳತನ ಮಾಡಿದ್ದ ಆರೋಪಿಯೊಬ್ಬನನ್ನು ಬೆಳ್ಳೂರು ಪೊಲೀಸರು ಬಂಧಿಸಿ ಆತನಿಂದ 7 ಲಕ್ಷ ರೂ ಮೌಲ್ಯದ 69 ಗ್ರಾಂ ತೂಕದ ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.



ವಶಪಡಿಸಿಕೊಂಡ ಚಿನ್ನಾಭರಣಗಳೊಂದಿಗೆ ಪೊಲೀಸರು.

ತುಮಕೂರು ಜಿಲ್ಲೆ, ಶಿರಾ ತಾಲೂಕಿನ ಭೂತೇಶ್ವರ ನಗರ (ಭೂತಪ್ಪನ ಗುಡಿ) ಗ್ರಾಮದ ತಿಪ್ಪೇಶ ಅಲಿಯಾಸ್ ಭರತ್ ಬಿನ್ ಹನುಮಂತಪ್ಪ (33) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಈತ ಗಾರೆ ಕೆಲಸ ಹಾಗೂ ತಲೆ ಕೂದಲು ವ್ಯಾಪಾರ ಮಾಡುತ್ತಿದ್ದ ಎನ್ನಲಾಗಿದೆ.

ತಾಲೂಕಿನ ಬೆಳ್ಳೂರು ಹೋಬಳಿ ವಡ್ಡರಹಳ್ಳಿ ಗ್ರಾಮದ ಕಿರಣ್ ಕುಮಾರ್ ಎಂಬಾತ ತನ್ನ ಡಿಯೋ ಹೋಂಡಾ ಬೈಕ್‌ನಲ್ಲಿ ಬೆಳ್ಳೂರು ಕ್ರಾಸ್ ಕಡೆಗೆ ಬರುತ್ತಿದ್ದಾಗ ಸಮೃದ್ಧಿ ಹೋಟೆಲ್ ಎದುರು ಹಿಂದಿನಿಂದ ಬಂದ ಬೈಕ್ ಸವಾರ ಕತ್ತಿನಲ್ಲಿದ್ದ ಸುಮಾರು 30 ಗ್ರಾಂ ತೂಕದ ಚಿನ್ನದ ಸರವನ್ನು ಆ. 15ರ ಬೆಳಿಗ್ಗೆ 10.30ರ ಸಮಯದಲ್ಲಿ ಅಪಹರಿಸಿದ್ದಾನೆಂದು ದೂರು ನೀಡಿದ್ದರು.

ನಾಗಮಂಗಲ ಸರ್ಕಲ್ ಇನ್ಸ್‌ಪೆಕ್ಟರ್ ನಿರಂಜನ್ ಕೆ ಎಸ್, ಬೆಳ್ಳೂರು ಸರ್ಕಲ್ ಇನ್ಸ್‌ಪೆಕ್ಟರ್ ವೈ ಎನ್ ರವಿಕುಮಾರ್, ಪ್ರಶಾಂತ್ ಕುಮಾರ್, ಇಂದ್ರ ಕುಮಾರ್, ಮಧುಕುಮಾರ್, ರವಿಕಿರಣ್, ಲೋಕೇಶ್, ಸಿಪಿಸಿ ಶಂಕರ್ ನಾಯಕ್, ದಿನೇಶ್, ಕಿರಣ್ ಕುಮಾರ್, ಪ್ರಕಾಶ್, ಹಾಗೂ ಸಿದ್ದಪ್ಪ ರವ ರನ್ನೊಳಗೊಂಡ ತಂಡವನ್ನು ರಚನೆ ಮಾಡಲಾಗಿತ್ತು. ಈ ತಂಡ ಆ.28ರ ಮಧ್ಯಾಹ್ನ 4 ಗಂಟೆ ಸಮಯದಲ್ಲಿ ತಾಲೂಕಿನ ಚಂದ್ರಶೇಖರಪುರ ಗ್ರಾಮದ ಹತ್ತಿರ ಆರೋಪಿಯನ್ನು ಬಂಧಿಸಿದರು. ಅಲ್ಲದೆ ಆತ ಕೃತ್ಯವೆಸಗಲು ಬಳಸಿದ ಬೈಕನ್ನು ವಶಕ್ಕೆ ಪಡೆದಿದ್ದಾರೆ.

ಈತ ಹೊಸಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಎರಡು ಸರಗಳ್ಳತನ ಪ್ರಕರಣದಲ್ಲಿ ಭಾಗಿಯಾಗಿರುವುದು ವಿಚಾರಣೆಯಿಂದ ತಿಳಿದು ಬಂದಿದೆ.

ಬೆಳ್ಳೂರು ಪೊಲೀಸರ ಕಾರ್ಯ ವೈಖರಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಶ್ಲಾಘಿಸಿದ್ದಾರೆ.

# ವಿದ್ಯಾರ್ಥಿಗಳು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಿ

ಪಾಂಡವಪುರ,ಸೆ.2–ವಿದ್ಯಾರ್ಥಿಗಳು ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಕ್ರೀಡೆಗಳು ಮಹತ್ವದ ಪಾತ್ರ ವಹಿಸುತ್ತದೆ ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದ ಜೊತೆಯಲ್ಲಿ ಕ್ರೀಡೆಯನ್ನು ಬೆಳಸಿಕೊಳ್ಳಬೇಕೆಂದು ಪ್ರಾಂಶುಪಾಲ ಎಂ.ಎಸ್. ದೀಲಿಪ್ ಕುಮಾರ್ ತಿಳಿಸಿದ್ದಾರೆ.

ಪಾಂಡವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದತಾಲೂಕಿನ ಮಹದೇಶ್ವರಪುರ ಬಿ.ಆರ್. ಅಂಬೇಡ್ಕರ್ ಬಾಲಕಿಯರ ಪ್ರೌಢಶಾಲಾ ವಿಭಾಗದ ಮೇಲುಕೋಟೆ ಹೋಬಳಿಮಟ್ಟದ ಕ್ರೀಡಾಕೂಟದಲ್ಲಿ ಮಾತನಾಡಿ ಪ್ರತಿಯೊಬ್ಬರು ದೈಹಿಕವಾಗಿ ಬಲಿಷ್ಠರಾದಾಗ ಮಾತ್ರ ಮಾನಸಿಕವಾಗಿ ಸಾಧಿಸಲು ಸಾಧ್ಯ ಕ್ರೀಡೆಗಳಿಂದ ಬುದ್ದಿ ಚುರುಕಾಗುತ್ತದೆ ಹೀಗಾಗಿ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಸ್ಪರ್ಧಾಸ್ಪೂರ್ತಿಯಿಂದ ಭಾಗ ವಹಿಸಬೇಕೆಂದರು.

ಜಿಲ್ಲಾ ಸಮನ್ವಯಾಧಿಕಾರಿ ಅಭಿಲಾಷ್ ಮಾತನಾಡಿ ಕ್ರೀಡೆಯಲ್ಲಿ ಸೋಲು–ಗೆಲುವು ಸಹಜ. ಆದರೆ ಕ್ರೀಡೆಯಲ್ಲಿ ಭಾಗವಹಿಸಿದಾಗ ಸೋಲನ್ನು ಸವಾಲಾಗಿ ಪರಿಗಣಿಸಿದಾಗ ಹೆಚ್ಚೆಚ್ಚು ಸಾಧನೆಗೆ ಅವಕಾಶವಿರುತ್ತದೆ ಪ್ರತಿ ದಿನವೂ ಸಹ ಸೋಲು ಮತ್ತು ಗೆಲುವಿನಿಂದ ಕಲಿಯುವುದು ಬಹಳಷ್ಟಿರುತ್ತದೆ ಹಾಗಾಗಿ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯವೆಂದರು



ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಧರ್ಮಶೆಟ್ಟಿ ಉದ್ಘಾಟಿಸಿದರು.

ಬಿಇಓ ಧರ್ಮಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕ್ರೀಡಾಕೂಟದಲ್ಲಿ ಮಹದೇಶ್ವರ ಪ್ರೌಢ ಶಾಲೆ, ಕಿತ್ತುರುರಾಣಿ ಚೆನ್ನಮ್ಮ, ಟಿ.ಎಸ್. ಛತ್ರ, ಕೆರೆತೊಣ್ಣರು, ಹುಳಿಗೆರೆ, ಲಕ್ಷ್ಮಿಸಾಗರ, ಚಿಟ್ಟನಹಳ್ಳಿ, ಜಕ್ಕನಹಳ್ಳಿ, ಗುರುಶನೇಶ್ವರ, ಬೆಳ್ಳಳೆ, ಮೂಡಲ ಕೊಪ್ಪಲುವಿನ ಪ್ರೌಢಶಾಲೆಗಳ 650ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಜಯರಾಮು, ತಾಲೂಕು ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೇಶವ ಮೂರ್ತಿ, ಸಂಘದ ಅಧ್ಯಕ್ಷ ರಮೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆಂಪೇಗೌಡ, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ್, ದೈಹಿಕ ಶಿಕ್ಷಕರ ಶಿಕ್ಷಣದ ಪರಿವೀಕ್ಷಕ ಮಾದೇಶ್, ಕಾರ್ಯದರ್ಶಿ ಶ್ರೀನಿವಾಸ್, ಸಂಘದ ಅಧ್ಯಕ್ಷ ಯೋಗೀಶ್, ಮೊದಲಾದ ದೈಹಿಕ ಶಿಕ್ಷಕರಿದ್ದರು

# ಪ.ಜಾತಿ ಸಂಘದ ತಾಲೂಕು ಪದಾಧಿಕಾರಿಗಳ ಸಭೆ

ಕೆ.ಆರ್.ಪೇಟೆ,ಸೆ.2–ತಾಲೂಕು ಹಂದಿ ಜೋಗಿ ಪರಿಶಿಷ್ಟ ಜಾತಿ ಸಂಘದ ತಾಲೂಕು ಪದಾಧಿಕಾರಿಗಳ ಸಭೆಯು ಎಲ್.ಆರ್.ಸ್ವಾಮಿ ಲಕ್ಷ್ಮೀಪುರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಉದ್ಘಾಟಿಸಿದ ಎಲ್.ಆರ್. ಸ್ವಾಮಿ ಲಕ್ಷ್ಮೀಪುರ ಮಾತನಾಡಿ ಹಂದಿ ಜೋಗಿ ಸೇರಿದಂತೆ ಸುಮಾರು 49 ಅಲೆಮಾರಿ ಜನಾಂಗಕ್ಕೆ ಪ್ರತ್ಯೇಕ ಮೀಸಲಾತಿ ಕಲ್ಪಿಸಬೇಕು ಎಂದು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗವು ವರದಿ ನೀಡಿದೆ. ಆದರೆ ಸರ್ಕಾರವು ನಮ್ಮ ಅಲೆಮಾರಿ ಸಮುದಾಯಕ್ಕೆ ಶೇ.1ರಷ್ಟು ಮೀಸಲಾತಿಯನ್ನೇ ನೀಡದೇ ಅಲೆಮಾರಿ ಸಮುದಾಯದ ಗುಂಪಿಗೆ ಸ್ಪೃಶ್ಯ ಸಮು ದಾಯಗಳಾದ ಬೋವಿ, ಲಂಬಾಣಿ, ಕೊರಮ, ಕುಳುವ ಸಮುದಾಯವನ್ನು ಸೇರಿಸುವ ಮೂಲಕ ಅತಿ ಹಿಂದುಳಿದ ಅಲೆಮಾರಿ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿರುವುದು ಸರಿಯಲ್ಲ ಎಂದು ಆರೋಪಿಸಿದರು

ಅಲೆಮಾರಿ ಸಮುದಾಯದ ರಾಜ್ಯ ಮಟ್ಟದ ಸಂಘಟನೆಯ ವತಿಯಿಂದ ಇದೇ ಸೆ.3 ಮತ್ತು ಸೆ.6ರಂದು ರಾಜ್ಯ ಮಟ್ಟದ ಅಲೆಮಾರಿ ಸಮುದಾಯಗಳ ಸಂಘಗಳು ಬೆಂಗಳೂರಿನಲ್ಲಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ತಾಲೂಕು ಹಂದಿಜೋಗಿ ಪರಿಶಿಷ್ಟ ಜಾತಿ ಸಂಘದ ಗೌರವಾಧ್ಯಕ್ಷ ತೇಗನಹಳ್ಳಿ ಸ್ವಾಮಿ, ಉಪಾಧ್ಯಕ್ಷ ಮಾಣಿ ಕ್ಯನಹಳ್ಳಿ ಶಿವಣ್ಣ, ಕಾರ್ಯದರ್ಶಿ ಸ್ವಾಮಿ ಜೋಗಿ, ಸಹಕಾರ್ಯದರ್ಶಿ ಹೊಸ ಹೊಳಲು ಕೃಷ್ಣಯ್ಯ ಕಿರಣ್, ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

## ಸೆ.6ರಂದು ಗುರುವಂದನಾ ಕಾರ್ಯಕ್ರಮ

ಮಂಡ್ಯ, ಸೆ.2–ಹಿರಿಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನದಿಂದ ಗುರುವಂದನ ಕಾರ್ಯಕ್ರಮವನ್ನು ಸೆ.6ರಂದು ನಡೆಯಲಿದೆ ಎಂದು ಬಳಗದ ಬಿ.ಆರ್.ರವಿ ತಿಳಿಸಿದರು. ತಾಲೂಕಿನ ಕೆ.ಗೌಡಗೆರೆ ಗ್ರಾಮದ ಶ್ರೀವಿವೇಕಾನಂದ ಶಾಲೆಯ ಆವರಣದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ನೂರಾರು ವಿದ್ಯಾರ್ಥಿಗಳ ಸಮ್ಮುಖದಲ್ಲಿ ವಿದ್ಯೆ ಕಲಿಸಿದ ಗುರುಗಳನ್ನು ಸನ್ಮಾನಿಸಲಾಗುವುದು ಇದಕ್ಕೂ ಮುನ್ನ ಗ್ರಾಮದ ಕಾಶಿ ವಿಶ್ವನಾಥ ದೇವಾಲಯದಿಂದ ಮೆರವಣಿಗೆ ಮಾಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಈ ವೇಳೆ ವಿದ್ಯಾಸಂಸ್ಥೆಯ ಅಧ್ಯಕ್ಷ ಜಿ.ಎಲ್.ಸ್ವಾಮಿ, ಬಳಗದ ಬೋರೇಗೌಡ, ಕೆಂಪರಾಜು, ಲಕ್ಕಶೆಟ್ಟಿ, ಪ್ರಸನ್ನಕುಮಾರ್ ಇದ್ದರು.

## ಗಿರೀಗೌಡ ನಿಧನ

ಕೆಆರ್.ಪೇಟೆ, ಸೆ.2– ತಾಲೂಕಿನ ಚಿಲ್ಲದಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಗಿರೀಗೌಡ (80) ಮಂಗಳವಾರ ರಾತ್ರಿ ನಿಧನ ಹೊಂದಿದರು.



ಮೃತರು ನಾಲ್ವರು ಪುತ್ರರು ಇಬ್ಬರು ಪುತ್ರಿಯರನ್ನು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆಯು ಬುಧವಾರ ಬೆಳಿಗ್ಗೆ 11 ಗಂಟೆಗೆ ಗ್ರಾಮದಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

## ಹೋಗೋದೆ 'ಸೆಪ್ಟೆಂಬರ್ ಕ್ರಾಂತಿ'!

**ಪಕ್ಷ ಬಿಡುವ ಮಾತೇ ಇಲ್ಲ:** ರಾಜಣ್ಣನವರಾಗಲೀ, ನಾನಾಗಲೀ ಪಕ್ಷ ಬಿಡಲ್ಲ. ನಮ್ಮ ಬಗ್ಗೆ ಮಾತನಾಡುವಾಗ ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು.

ಯಾರನ್ನಾದರು ಓಲೈಸಬೇಕಾದರೆ ರಾಜಣ್ಣನವರ ವಿರುದ್ದವೇ ಮಾತನಾಡಬೇಕು. ಸಿಎಂ ಸ್ಥಾನ ಕೊಡ್ತೀವಿ ಅಂದರೆ ಇವರೆಲ್ಲಾ ಬಿಜೆಪಿಗೆ ಹೋದರೂ ಆಶ್ಚರ್ಯ ಇಲ್ಲ ಎಂದು ಹೇಳುವ ಮೂಲಕ ಶಾಸಕ ಬಾಲಕೃಷ್ಣ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ರಾಜಣ್ಣಗೆ ಮಂತ್ರಿ ಸ್ಥಾನ ಮತ್ತೆ ಕೊಡಬೇಕು ಎಂದು ಪ್ರತಿಭಟನೆಗಳು ನಡೆಯುತ್ತಿವೆ. ಸ್ವಾಮೀಜಿಗಳೆಲ್ಲಾ ಮನೆಗೆ ಬಂದು ರಾಜಣ್ಣ ಪರಮಾತನಾಡಿದ್ದಾರೆ. ಇವರೆಲ್ಲಾ ಸೇರಿ ತಾನೆ ಮಂತ್ರಿಗಿರಿಯಿಂದ ತೆಗೆಸಿರೋದು ಎಂದು ಹರಿಹಾಯ್ದಿದ್ದಾರೆ.

**ಸೆಪ್ಟೆಂಬರ್ ಕ್ರಾಂತಿಯಾಗುತ್ತೆ:** ರಾಜಣ್ಣ ಅವರು ಈ ಹಿಂದೆ ಉಲ್ಲೇಖಿಸಿದ್ದ 'ಸೆಪ್ಟೆಂಬರ್ ಕ್ರಾಂತಿ' ಕುರಿತು ಮಾತನಾಡಿದ ರಾಜೇಂದ್ರ, ಬಾಲಕೃಷ್ಣರಿಂದಲೇ ಸೆಪ್ಟೆಂ ಬರ್ ಕ್ರಾಂತಿ ಶುರುವಾಗಬಹುದು. ಅವರ ತಂಡವೇ ಬಿಜೆಪಿಗೆ ಹೋಗಬಹುದು. 'ಸೆಪ್ಟೆಂಬರ್ ಕ್ರಾಂತಿ' ಅಂದ್ರೆ ಇವರೆಲ್ಲಾ ಬಿಜೆಪಿಗೆ ಹೋಗೋದು ಎಂದು ಹೇಳಿದ್ದಾರೆ.

ಷಡ್ಯಂತ್ರ ಮಾಡಿಯೇ ರಾಜಣ್ಣನವರನ್ನು ಸಚಿವ ಸ್ಥಾನದಿಂದ ತೆಗೆದಿದ್ದಾರೆ. ಇನ್ನೂ ಹತ್ತು ವರ್ಷ ಹೋದರೂ ನಾವು ಸಿಎಂ ಪರನೇ, ಸಿಎಂ ಪರ ಇರುವುದರಿಂದಲೇ ನಾವು ಇಷ್ಟು ಧೈರ್ಯವಾಗಿರುವುದು ಎಂದು ಹೇಳಿದ್ದಾರೆ. ಸೆಪ್ಟೆಂಬರ್‌ನಲ್ಲಿ ಬಾಲಕೃಷ್ಣ ಅವರ ಬ್ರೈನ್ ಮ್ಯಾಪ್ ಮಾಡಿ ಎಂದು ಹೇಳಿರುವ ರಾಜೇಂದ್ರ, ಯಾರ್‍ಯಾರು, ಯಾರ್‍ಯಾರ ಸಂಪರ್ಕದಲ್ಲಿದ್ದಾರೆ ಎಂದು ಆಗ ಗೊತ್ತಾಗುತ್ತೆ ಎಂದು ಹೇಳಿ ಡಿಕೆಶಿ ಬಣದ ವಿರುದ್ದ ರಾಜಣ್ಣ ಪುತ್ರ ನೇರವಾಗಿ ವಾಗ್ದಾಳಿ ನಡೆಸಿದ್ದಾರೆ.

## ವೈನ್‌ಶಾಪ್‌ಗೆ ಹೊಸದಾಗಿ ಲೈಸೆನ್ಸ್

ನೀಡುವ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಿದೆ. ಸ್ಲ್ಯಾಬ್ 5ರ ನಂತರದ ಮದ್ಯದ ದರಗಳು ದುಬಾರಿಯಾಗಿದ್ದು, ಬೆಲೆ ಕಡಿತ ಮಾಡಿದರೆ ಹೆಚ್ಚು ವಹಿವಾಟಿನ ಮೂಲಕ ಸರ್ಕಾರದ ಬೊಕ್ಕಸದ ಆದಾಯ ಹೆಚ್ಚಲಿದೆ. ನೆರೆ ರಾಜ್ಯಗಳಲ್ಲಿ ರುವ ಮದ್ಯದ ದರಗಳನ್ನು ಪರಿಶೀಲಿಸಿದ ನಂತರ ಪ್ರೀಮಿಯಂ ಬ್ರ್ಯಾಂಡ್ ದರಗಳನ್ನು ಪರಿಷ್ಕರಿಸಲಾಗುವುದು. ಸರ್ಕಾರದ ಈ ಮಹತ್ವದ ತೀರ್ಮಾನಗಳಿಂದ ನೆರೆ ರಾಜ್ಯಗಳಿಂದ ಬರುವ ಮದ್ಯ ಹಾಗೂ ಅಕ್ರಮ ಮದ್ಯ ಮಾರಾಟ ತಡೆ ಯಲು ಸಾಧ್ಯವಾಗಲಿದೆ ಎಂದರು. ಕಳೆದ ಎರಡು ತ್ರೈಮಾಸಿಕದಲ್ಲಿ

ನಮ್ಮ ಆದಾಯ ನಿರೀಕ್ಷೆಗೂ ಮೀರಿ ಸಂಗ್ರಹವಾಗಿದೆ, ನಾವು 16,290 ಕೋಟಿ ರೂ. ಸಂಗ್ರಹ ನಿರೀಕ್ಷೆ ಇತ್ತು, 16,358.76 ಕೋಟಿ ರೂ. ಸಂಗ್ರಹವಾಗಿದೆ, ಅಂದರೆ ನಿರೀಕ್ಷೆಗೂ ಮೀರಿ ಶೇಕಡ 14 ಏರಿಕೆಯಾಗಿದೆ, ಆದಾಯ ಹೆಚ್ಚಳಕ್ಕೆ ಇಲಾಖೆ ತಂದಿರುವ ಹೊಸ ಬದಲಾವಣೆಗಳೇ ಕಾರಣ. ಲೈಸೆನ್ಸ್ ಪ್ರತೀ ವರ್ಷ ನವೀಕರಣ ಮಾಡಬೇಕಿದ್ದು, ಈಗ 5 ವರ್ಷಕ್ಕೊಮ್ಮೆ ಮಾಡಲಾಗುತ್ತಿದೆ. ಸಿಎಲ್–7 ಪರವಾನಗಿ ನೀಡಲು ತುಂಬಾ ಸಮಯ ತೆಗೆದುಕೊಳ್ಳುತ್ತಿತ್ತು. ಆದ್ದರಿಂದ ಕೆಲವು ಬದಲಾವಣೆ ಮಾಡಿ ತ್ವರಿತ ಅನುಮತಿ ವ್ಯವಸ್ಥೆ ಅಳವಡಿಸಲಾಗಿದೆ. ಇಲಾಖಾ ನೇಮಕಾತಿ ಕಾರ್ಯವನ್ನು ಕೌನ್ಸಿಲಿಂಗ್ ಮೂಲಕ ಮಾಡಲಾಗುತ್ತಿದೆ. ಡ್ರಗ್ಸ್ ಮತ್ತು ಗಾಂಜಾ ಹಾವಳಿ ತಡೆಗೆ ಬಿಗಿ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು.

## ವ್ಯವಹಾರದ ತನಿಖೆಗಿಳಿದ ಇಡಿ!

ಸಿಬಿಐ ತಂಡದಿಂದ ತನಿಖೆ ಮಾಡಬೇಕು ಎಂದು ಬಿಜೆಪಿ ಮುಖಂಡರು ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ ಜಾರಿ ನಿರ್ದೇಶನಾಲಯ ಒಡನಾಡಿ ಮತ್ತು ಸಂವಾದ ಸಂಸ್ಥೆಗಳ ಹಣ ಕಾಸು ವ್ಯವಹಾರಗಳ ಬಗ್ಗೆ ಮಾಹಿತಿ ಕಲೆ ಹಾಕು ತ್ತಿದೆ. ಧರ್ಮಸ್ಥಳದ

ಪ್ರಕರಣಕ್ಕೆ ಈ ಎರಡು ಎನ್‌ಜಿಓಗಳ ಮೂಲಕ ವಿದೇಶದಿಂದ ಹಣ ಬಂದಿದೆಯೇ ಎಂದು ತನಿಖೆ ನಡೆಸಲಾಗುತ್ತಿದೆ. ಕಾನೂನು ಬಾಹಿರವಾಗಿ ಹಣ ಬಂದಿರುವುದು ಎಲ್ಲಿಂದ ಎಂಬ ಆರೋಪದ ಮೇಲೆ, ಕಳೆದ 5 ವರ್ಷಗಳ ಹಣಕಾಸು ವ್ಯವಹಾರದ ಮಾಹಿತಿ ನೀಡುವಂತೆ ಬ್ಯಾಂಕ್‌ಗಳಿಗೆ ಇಡಿ ಪತ್ರ ಬರೆದಿದೆ. ವಿದೇಶದಿಂದ ಹಣ ಬಂದಿರುವ ಬಗ್ಗೆ ಮಾಹಿತಿ ನೀಡಲು ಜೊತೆಗೆ ಹಣ ವಿನಿಮಯವಾಗಿದ್ದಕ್ಕೆ ಕಾರಣ ತಿಳಿಸುವಂತೆ ಕೇಳಿದೆ. ಪ್ಯಾನ್ ಮತ್ತು ಅಕೌಂಟ್‌ಗಳ ವಿವರಗಳನ್ನು ಕೇಳಲಾಗಿದೆ. ಪ್ರಕರಣ ಸಂಬಂಧ ಇಡಿ ತಂಡ ಫೆಮಾ ಮತ್ತು ಫೆರಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿದೆ. ತೇಜಸ್ ಎ.ಗೌಡ ಎಂಬುವವರು ನೀಡಿದ ದೂರಿನ ಆಧಾರದ ಮೇಲೆ ತನಿಖೆ ಶುರುವಾಗಿದೆ. ಎರಡು ದೂರುಗಳನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎನ್ನಲಾಗಿದೆ. ಈಗಾಗಲೇ ಎಸ್‌ಐಟಿ ಈ ಪ್ರಕರಣದ ತನಿಖೆ ನಡೆಸುತ್ತಿದ್ದು, ಈಗ ಇಡಿ ಕೂಡ ತನಿಖೆಗೆ ಇಳಿದಿರುವುದು ಗಮನಾರ್ಹವಾಗಿದೆ.

# ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀಯವರಿಗೆ 'ಮುದ್ದುರಾಮ' ಪ್ರಶಸ್ತಿ ಪ್ರದಾನ; 'ಮುದ್ದುರಾಮ ಮಂಜರಿ' ಕೃತಿ ಬಿಡುಗಡೆ

## ಡಿವಿಜಿಯವರ 'ಮಂಕುತಿಮ್ಮ ಕಗ್ಗ' ಹಿಮಾಲಯವಾದರೆ ಶಿವಪ್ಪನವರ 'ಮುದ್ದುರಾಮ ಚೌಪದಿ' ಪನ್ನೀರ ನದಿ ಇದ್ದಂತೆ: ಪ್ರೊ.ಕೃಷ್ಣೇಗೌಡರ ಬಣ್ಣನೆ

ಮೈಸೂರು, ಸೆ.2(ಎಸ್‌ಪಿಎನ್)–ಇಲ್ಲಿಯವರೆಗೆ ಮೂವತ್ತು ಸಾವಿರ ಚೌಪದಿಗಳನ್ನು ಕವಿ ಕೆ.ಸಿ.ಶಿವಪ್ಪನವರು ಬರೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟು ಎತ್ತರಕ್ಕೆ ಬೆಳೆದಿದ್ದರೂ, ಇಷ್ಟೊಂದು ಚೌಪದಿಗಳನ್ನು ರಚಿಸಿಯೇ ಇಲ್ಲ ಎಂಬ ಭಾವದೊಂದಿಗೆ ಬದುಕು ನಡೆಸುತ್ತಿದ್ದಾರೆ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವ ಜ್ಯೋತಿ ಸಭಾಂಗಣದಲ್ಲಿ ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರಿಗೆ 2025ನೇ ಸಾಲಿನ 'ಮುದ್ದರಾಮ ಪ್ರಶಸ್ತಿ ಪ್ರಧಾನ' ಹಾಗೂ ಹತ್ತು ಸಂಪುಟಗಳಿಂದ ಆಯ್ದ 1008 ಚೌಪದಿಗಳ ಸಂಕಲನದ 'ಮುದ್ದುರಾಮ ಮಂಜರಿ' ಪುಸ್ತಕವನ್ನು ಬಿಡುಗೊಳಿಸಿ ಮಾತನಾಡಿದರು.



ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರಿಗೆ 2025ನೇ ಸಾಲಿನ 'ಮುದ್ದುರಾಮ ಪ್ರಶಸ್ತಿ'ಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಈ ವೇಳೆ ಹಿರಿಯ ಸಾಹಿತಿ ಪ್ರೊ.ಎಂ. ಕೃಷ್ಣೇಗೌಡರು, ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್, ಮುದ್ದುರಾಮ ಪ್ರತಿಷ್ಠಾನದ ಅಧ್ಯಕ್ಷ ರಾದ ಕೆ.ಸಿ.ಶಿವಪ್ಪ, ಉಪಾಧ್ಯಕ್ಷ ಪ್ರೊ.ನೀಲಗಿರಿ ತಳವಾರ, ಕಾರ್ಯದರ್ಶಿ ಆರ್.ಎ.ಚೇತನ್ ರಾಮ್, ಸಹ ಕಾರ್ಯದರ್ಶಿ ನ.ರವಿಕುಮಾರ್ ಇತರರು ಉಪಸ್ಥಿತರಿದ್ದರು.

ಡಿವಿಜಿ ಅವರ ಮಂಕುತಿಮ್ಮನ ಕಗ್ಗ ಚೌಪದಿ ಪ್ರಕಾರದಲ್ಲಿ ಒಂದು ಹಿಮಾಲಯ ಪರ್ವತವಿದ್ದಂತೆ. ನಾವು ಆ ಕೃತಿಯ ಆಳ, ಎತ್ತರ ಕಂಡು ಹಿಡಿಯಲು ಸಾಧ್ಯವಿಲ್ಲ. ಅಷ್ಟರಮಟ್ಟಕ್ಕೆ ಆ ಕೃತಿಯನ್ನು ಜನ ಸ್ವೀಕರಿಸಿದ್ದಾರೆ. ಆದರೆ, ಕವಿ ಕೆ.ಸಿ.ಶಿವಪ್ಪ ರಚಿತ 'ಮುದ್ದುರಾಮ' ಕೃತಿ, ಮಂಕುತಿಮ್ಮನ ಕಗ್ಗ ಪಡಿನೆರಳಲ್ಲ. 'ಮುದ್ದುರಾಮ ಚೌಪದಿಗಳು' ಒಂದು ಪನ್ನೀರ ನದಿ. ಈ ಪುಸ್ತಕವನ್ನು ಓದಿದವರು ತಮ್ಮಲ್ಲಿ ತಾವು ಲೀನವಾಗುತ್ತಾರೆ. ನಿರ್ಲಿಪ್ತ ಭಾವನೆಗೆ ಬಂದು ಬಿಡುತ್ತಾರೆ ಎಂದು ಕೆಲವು ಮುದ್ದುರಾಮನ ಚೌಪದಿಗಳನ್ನು ಉಲ್ಲೇಖಿಸಿ ತಿಳಿಸಿದರು.

ಮುದ್ದುರಾಮನ ಚೌಪದಿಗಳಲ್ಲಿ ಬಳಸಿರುವ ಅನೇಕ ಕನ್ನಡ ಪದಗಳು ಸುಸಂಸ್ಕೃತ, ಸಮೃದ್ಧ ಪದಗಳಾಗಿವೆ. ಅಲ್ಲದೆ, ಇವರ ಬರವಣಿಗೆಯಲ್ಲಿ ವಚನ ಸಾಹಿತ್ಯದ ಪ್ರಭಾವವಿದೆ. 'ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ' ಎಂಬುದು ಬಸವಣ್ಣನವರ ವಚನದಂತೆ, ಅನ್ಯ ವಿಷಯಗಳಲ್ಲಿ ಆಸಕ್ತಿ ತೋರದೆ, ಭಗವಂತನಲ್ಲಿ ಮನಸ್ಸು ಅರ್ಪಿಸುವಂತೆ ದೇವರಲ್ಲಿ ಪ್ರಾರ್ಥಿಸುವುದಾಗಿದೆ. ಈ ರೀತಿ ಮುದ್ದುರಾಮ ಚೌಪದಿಗಳ ರಚನೆಯಲ್ಲಿ ಅದ್ಭುತ ಶಕ್ತಿಯೊಂದು ಹುದುಗಿದೆ. ನಾನು ನಿಮಿತ್ತ ಮಾತ್ರ ಎನ್ನುವ ಭಾವನೆ ಕವಿ ಮನಸ್ಸಿನಲ್ಲಿ ಮೂಡಿರುವುದು ಸ್ಪಷ್ಟವಾಗಿದೆ. ಇದು ಎಲ್ಲಾ ಹಿರಿಯ ಸಾಹಿತಿಗಳಲ್ಲಿ ಮೂಡುವುದು ಸಾಮಾನ್ಯ ಎಂದು ಕುವೆಂಪು ಸೇರಿದಂತೆ ಇತರೆ ಕವಿಗಳ ಕೆಲ ಘಟನೆಗಳನ್ನು ಉಲ್ಲೇಖಿಸಿದರು.

ಓದುಗರು 'ಮುದ್ದುರಾಮ ಮಂಜರಿ' ಕೃತಿಯನ್ನು ಒಂದೇ ಗುಕ್ಕಿನಲ್ಲಿ ಓದಿ ಇಡಬಾರದು. ಬದಲಾಗಿ ನಿಮ್ಮ ಕೈ ಎಟುಕಿನಲ್ಲೇ ಇಟ್ಟುಕೊಂಡಿದ್ದು, ಆಗಾಗ ಪುಸ್ತಕ ತೆರೆದು ಹತ್ತೋ–ಇಪ್ಪತ್ತೋ ಚೌಪದಿಗಳನ್ನು ಓದಿ. ಇಪ್ಪತ್ತು ನಿಮಿಷ ಧ್ಯಾನಿಸಿದರೆ ಒಳ್ಳೆಯದು. ನೀವು ಸಂತೋಷದಲ್ಲಿದ್ದಾಗ ಇಲ್ಲವೇ ವ್ಯಥೆಯಲ್ಲಿದ್ದಾಗ ಈ ಚೌಪದಿಗಳನ್ನು ಓದಿದಾಗ ಪರಿಹಾರ, ಸಾಂತ್ವನ ಸಿಗುತ್ತದೆ ಎನ್ನುವಷ್ಟರ ಮಟ್ಟಿಗೆ ಓದುಗನ ಮನಸ್ಸಿನಲ್ಲಿ ಸಾರ್ಥಕತೆ ಉಂಟಾಗುತ್ತದೆ ಎಂದರು.

'ಮುದ್ದುರಾಮ' ಚೌಪದಿಗಳು ಯಾರಿಗೂ ಗೊತ್ತಿಲ್ಲದ ಸಂದರ್ಭದಲ್ಲಿ ರಾಜ್ಯದ ಮೂಲೆ ಮೂಲೆಗೆ ತಲುಪಿಸಿದ ಕೀರ್ತಿ ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್ ಅವರಿಗೆ ಸಲ್ಲುತ್ತದೆ. ಅವರು 'ಮುದ್ದುರಾಮ' ಚೌಪದಿಗಳನ್ನು, ಹರಟೆ ಕಾರ್ಯಕ್ರಮಗಳಲ್ಲಿ ಉಲ್ಲೇಖಿಸುವಾಗ ಈ ಕಣ್ಣನ್ ಮಾಮ, ಇದ್ಯಾವುದೋ ಹೊಸ ಚೌಪದಿಗಳನ್ನು ಹೇಳುತ್ತಿದ್ದಾರೆ ಎಂದು ಹಾಸ್ಯವಾಗಿ ಕೇಳುತ್ತಿದ್ದೆವು. ಕೊನೆಗೆ 'ಮುದ್ದುರಾಮ ಚೌಪದಿಗಳ' ಉಲ್ಲೇಖಿಸಿ ಹರಟೆ ಕಾರ್ಯಕ್ರಮ ಆರಂಭಿಸುವ ಮಟ್ಟಕ್ಕೆ ಆ ಕೃತಿಯೊಂದಿಗೆ ಬಾಂಧವ್ಯ ಬೆಳೆದ ಪ್ರಸಂಗವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

'ಮುದ್ದುರಾಮ ಮಂಜರಿ' ಒಂದು ಅನನ್ಯ ಕೃತಿ. ಕನ್ನಡ ಸಾಹಿತ್ಯ ಜಗತ್ತನ್ನು ಶ್ರೀಮಂತಗೊಳಿಸುವ ಗ್ರಂಥ. ಕಾವ್ಯದ ಉದ್ದೇಶ ಏನು ಎಂಬುದು ಹಿಂದಿನಿಂದಲೂ ಚರ್ಚೆಯನ್ನು ಹುಟ್ಟು ಹಾಕಿದೆ. ಕೆಲವರು ರಸಾನುಭವದ ಅಭಿವ್ಯಕ್ತಿಯೇ ಕಾವ್ಯ ಎನುತ್ತಾರೆ. ಇನ್ನು ಕೆಲವರು ಸಾಮಾಜಿಕ ವಿದ್ಯಮಾನಕ್ಕೆ ಕಾವ್ಯ ಸ್ಪಂದಿಸಬೇಕೆ ನ್ನುತ್ತಾರೆ. ಆಯಾ ಕಾಲಘಟ್ಟದಲ್ಲಿ ಕಾವ್ಯದ ಉದ್ದೇಶವೂ ಬದಲಾಗುತ್ತಿದೆ ಎಂದು ಹೇಳಿದರು.

**ಹರಟೆಯಲ್ಲಿ ಜನಜನಿತವಾದ ಚೌಪದಿಗಳು:** ಹಿರಿಯ ವಾಗ್ಮಿ, ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್ ಮಾತನಾಡಿ, ಹರಟೆ ಕಾರ್ಯಕ್ರಮ ನಾಡಿದ್ಯಂತ ಪಸಿದ್ದಿ ಪಡೆದಿತ್ತು. ಇದರಲ್ಲಿ ಎಂ.ಕೃಷ್ಣೇಗೌಡರ ಪಾತ್ರವೂ ಇದೆ. ಹರಟೆ ಕಾರ್ಯಕ್ರಮ ಶೀರ್ಷಿಕೆ ಎಲ್ಲರ ಗಮನ ಸೆಳೆಯುತ್ತಿತ್ತು ಒಮ್ಮೆ ಕೃಷ್ಣೇಗೌಡರ ನೀಡಿದ್ದ 'ಹೆಂಡತಿಯೊಂದಿಗೆ ಗಂಡ ಬದುಕು ನಟನೆಯೋ, ನೈಜವೋ' ಶೀರ್ಷಿಕೆಯೊಂದಿಗೆ ಕಾರ್ಯಕ್ರಮ ಆರಂಭಿಸಿದ್ದಾಗ ಅವರು, 'ಹೆಂಡತಿಯೊಂದಿಗಿನ ಬದುಕು ನೈಜ' ಎಂದು ಮುದ್ದುರಾಮನ ಚೌಪದಿ ಹೇಳಿ ತಾವು ಬಚಾವಾಗಿ ಬಿಟ್ಟರು. ಉಳಿದವರ ಪಾಡು ಹೇಳತೀರದು. ಆಗ ರಾಮ–ಕೃಷ್ಣ ಬದುಕು ನೆನಪಿಸಿಕೊಂಡು ಕಾರ್ಯಕ್ರಮ ಮುಗಿಸಿದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿಟ್ಟರಲ್ಲದೆ, 2025ನೇ ಸಾಲಿನ 'ಮುದ್ದುರಾಮ ಪ್ರಶಸ್ತಿ'ಯನ್ನು ನಾಡಿನ ಹಿರಿಯ ವಿದ್ವಾಂಸರಾದ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರಿಗೆ ನೀಡಿರುವುದು ಸಂತೋಷದ ವಿಚಾರ ಎಂದರು.

ಎರಡು ಮುದ್ದುರಾಮ ಚೌಪದಿಗಳನ್ನು ಉಲ್ಲೇಖಿಸಿದ ಕಣ್ಣನ್, 'ಇರುವ ಅಕ್ಷರ ಇಷ್ಟೇ; ಇಷ್ಟರಲಿ ಪದಬಂಧ, ಉರಿವ ಕಟ್ಟಿಗೆ ಇಷ್ಟೆ; ಅಷ್ಟರಲಿ ಅಡುಗೆ, ತೆರೆವ ಬಾಗಿಲು ಇಷ್ಟೇ; ಇಷ್ಟರಲಿ ಸಂಚಾರ, ಪೊರೆವುದಷ್ಟೇ ಸತ್ಯ–ಮುದ್ದುರಾಮ'..., 'ನನಗಿಂತ ನೀ ಕಿರಿದು ಎಂದರದು ನಾನತ್ವ; ಸರಿಸಮಾನತೆಯ ನಡೆಯಲಿದೆ ಬಂಧುತ್ವ, ಈ ಮೇಲುಕೀಳೆನುವ ಭಾವ ಅದೆ ಅಂಧತ್ವ; ಸಮತೆಯೇ ಸುಖತತ್ವ–ಮುದ್ದುರಾಮ'. ಶಿವಪ್ಪ ರಚಿತ ಎಲ್ಲಾ ಚೌಪದಿಗಳು ಸತ್ವಪೂರ್ಣವಾಗಿದೆ. ನೀವು, ನಿಮ್ಮ ಮಕ್ಕಳಿಗೂ 'ಮುದ್ದುರಾಮ ಮಂಜರಿ' ಪುಸ್ತಕ ಕೊಂಡು ಓದುವಂತೆ ಸಲಹೆ ನೀಡಿದರು.

> ಹೂವು ತನ್ನ ಪರಿಮಳವನ್ನು ಹರಡುವಂತೆ ಒಳ್ಳೆಯ ಕೆಲಸ ಮಾಡಿದಾಗ ಅದು ನೂರಾರು ಮೈಲಿವರೆಗೆ ವ್ಯಾಪ್ತಿಸುತ್ತದೆ. ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಸಾಹಿತ್ಯ ಲೋಕಕಂಡ ಅಪರೂಪದ ಸಾಹಿತಿ. ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ವಿಸ್ತೃತಗೊಳಿಸಿದ ಮಹನೀಯರು. ಇವರು ತಮ್ಮ ಇಳಿವಯಸ್ಸಿನಲ್ಲೂ ಸದಾ ಅಧ್ಯಯನಶೀಲರು ಹಾಗೂ ದಣಿವರಿಯದ ಲೇಖಕರಾಗಿದ್ದಾರೆ.
>
> – ಡಾ.ಎಚ್.ವಿ.ನಾಗರಾಜರಾವ್, ಸಂಸ್ಕೃತ ವಿದ್ವಾಂಸರು

**'ಮುದ್ದುರಾಮ ಪ್ರಶಸ್ತಿ' ಪ್ರದಾನ:** ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರಿಗೆ 2025ನೇ ಸಾಲಿನ 'ಮುದ್ದುರಾಮ ಪ್ರಶಸ್ತಿ' ಪ್ರಧಾನ ಮಾಡಲಾಯಿತು. ಈ ವೇಳೆ ಮುದ್ದುರಾಮ ಪ್ರತಿಷ್ಠಾನದ ಅಧ್ಯಕ್ಷರಾದ ಕೆ.ಸಿ.ಶಿವಪ್ಪ, ಉಪಾಧ್ಯಕ್ಷ ಪ್ರೊ.ನೀಲಗಿರಿ ತಳವಾರ, ಕಾರ್ಯದರ್ಶಿ ಆರ್.ಎ.ಚೇತನ್ ರಾಮ್, ಸಹ ಕಾರ್ಯದರ್ಶಿ ನ.ರವಿಕುಮಾರ್ ಇತರರು ಉಪಸ್ಥಿತರಿದ್ದರು.

## ಅಂತರಶಾಲಾ ಅಂಕಗಣಿತ ಸ್ಪರ್ಧೆ



ಸ್ವಾತಂತ್ರ್ಯ ದಿನದಂದು ನಡೆದ ಮೈಸೂರು ವಲಯದ ಅಂತರಶಾಲಾ ಅಂಕಗಣಿತ ಸ್ಪರ್ಧೆಯಲ್ಲಿ ಮ್ಯಾತ್ ಜೂನಿಯರ್‌ನ ಚಿರಂತನ್ (ಪ್ರಥಮ), ಕೋಮಲ್ ಎಂ. ಮತ್ತು ಮುರಾರಿ ವರ್ಮ (ದ್ವಿತೀಯ), ಪೋಡರ್ ಶಾಲೆಯ ನಿರ್ಭಯ್ ಮತ್ತು ಅರ್ಜುನ್ ಮಂದಣ್ಣ (ತೃತೀಯ) ಬಹುಮಾನ ಪಡೆದರು. 40 ವಿದ್ಯಾರ್ಥಿಗಳು ವಿವಿಧ ಶಾಲೆಗಳಿಂದ ಪಾಲ್ಗೊಂಡಿದ್ದರು. ವಿಜೇತರಿಗೆ ಮೈಸೂರಿನಲ್ಲಿ ನಡೆಯುವ ರಾಷ್ಟ್ರೀಯ ಗಣಿತ ದಿನಾಚರಣೆಯಂದು 25 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು.

ಮೈಸೂರು ಮಿತ್ರ

ಬುಧವಾರ 3 ಸೆಪ್ಟೆಂಬರ್ 2025

# ಹಣೆಗೆ ಅರಿಶಿನ, ಕುಂಕುಮ ಇಟ್ಟುಕೊಂಡು ದಸರಾ ಉದ್ಘಾಟಿಸಿ ಎಂದು ಬಾನು ಮುಷ್ತಾಕ್‌ಗೆ ನಾವು ಹೇಳಲು ಸಾಧ್ಯವಾ?

## ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

- ಇದರಲ್ಲೇನಾದರೂ ಧರ್ಮವಿದೆಯೇ...? ● ಹಿಂದೂಗಳಾಗಿ ದಸರಾ ಉದ್ಘಾಟಿಸಿ ಎಂದು ಅನ್ಯ ಧರ್ಮಿಯರಿಗೆ ಹೇಗೆ ಹೇಳುವುದು ● ಭುವನೇಶ್ವರಿ ಕುರಿತ ಬಾನು ಮುಷ್ತಾಕ್ ಹೇಳಿಕೆ ನನಗೆ ಗೊತ್ತಿಲ್ಲ; ಅವರ ವಿರುದ್ಧ ಯಾರೂ ಫತ್ವಾ ಹೊರಡಿಸಿಲ್ಲ

ಮೈಸೂರು, ಸೆ.2(ಬಿಎಲ್‌ಯು)– ಅರಿಶಿನ, ಕುಂಕುಮ ಹಚ್ಚಿಕೊಂಡು ಮೈಸೂರು ದಸರಾ ಉದ್ಘಾಟಿಸಿ ಎಂದು ಬಾನುಮುಷ್ತಾಕ್ ಅವರಿಗೆ ನಾವು ಹೇಳಲು ಸಾಧ್ಯವಾ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.



ನಗರದ ಟಿ.ಕೆ.ಬಡಾವಣೆಯ ತಮ್ಮ ಸ್ವಗೃಹದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅರಿಶಿನ, ಕುಂಕುಮ ಹಾಕಿಕೊಳ್ಳುವುದರಲ್ಲಿ ಧರ್ಮವಿದೆಯೇ ಎಂದು ಮರು ಪ್ರಶ್ನಿಸಿದರು.

ಮೈಸೂರು ದಸರಾ ಉದ್ಘಾಟನೆಗೆ ಬೇರೆ ಬೇರೆ ಧರ್ಮದವರನ್ನು ಆಹ್ವಾನಿಸುತ್ತೇವೆ. ಅವರಿಗೆಲ್ಲಾ ಹಿಂದೂಗಳಾಗಿ ದಸರಾ ಉದ್ಘಾಟನೆ ಮಾಡಿ ಎಂದು ತಾಕೀತು ಮಾಡಲು ಸಾಧ್ಯವೆ?.

ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರು ಓರ್ವ ಮುಸ್ಲಿಂ ಮಹಿಳೆಯಾಗಿದ್ದು, ಅರಿಶಿನ, ಕುಂಕುಮ ಹಚ್ಚಿಕೊಳ್ಳುವುದು ಅವರ ಧರ್ಮದಲ್ಲಿ ಇಲ್ಲ. ಈಗ ಮೈಸೂರು ದಸರಾ ಉದ್ಘಾಟನೆ ಮಾಡಲು ಅರಿಶಿನ, ಕುಂಕುಮ ಹಚ್ಚಿಕೊಂಡು ಬನ್ನಿ ಎಂದು ಅವರಿಗೆ ಹೇಳಲು ಹೇಗೆ ಸಾಧ್ಯ ಎಂದು ಬಿಜೆಪಿ ನಾಯಕರನ್ನು ಸಿದ್ದರಾಮಯ್ಯ ಪ್ರಶ್ನಿಸಿದರು.

ಮೈಸೂರು ದಸರಾ ಉದ್ಘಾಟನೆ ಮಾಡುವವರು ಹಣೆಗೆ ಅರಿಶಿನ, ಕುಂಕುಮ ಹಚ್ಚಿಕೊಂಡು ಬರಬೇಕು, ಹಿಂದೂ ಆಚರಣೆ ಮಾಡಬೇಕು ಅನ್ನುವುದು ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ಭಾಷೆಯನ್ನು ಭುವನೇಶ್ವರಿಯಾಗಿ ಮಾಡಿದ್ದೀರಾ. ಕೆಂಪು, ಹಳದಿ (ಅರಿಶಿಣ, ಕುಂಕುಮ) ಬಾವುಟ ಕೈಗೆ ಕೊಟ್ಟು ಆಕೆಯನ್ನು ಮಂದಾಸನದ ಮೇಲೆ ಕೂರಿಸಿದ್ದೀರಾ. ಹಾಗಾದರೆ, ಮುಸ್ಲಿಂ ಆಗಿ ನಾನು ಎಲ್ಲಿ ನಿಲ್ಲಬೇಕು. ಏನನ್ನು ನೋಡಬೇಕು ಎಂಬ ಬಾನು ಮುಷ್ತಾಕ್ ಅವರ ಈ ಮೊದಲಿನ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ, ಅವರು ಈ ಹಿಂದೆ ನೀಡಿದ್ದ ಹೇಳಿಕೆ ನನಗೆ ಗೊತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಬಾನು ಮುಷ್ತಾಕ್ ಅವರು ಕನ್ನಡ ಸಾಹಿತಿ. ಕನ್ನಡದ ಮೇಲೆ ಅವರಿಗೆ ಬಹಳ ಪ್ರೀತಿ, ಆಸಕ್ತಿ ಇದೆ. ಈ ಕಾರಣದಿಂದಲೇ ದಸರಾ ಉದ್ಘಾಟನೆಗೆ ಅವರು ಒಪ್ಪಿದ್ದಾರೆ ಎಂದರು.

ನಿತ್ಯೋತ್ಸವದ ಕವಿ ಡಾ.ಕೆ.ಎಸ್. ನಿಸಾರ್ ಅಹಮ್ಮದ್ ಅವರು 2017ರಲ್ಲಿ ದಸರಾ ಉದ್ಘಾಟನೆ ಮಾಡುವಾಗ ಚಕಾರ ಎತ್ತದ ಬಿಜೆಪಿ ನಾಯಕರು ಈಗ ಬಾನು ಮುಷ್ತಾಕ್ ಅವರು ದಸರಾಗೆ ಚಾಲನೆ ನೀಡಲು ಆಕ್ಷೇಪ ವ್ಯಕ್ತಪಡಿಸುತ್ತಿರುವುದೇಕೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

**ಫತ್ವಾ ಹೊರಡಿಸಿಲ್ಲ:** ಮೈಸೂರು ದಸರಾ ಉದ್ಘಾಟನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಬಾನು ಮುಷ್ತಾಕ್ ಅವರಿಗೆ ಮುಸ್ಲಿಂ ಸಮುದಾಯ ಫತ್ವಾ ಹೊರಡಿಸಿರುವ ಬಗ್ಗೆ ಕೇಳಿದಾಗ, ಇಂತಹ ಯಾವುದೇ ಬೆಳವಣಿಗೆ ನಡೆದಿಲ್ಲ. ಯಾರೂ ಫತ್ವಾ ಹೊರಡಿಸಿಲ್ಲ, ಇದೆಲ್ಲಾ ಶುದ್ಧ ಸುಳ್ಳು. ಈ ಬಗ್ಗೆ ಮುಸ್ಲಿಂ ಧರ್ಮಗುರುಗಳೇ ಸ್ಪಷ್ಟನೆ ನೀಡಿದ್ದಾರೆ ಎಂದು ಹೇಳಿದರು.

ಬಾನು ಮುಷ್ತಾಕ್ ಅವರು ದಸರಾ ಉದ್ಘಾಟನೆ ಮಾಡುವುದನ್ನು ವಿರೋಧಿಸಿ ಬಿಜೆಪಿಯವರು ಚಾಮುಂಡಿಬೆಟ್ಟ ಚಲೋ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಅವರು ಯಾವ ಚಲೋನಾದರೂ ಮಾಡಲಿ ಬಿಡಿ. ಇದಕ್ಕೆ ನಾನು ಬೇಡ ಎನ್ನುವುದಿಲ್ಲ. ಈ ಹಿಂದೆ ಮಿರ್ಜಾ ಇಸ್ಮಾಯಿಲ್ ಅವರು ಮಹಾರಾಜರ ಜೊತೆ ಅಂಬಾರಿ ಮೇಲೆ ಹೋಗುತ್ತಿದ್ದು. ಆಗ ಆರ್‌ಎಸ್‌ಎಸ್‌ನವರು ಎಲ್ಲಿ ಹೋಗಿದ್ದರು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

## ಧರ್ಮಸ್ಥಳ ಪರ ಬಿಜೆಪಿ ಹೋರಾಟಕ್ಕೂ ವಿದೇಶಿ ದೇಣಿಗೆ!

ಮೈಸೂರು, ಸೆ.2(ಬಿಎಲ್‌ಯು)– ಧರ್ಮಸ್ಥಳದ ಬಗ್ಗೆ ಷಡ್ಯಂತ್ರ ರೂಪಿಸಲಾಗಿದೆ ಎಂದು ಆರೋಪಿಸಿ ಬಿಜೆಪಿ ನಾಯಕರು ನಡೆಸುತ್ತಿರುವ ಹೋರಾಟಗಳಿಗೆ ವಿದೇಶದಿಂದ ದೇಣಿಗೆ ಬರುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಗಂಭೀರ ಆರೋಪ ಮಾಡಿದ್ದಾರೆ.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡಲು ಹಲವು ಸಂಘಟನೆಗಳಿಗೆ ವಿದೇಶದಿಂದ ದೇಣಿಗೆ ಬರುತ್ತಿದೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ತಿರುಗೇಟು ನೀಡಿದರು. ಸರ್ಕಾರದ ತೀರ್ಮಾನಗಳ ಬಗ್ಗೆ ಆಧಾರ ಸಹಿತ ಆರೋಪ ಮಾಡಲಿ. ಅದು ಬಿಟ್ಟು ಹೆಜ್ಜೆ ಹೆಜ್ಜೆಗೂ ಟೀಕೆ ಮಾಡುತ್ತಾ ಒಂದೊಂದು ಹೋರಾಟ ಮಾಡುತ್ತಾರೆ. ಈ ಹೋರಾಟಗಳಿಗೆ ಹಣ ಎಲ್ಲಿಂದ ಬರುತ್ತಿದೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಧರ್ಮಸ್ಥಳದ ವಿಚಾರವಾಗಿ ಬಿಜೆಪಿ ನಾಯಕರು ಮಾಡುತ್ತಿರುವುದು ಧರ್ಮಯಾತ್ರೆಯಲ್ಲ, ರಾಜಕೀಯ ಯಾತ್ರೆ ಎಂದು ಟೀಕಿಸಿದ ಸಿದ್ದರಾಮಯ್ಯ, ಸಮರ್ಥ ವಿರೋಧ ಪಕ್ಷವಾಗಿ ಸರ್ಕಾರದ ಬಗ್ಗೆ ಟೀಕೆ ಮಾಡಲಿ, ಅದು ಬಿಟ್ಟು ಪ್ರತಿಯೊಂದು ವಿಚಾರದಲ್ಲೂ ರಾಜಕೀಯ ಮಾಡಬಾರದು ಎಂದು ಸಲಹೆ ನೀಡಿದರು.

**ನಮ್ಮ ಪೊಲೀಸರ ಮೇಲೆ ನಂಬಿಕೆ ಇಲ್ವೆ:** ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ ಎಸ್‌ಐಟಿ ತನಿಖೆ ನಡೆಯುತ್ತಿದೆ. ಆದರೆ ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸುವಂತೆ ಬಿಜೆಪಿ ನಾಯಕರು ಆಗ್ರಹ ಮಾಡುತ್ತಿದ್ದಾರೆ. ಹಾಗಾದರೆ ನಮ್ಮ ರಾಜ್ಯದ ಪೊಲೀಸರ ಬಗ್ಗೆ ಬಿಜೆಪಿಯವರಿಗೆ ನಂಬಿಕೆ ಇಲ್ಲವೇ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ ಎಸ್‌ಐಟಿ ರಚನೆ ಮಾಡಿದಾಗ, ಬಿಜೆಪಿ ನಾಯಕರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಆಗ ಎನ್‌ಐಎ ತನಿಖೆ ಮಾಡಿ ಎಂದು ಆಗ್ರಹ ಮಾಡಲಿಲ್ಲ. ಆದರೆ ಎಸ್‌ಐಟಿ ತನಿಖೆ ವೇಳೆ ಶವಗಳು ಪತ್ತೆಯಾಗದ ಸಂದರ್ಭ ಬಳಸಿಕೊಂಡು ಈಗ ಎನ್‌ಐಎ ತನಿಖೆಗೆ ಒತ್ತಾಯ ಮಾಡುತ್ತಿದ್ದಾರೆ ಎಂದು ಹೇಳಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರೇ ಎಸ್‌ಐಟಿ ತನಿಖೆಯನ್ನು ಬೆಂಬಲಿಸುತ್ತಿದ್ದಾರೆ. ಈ ತನಿಖೆಯಿಂದ ಸತ್ಯಾಂಶ ಹೊರಗೆ ಬರಲಿ ಎಂದು ಸ್ವಾಗತಿಸಿದ್ದಾರೆ. ನಮ್ಮ ಮೇಲಿನ ಅನುಮಾನದ ತೂಗುಗತ್ತಿ ನಿವಾರಣೆಯಾಗಬೇಕು ಎಂದು ಹೇಳಿದ್ದಾರೆ. ಹೀಗಿರುವಾಗ ಬಿಜೆಪಿ ನಾಯಕರ ಭಿನ್ನರಾಗವೇಕೆ ಎಂದು ಪ್ರಶ್ನಿಸಿದರು.

**ಬಿಜೆಪಿಯವರು ಯಾರ ಪರ ಇದ್ದಾರೆ:** ಎಸ್‌ಐಟಿಯವರು ಸ್ವತಂತ್ರವಾಗಿ ತನಿಖೆ ಮಾಡುತ್ತಿದ್ದಾರೆ. ಅವರ ತನಿಖೆ ಬಗ್ಗೆ ನಾವು ಯಾರೂ ಹಸ್ತಕ್ಷೇಪ ಮಾಡುತ್ತಿಲ್ಲ. ಸತ್ಯಾಂಶ ಹೊರಗೆ ಬರಬೇಕು ಎಂಬುದೇ ನಮ್ಮ ಮೂಲ ಉದ್ದೇಶ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸೌಜನ್ಯ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಬಿಜೆಪಿ ನಾಯಕರ ಆಗ್ರಹಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು, ಸೌಜನ್ಯ ಪ್ರಕರಣದಲ್ಲಿ ಧರ್ಮಸ್ಥಳದ ಕೆಲವರ ಪಾತ್ರವಿದೆ ಎಂಬ ಆರೋಪ ಇದೆ. ಹಾಗಾದರೆ ಬಿಜೆಪಿ ಯಾರ ಪರವಾಗಿದ್ದಾರೆ. ಒಂದು ಬಾರಿ ಡಾ.ವೀರೇಂದ್ರ ಹೆಗಡೆ ಅವರ ಪರ ಎನ್ನುತ್ತಾರೆ, ಮತ್ತೊಂದೆಡೆ ಸೌಜನ್ಯ ಪರ ಎನ್ನುತ್ತಾರೆ. ಬಿಜೆಪಿಯವರ ಈ ದ್ವಂದ್ವ ನಿಲುವು ಜನರಲ್ಲಿ ಗೊಂದಲ ಮೂಡಿಸಿದೆ ಎಂದು ಟೀಕಿಸಿದರು.

ಒಂದು ಕಡೆ ಡಾ.ವೀರೇಂದ್ರ ಹೆಗಡೆ ಅವರಿಗೆ ಜೈಕಾರ ಹಾಕುತ್ತಾರೆ, ಮತ್ತೊಂದೆಡೆ ನಾವು ಸೌಜನ್ಯ ಪರ ಎನ್ನುತ್ತಾರೆ. ನಿಜವಾಗಿಯೂ ಇವರು ಯಾರ ಪರ ಎಂಬುದೇ ತಿಳಿಯುತ್ತಿಲ್ಲ ಎಂದು ಗೇಲಿ ಮಾಡಿದರು.

ಬಿಜೆಪಿ ನಾಯಕರು ದಿನಕ್ಕೊಂದು, ಗಳಿಗೆಗೊಂದು ಹೇಳಿಕೆ ನೀಡಬಾರದು. ಅಸತ್ಯದ ಮೇಲೆ ಚರ್ಚೆ ಮಾಡಿದರೆ ಹೀಗೆ ಆಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸೌಜನ್ಯ ಪ್ರಕರಣದ ಬಗ್ಗೆ ಮರು ತನಿಖೆಯ ಅಗತ್ಯವಿದ್ದರೆ ನ್ಯಾಯಾಲಯಕ್ಕೆ ಹೋಗಲಿ. ಈ ಬಗ್ಗೆ ಸೌಜನ್ಯ ತಾಯಿ ತೀರ್ಮಾನ ತೆಗೆದುಕೊಳ್ಳಬೇಕು ಎಂದರು. 12 ವರ್ಷದ ಹಿಂದೆ ಅಪಹರಣ ಆಗುವುದನ್ನು ನಾನು ಕಣ್ಣಾರೆ ನೋಡಿದ್ದೇನೆ ಎಂದು ಮಹಿಳೆಯೊಬ್ಬಳು ಎಸ್‌ಐಟಿಗೆ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಸೌಜನ್ಯ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಯುವಾಗ ಏಕೆ ಹೇಳಲಿಲ್ಲ, ಸತ್ಯ ತಿಳಿದ ಮೇಲೆ ಅದನ್ನು ಮುಚ್ಚಿಡುವುದು ಅಪರಾಧ ಎಂದು ಸಿದ್ದರಾಮಯ್ಯ ಹೇಳಿದರು.

## ಮೈಸೂರಲ್ಲಿಂದು ಅರಸು ಸೇವಾ ಪ್ರಶಸ್ತಿ ಪ್ರದಾನ

ಮೈಸೂರು, ಸೆ.2–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸು ಅವರ 110ನೇ ಜನ್ಮ ದಿನಾಚರಣೆ ಅಂಗವಾಗಿ ಸೆ.3ರಂದು ಬೆಳಗ್ಗೆ 11 ಗಂಟೆಗೆ ಅರಸು ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹಾಗೂ ಸಂಸ್ಕೃತಿ ಪೋಷಕ ಡಾ.ಕೆ.ರಘುರಾಂ ವಾಜಪೇಯಿ ಅವರಿಗೆ ಶಾಸಕ ಕೆ.ಹರೀಶ್ ಗೌಡ ಅರಸು ಸೇವಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಮತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹೆಚ್.ವಿ. ರಾಜೀವ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಭಾಗವಹಿಸಲಿದ್ದಾರೆ. ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ನುಡಿ ಮತ್ತು ಆಶಯ ನುಡಿಯನ್ನು ವೇದಿಕೆ ರಾಜ್ಯಾಧ್ಯಕ್ಷ ಆಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ‘ವೈಶ್ವಕರ್ಮಣ ಬ್ರಾಹ್ಮಣ ನಿತ್ಯ ಧಾರ್ಮಿಕ ಪೂಜಾ ವಿಧಿವಿಧಾನ’ ಕೃತಿ ಬಿಡುಗಡೆ



ಜಗದ್ಗುರು ವಿಶ್ವಕರ್ಮ ಮಠ ಸುಜ್ಞಾನ ಪೀಠದಲ್ಲಿ ಮಠದ ಪೀಠಾಧೀಶರಾದ ಅನಂತ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ‘ವೈಶ್ವಕರ್ಮಣ ಬ್ರಾಹ್ಮಣ ನಿತ್ಯ ಧಾರ್ಮಿಕ ಪೂಜಾ ವಿಧಿ ವಿಧಾನ’ ಕೃತಿ ಬಿಡುಗಡೆಗೊಳಿಸಲಾಯಿತು.

ಮೈಸೂರು, ಸೆ.2(ಜಿಎ)–ಮೈಸೂರಿನ ಹೊರವಲಯ ಚಿಕ್ಕಹಳ್ಳಿಯಲ್ಲಿರುವ ಜಗದ್ಗುರು ವಿಶ್ವಕರ್ಮ ಮಠ ಸುಜ್ಞಾನ ಪೀಠದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಠದ ಪೀಠಾಧೀಶರಾದ ಅನಂತ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿಯವರು ದಿವ್ಯ ಸಾನ್ನಿಧ್ಯ ವಹಿಸಿ ‘ವೈಶ್ವಕರ್ಮಣ ಬ್ರಾಹ್ಮಣ ನಿತ್ಯ ಧಾರ್ಮಿಕ ಪೂಜಾ ವಿಧಿವಿಧಾನ’ ಕೃತಿ ಬಿಡುಗಡೆಗೊಳಿಸಿದರು.

ನಂತರ ಶ್ರೀಗಳು ಆಶೀರ್ವಚನ ನೀಡಿ, ಧಾರ್ಮಿಕ ವಿಚಾರ ತಿಳಿದು ಅನುಷ್ಠಾನ ಮಾಡುವುದು ಮುಖ್ಯ ಎಂದು ತಿಳಿಸಿದರು.

ಈ ವೇಳೆ ಕೃತಿ ಪ್ರಕಾಶಕ ಮಂಟೇ ಲಿಂಗಾಚಾರ್ ಮಾತನಾಡಿ, ಸರ್ವಕ್ಕೂ ಮೂಲಕಾರಣವಾದ ವಿರಾಟ್ ಶಕ್ತಿ, ವಿಶ್ವಕರ್ಮ ಅವನ ಭವ್ಯ ಪರಂಪರೆ ಮತ್ತು ಸಂಸ್ಕೃತಿ ಕುರಿತು ತಿಳಿಸಿ, ಅವನ ಹೆಸರಿನಿಂದಲೇ ಪ್ರಾಚೀನ ಕಾಲದಿಂದಲೇ ಕರೆಯಲ್ಪಡುವ ಮನುಕುಲದಲ್ಲಿ ಒಂದು ಭಾಗ ವಿಶ್ವಕರ್ಮ, ವಿಶ್ವಬ್ರಾಹ್ಮಣರ ಹಿನ್ನೆಲೆ ಹಾಗೂ ಅವರ ಪ್ರತಿಭೆ, ಪರಿಶ್ರಮವು ಅಂದರೆ ಶಾಸ್ತ್ರೋಕ್ತ ಪಂಚಶಿಲ್ಪಿಗಳ ಮೂಲಕ ಲೋಕಕಲ್ಯಾಣಾರ್ಥ ಶ್ರಮಿಸುತ್ತಿರುವ ಬಗ್ಗೆ ವಿವರಿಸಿದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ವಿಶ್ವಕರ್ಮ ಜನಾಂಗದ ಸಮಸ್ಯೆಗಳನ್ನು ಪರಿಹರಿಸಿ ನೆಮ್ಮದಿ ಜೀವನಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಸರ್ಕಾರ ಒದಗಿಸಬೇಕಾಗಿದೆ. ಇವರ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಯುವ ಸಮುದಾಯಕ್ಕೆ ಉದ್ಯೋಗಾವಕಾಶ ಕಲ್ಪಿಸಿ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸಬೇಕಾಗಿದೆ ಎಂದು ಮನವಿ ಮಾಡಿದರು.

ಚಿನ್ಮಯಿ ಆಚಾರ್ಯ ಅವರಿಂದ ಭರತ ನಾಟ್ಯ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ನಿವೃತ್ತ ಡಿವೈಎಸ್‌ಪಿ ಮರಿಸ್ವಾಮಿ, ಕೃತಿ ಲೇಖಕ ಹೊಂಗನೂರು ಹೆಚ್.ಜಿ.ನಾಗರಾಜು, ವಿವಿಟಿ ಕಾರ್ಯದರ್ಶಿ ಹೆಚ್.ಎಸ್.ನಂಜುಂಡಸ್ವಾಮಿ, ಸಾಹಿತಿಗಳಾದ ಇಂ ಭೀಮಸೇನ ಬಡಿಗೇರ ಹುಬ್ಬಳ್ಳಿ, ಉಪಾಧ್ಯಕ್ಷ ದೇವೇಂದ್ರಚಾರ್ ಇದ್ದರು.

## ಪ್ರತಿಭಾ ಪುರಸ್ಕಾರ

ಮೈಸೂರು,ಸೆ.2–ಮೈಸೂರಿನ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆ ಸೆ.14ರಂದು ಬೆಳಗ್ಗೆ 10 ಗಂಟೆಗೆ ಚಾಮರಾಜ ಜೋಡಿ ರಸ್ತೆಯಲ್ಲಿರುವ ಶ್ರೀ ಪಂಡಿತ್ ನಾರಾಯಣಚಾರ್ಯ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ, ರಾಜ್ಯ, ಅಂತರರಾಜ್ಯ ಮಟ್ಟದಲ್ಲಿ ಆಟಗಳಲ್ಲಿ ಭಾಗವಹಿಸಿ ಪದಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಅರ್ಜಿ ಸಲ್ಲಿಸಲು ಸೆ10, ಸಂಜೆ 6.30 ಕೊನೆ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 9741202595 ಸಂಪರ್ಕಿಸಬಹುದು.

## ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಸೆ.2–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಸೆ.4ರಂದು ಬೆಳಗ್ಗೆ 10ರಿಂದ ರಾತ್ರಿ 8 ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–4259259 ಸಂಪರ್ಕಿಸಿ.

## ಸಾಂಕ್ರಾಮಿಕ ರೋಗಗಳ ತುರ್ತಾಗಿ ಗುರ್ತಿಸಿ ಚಿಕಿತ್ಸೆ ನೀಡಿದರೆ ಸಾವಿನ ಪ್ರಮಾಣ ತಗ್ಗಿಸಬಹುದು



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ ಸಾಂಕ್ರಾಮಿಕ ರೋಗಗಳ ಅರಿವು ಕಾರ್ಯಾಗಾರದಲ್ಲಿ ಡಾ.ಸಿ.ಜಿ.ಬೆಟಸೂರ್‌ಮಠ, ಡಾ.ಬಸವನಗೌಡಪ್ಪ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಸೆ.2(ಎಂಕೆ)– ಸಾಂಕ್ರಾಮಿಕ ರೋಗಗಳನ್ನು ತ್ವರಿತವಾಗಿ ಗುರ್ತಿಸಿ, ಸೂಕ್ತ ಚಿಕಿತ್ಸೆ ನೀಡುವ ಮೂಲಕ ಸಾವಿನ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್‌ಮಠ ಹೇಳಿದರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಸಾಂಕ್ರಾಮಿಕ ರೋಗಗಳ ಅರಿವು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೋವಿಡ್–19 ಸಾಂಕ್ರಾಮಿಕ ರೋಗ ಸರಿಯಾದ ಯೋಜನೆ ಮತ್ತು ನಿರ್ವಹಣೆಯ ಬಗ್ಗೆ ಪಾಠ ಕಲಿಸಿದೆ ಎಂದು ಹೇಳಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಮಾತನಾಡಿ, ವಿದ್ಯಾಭ್ಯಾಸದ ದಿನಗಳಲ್ಲಿಯೇ ಸಾಂಕ್ರಾಮಿಕ ರೋಗಗಳ ಪರಿಚಯ ಮತ್ತು ತಡೆಗಟ್ಟುವಿಕೆ ಕುರಿತು ತಿಳಿಸಿಕೊಟ್ಟರೆ, ಅವರಿಂದ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗಲಿದೆ. ಇತ್ತೀಚಿನ ದಿನಗಳಲ್ಲಿ ವಯಸ್ಕರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಅಗತ್ಯವಿದೆ ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ.ಸಿ.ಪಿ.ಮಧು ಮಾತನಾಡಿ, ಸೋಂಕುಗಳನ್ನು ನಿಯಂತ್ರಿಸಲು ಸಂಘಟಿತ ಚಿಕಿತ್ಸೆ ನೀಡುವ ತಂಡಗಳ ರಚನೆ ಅಗತ್ಯವಿದೆ. ಪರಸ್ಪರ ಹೊಂದಾಣಿಕೆಯಿಂದ ಸೋಂಕಿತರಿಗೆ ಸೂಕ್ತ ಚಿಕಿತ್ಸೆ ನೀಡಿದರೆ, ರೋಗದಿಂದ ಮುಕ್ತರನ್ನಾಗಿ ಮಾಡಬಹುದಾಗಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ್, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ.ನಾರಾಯಣಪ್ಪ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ವೈ.ಎಸ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಉಚಿತ ಉದ್ಯೋಗ ಮಾಹಿತಿ ಶಿಬಿರ

ಮೈಸೂರು, ಸೆ.2–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್, ಎಸ್‌ಎಸ್‌ಐಟಿ ಸಲ್ಯೂಷನ್ಸ್ ಟೀಚರ್ ಟ್ರೈನಿಂಗ್ ಅಕಾಡೆಮಿ ಮೈಸೂರು ಸಂಯುಕ್ತಾಶ್ರಯದಲ್ಲಿ ಸೆ.5ರಂದು ಮಾಂಟೆಸರಿ ಶಿಕ್ಷಕರು, ಎನ್‌ಟಿಟಿ ಶಿಕ್ಷಕರು, ಪಿಟಿಟಿ ಶಿಕ್ಷಕರ ತರಬೇತಿ ಪಡೆದವರಿಗಾಗಿ ಉಚಿತ ಉದ್ಯೋಗ ಮಾಹಿತಿ ಶಿಬಿರವನ್ನು ಏರ್ಪಡಿಸಲಾಗಿದೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಹೊಂದಿರುವ 18ರಿಂದ 55ರ ವಯೋಮಾನದ, ಈಗಾಗಲೇ ತರಬೇತಿ ಹೊಂದಿದವರು ಹಾಗೂ ತರಬೇತಿ ಪಡೆಯಲು ಆಸಕ್ತ ಅಭ್ಯರ್ಥಿಗಳು ಈ ಶಿಬಿರದ ಫಲಾನುಭವಿಗಳಾಗಿರುತ್ತಾರೆ.

ಅಭ್ಯರ್ಥಿಗಳು ತಮ್ಮ ಸ್ವವಿವರ, ಆಧಾರ್ ಪ್ರತಿ ಹಾಗೂ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಅಂದು ಬೆಳಗ್ಗೆ 10.30ರಿಂದ 1.30 ರವರೆಗೆ ನೇರವಾಗಿ ಭಾಗವಹಿಸಬಹುದಾಗಿದೆ. ಶಿಬಿರ ನಡೆಯುವ ಸ್ಥಳ, ಎಸ್‌ಎಸ್‌ಐಟಿ ಸಲ್ಯೂಷನ್ಸ್ ಕಚೇರಿ, ಜಯಲಕ್ಷ್ಮಿದೇವಿ ಕಾಲೇಜು ಆವರಣ, ತಾರಕ ಪಾರ್ಕ್ ಸಮೀಪ, ರಾಮಕೃಷ್ಣನಗರ, ಮೈಸೂರು. ಹೆಚ್ಚಿನ ಮಾಹಿತಿ ಹಾಗೂ ನೋಂದಾವಣಿಗಾಗಿ 8310306882, 9686855470 ಕರೆ ಮಾಡಬಹುದು ಎಂದು ಸಂಸ್ಥೆಯ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೂಕಾಂಬಿಕಾ ಸಮೃದ್ಧಿ ಬಡಾವಣೆಯಲ್ಲಿ ಗಣೇಶೋತ್ಸವ



ಮೂಕಾಂಬಿಕಾ ಸಮೃದ್ಧಿ ಬಡಾವಣೆಯಲ್ಲಿ ನಾಲ್ಕನೇ ವರ್ಷದ ಗಣೇಶೋತ್ಸವ ನಡೆಯಿತು.

ಮೈಸೂರು,ಸೆ.2–ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮೂಕಾಂಬಿಕಾ ಸಮೃದ್ಧಿ ಬಡಾವಣೆಯಲ್ಲಿ ಸಾಂಪ್ರದಾಯಿಕವಾಗಿ ವಿಜೃಂಭಣೆಯಿಂದ ನಾಲ್ಕನೇ ವರ್ಷದ ಗಣೇಶೋತ್ಸವ ನಡೆಯಿತು.

ಐದು ದಿನಗಳ ಕಾಲ ನಡೆದ ಈ ಗಣೇಶೋತ್ಸವದಲ್ಲಿ ಧಾರ್ಮಿಕ ಆಚರಣೆಗಳೊಂದಿಗೆ ಮಹಿಳೆಯರಿಗೆ, ಪುರುಷರಿಗೆ, ದಂಪತಿ ಹಾಗೂ ಮಕ್ಕಳಿಗೆ ವಿವಿಧ ಕ್ರೀಡಾ ಸ್ಪರ್ಧೆಗಳು ಜರುಗಿದವು. ರಾಜ್ಯಮಟ್ಟದ ರಂಗೋಲಿ ಕಲಾವಿದೆ ಭಾರತ ವಿಕಾಸ ಪರಿಷತ್ ಖಜಾಂಚಿ ಕೌಸಲ್ಯ ರಂಗೋಲಿ ಸ್ಪರ್ಧೆಗೆ ತೀರ್ಪುಗಾರರಾಗಿ ಭಾಗವಹಿಸಿದ್ದರು. ರಂಗೋಲಿ ಸ್ಪರ್ಧೆ ಹಾಗೂ ಇತರ ಆಟಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಮೂಕಾಂಬಿಕಾ ಸಮೃದ್ಧಿ ಬಡಾವಣೆ ನಿವಾಸಿಗಳ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೆ.ಆರ್. ಗಣೇಶ್ ಬಹುಮಾನ ವಿತರಣೆ ಮಾಡಿದರು.

ಸಮಿತಿ ಅಧ್ಯಕ್ಷ ಗಣೇಶ್ ಮಾತನಾಡಿ, ಗಣಪತಿ ಹಬ್ಬದ ಕಾರ್ಯಕ್ರಮಗಳು ಬಡಾವಣೆ ಯಲ್ಲಿ ಅನ್ಯೋನ್ಯತೆ, ಸಹಕಾರ ಪಡೆಯುವಲ್ಲಿ ನೆರವಾಗಿದೆ. ಸಾರ್ವಜನಿಕ ಆಚರಣೆಗಳಿಂದ ನಮ್ಮಲ್ಲಿರುವ ಅಂತರಗಳು ಕಡಿಮೆಯಾಗಿ ಒಗ್ಗಟ್ಟಿನಿಂದ ಬದುಕಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಗಣೇಶಮೂರ್ತಿ ವಿಸರ್ಜನೆ ಮೆರವಣಿಗೆ ಮೂಲಕ ಶೋಭಾಯಾತ್ರೆ ಮಾಡಿ ಪ್ರತಿ ಮನೆಯಲ್ಲೂ ಪೂಜೆ ಸಲ್ಲಿಸಿದರು. ಮೂಕಾಂಬಿಕಾ ಸಮೃದ್ಧಿ ಬಡಾವಣೆ ನಿವಾಸಿಗಳ ಹಿತರಕ್ಷಣಾ ಸಮಿತಿ ಉಪಾಧ್ಯಕ್ಷ ರಾಮಕೃಷ್ಣ, ಕಾರ್ಯದರ್ಶಿ ಪುನೀತ್, ನಾಗಭೂಷಣ ಆಚಾರ್, ಮಂಜುನಾಥ್, ಮೋಹನ್‌ಕುಮಾರ್, ರಚನಾ, ಪೂಜಾ ಹಾಗೂ ಬಡಾವಣೆ ನಿವಾಸಿಗಳು ಇದ್ದರು.

## ಕಾಯಕ ಸೇವಾ ಪ್ರಶಸ್ತಿ ಪ್ರದಾನ...



ಎಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಅಪೋಲೋ ಆಸ್ಪತ್ರೆಯಲ್ಲಿ 25 ವರ್ಷಗಳಿಗೂ ಹೆಚ್ಚು ಕಾಲದಿಂದ ಸೇವೆ ಸಲ್ಲಿಸುತ್ತಿರುವ, ಬಡ ರೋಗಿಗಳ ಆರೈಕೆಯಲ್ಲಿ ಸದಾ ಮುಂದಿರುವ ಡಾ. ರವಿ ಪುರಾಣಿಕ್ ಅವರಿಗೆ ಕಾಯಕ ಸೇವಾ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಉದ್ಯಮಿ ತಬ್ರೇಜ್ ಇದ್ದರು.

# ದೇಶ - ವಿದೇಶ

## ಅಮೆರಿಕದಲ್ಲಿ ಭೀಕರ ಅಪಘಾತ: ಕೋಲಾರ ಮೂಲದ ಬಾಡಿ ಬಿಲ್ಡರ್ ದುರ್ಮರಣ

**ಫ್ಲೋರಿಡಾ ಟೆಕ್ಸಾಸ್:** ಅಮೆರಿಕದ ಫ್ಲೋರಿಡಾ ಟೆಕ್ಸಾಸ್‌ನಲ್ಲಿ ನಡೆದ ಭೀಕರ ಅಪಘಾತದಲ್ಲಿ ಕೋಲಾರದ ಗಾಂಧಿನಗರ ಬಡಾವಣೆಯ ಬಾಡಿ ಬಿಲ್ಡರ್ ಒಬ್ಬರು ಮೃತಪಟ್ಟಿದ್ದಾರೆ. ನಗರದ ನಿವಾಸಿ ಸುರೇಶ್ ಬಾಬು (42) ಮೃತ ದುರ್ದೈವಿ. ಇವರು ಗಾಂಧಿನಗರದ ಚಲಪತಿ ಹಾಗೂ ಮುನಿಯಮ್ಮ ದಂಪತಿ ಪುತ್ರ. ಸುರೇಶ್, 3 ದಿನದ ಹಿಂದೆ ಫ್ಲೋರಿಡಾದಿಂದ ಟೆಕ್ಸಾಸ್‌ಗೆ ತೆರಳುವಾಗ ನಡೆದಿದ್ದ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ನಟಿ ಪ್ರೇಮ, ಪ್ರಿಯಾಮಣಿ ಮತ್ತಿತರ ಜೊತೆ ಮಾಡಲಿಂಗ್‌ನಲ್ಲಿ ಪೋಸ್ ಕೊಟ್ಟಿದ್ದ ಸುರೇಶ್ ಬಾಬು ಉಪ್ಪಿ 2 ಮತ್ತು ಇತರ ಚಲನಚಿತ್ರಗಳಲ್ಲಿಯೂ ನಟಿಸಿದ್ದರು. ಫಿಜಿಯೋಥೆರಪಿಸ್ಟ್ ಆಗಿ ತಮ್ಮದೇ ಸ್ವಂತ ಉದ್ಯಮ ಆರಂಭಿಸಿದ್ದರು. ಹಲವು ನಟ–ನಟಿಯರಿಗೆ ವ್ಯಾಯಾಮ ತರಬೇತಿ ನೀಡಿದ್ದರು. ದೆಹಲಿ ಮೂಲದ ಯುವತಿಯನ್ನು ಪ್ರೀತಿಸಿ ವಿವಾಹವಾಗಿದ್ದರು.




## ಅತ್ಯಾಚಾರ ಆರೋಪದಲ್ಲಿ ಬಂಧನ; ಪೊಲೀಸರ ಮೇಲೆ ಗುಂಡು ಹಾರಿಸಿ ಆಪ್ ಶಾಸಕ ಪರಾರಿ



**ಚಂಡೀಗಢ:** ಅತ್ಯಾಚಾರ ಮತ್ತು ವಂಚನೆ ಆರೋಪದ ಮೇಲೆ ಪಂಜಾಬ್‌ನ ಆಪ್ ಶಾಸಕನನ್ನು ಬಂಧಿಸಿ ಕರೆದೊಯ್ಯುವಾಗ ಹರಿಯಾಣದ ಕರ್ನಾಲ್ ಬಳಿ ಪೊಲೀಸರ ಮೇಲೆ ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ಅತ್ಯಾಚಾರ ಆರೋಪದ ಹಿನ್ನೆಲೆಯಲ್ಲಿ ಪಂಜಾಬ್ ಶಾಸಕ ಹರ್ಮೀತ್ ಸಿಂಗ್ ಧಿಲ್ಲೋನ್ ಪಠಾಣಮಜ್ರರನ್ನು ಪೊಲೀಸರು ಬಂಧಿಸಿದ್ದರು. ಸ್ಥಳೀಯ ಠಾಣೆಗೆ ಅವರನ್ನು ಕರೆದೊಯ್ಯುತ್ತಿದ್ದಾಗ ಕಾರಿನಲ್ಲಿ ಬಂದ ಅವರ ಬೆಂಬಲಿಗರು ಪೊಲೀಸರ ಮೇಲೆಯೇ ಗುಂಡು ಹಾರಿಸಿದ್ದರು. ಈ ವೇಳೆ ಓರ್ವ ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಬಳಿಕ ಹರ್ಮೀತ್ ಸಿಂಗ್, ತಮ್ಮ ಬೆಂಬಲಿಗರು ಬಂದಿದ್ದ ಸ್ಕಾರ್ಪಿಯೋ, ಎಸ್‌ಯುವಿಯಲ್ಲಿ ಪರಾರಿಯಾಗಿದ್ದಾರೆ. ಇದೀಗ ಪೊಲೀಸರು ಫಾರ್ಚೂನರ್ ಅನ್ನು ವಶಕ್ಕೆ ಪಡೆದಿದ್ದಾರೆ. ಆದರೆ ಶಾಸಕ ಇನ್ನೊಂದು ಕಾರಿನಲ್ಲಿದ್ದಿದ್ದರಿಂದ ಎಸ್ಕೇಪ್ ಆಗಿದ್ದಾರೆ. ಇದೀಗ ಶಾಸಕನ ಪತ್ತೆಗೆ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ. ಜಿರಾಕ್‌ಪುರದ ಮಹಿಳೆ ನೀಡಿದ ದೂರಿನಾಧಾರವಾಗಿ ಶಾಸಕ ಹರ್ಮೀತ್ ಸಿಂಗ್ ವಿರುದ್ಧ ಅತ್ಯಾಚಾರ, ವಂಚನೆ ಹಾಗೂ ಜೀವ ಬೆದರಿಕೆ ಪ್ರಕರಣದಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.


## ಪ್ರವಾಹ ಆಶೀರ್ವಾದದಂತೆ; ನೀರನ್ನು ಟಬ್‌ಗಳಲ್ಲಿ ಸಂಗ್ರಹಿಸಿ



**ಇಸ್ಲಾಮಾಬಾದ್:** ಭಾರಿ ಮಳೆಯಿಂದಾದ ಪ್ರವಾಹಕ್ಕೆ ಸಾವಿರಾರು ಜನ ಸಂಕಷ್ಟಕ್ಕೆ ಸಿಲುಕಿದ್ದರ ನಡುವೆ ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್, ಮಳೆಯನ್ನು ಆಶೀರ್ವಾದ ಎಂದು ಪರಿಗಣಿಸಬೇಕು, ಚರಂಡಿಗೆ ಬಿಡುವ ಬದಲು ಪ್ರವಾಹದ ನೀರನ್ನು ಜನರು ಟಬ್‌ಗಳಲ್ಲಿ ಸಂಗ್ರಹಿಸಿಡಬೇಕು ಎಂದು ಸಲಹೆ ನೀಡಿದ್ದಾರೆ.

ಪಾಕಿಸ್ತಾನದ ದುನ್ಯಾ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಆಸಿಫ್, ಪ್ರವಾಹದ ಸಂದರ್ಭದಲ್ಲಿ ಪ್ರತಿಭಟಿಸುತ್ತಿರುವ ಜನರು ಪ್ರವಾಹದ ನೀರನ್ನು ಮನೆಗೆ ತೆಗೆದುಕೊಂಡು ಹೋಗಬೇಕು. ಈ ನೀರನ್ನು ತಮ್ಮ ಮನೆಗಳಲ್ಲಿ, ಟಬ್‌ಗಳು ಮತ್ತು ಪಾತ್ರೆಗಳಲ್ಲಿ ಸಂಗ್ರಹಿಸಬೇಕು. ನಾವು ಈ ನೀರನ್ನು ಆಶೀರ್ವಾದದ ರೂಪದಲ್ಲಿ ನೋಡಬೇಕು. ಬೃಹತ್ ಯೋಜನೆಗಳಿಗಾಗಿ 10–15 ವರ್ಷ ಕಾಯುವ ಬದಲು, ತ್ವರಿತವಾಗಿ ಪೂರ್ಣಗೊಳ್ಳಬಹುದಾದ ಸಣ್ಣ ಅಣೆಕಟ್ಟುಗಳನ್ನು ಪಾಕಿಸ್ತಾನ ನಿರ್ಮಿಸಬೇಕು ಎಂದು ಹೇಳಿಕೆ ನೀಡಿದ್ದಾರೆ. ಮಳೆಯಿಂದಾಗಿ ಪಾಕಿಸ್ತಾನದಲ್ಲಿ 2 ಲಕ್ಷಕ್ಕೂ ಅಧಿಕ ಜನರು ಸಂಕಷ್ಟ ಅನುಭವಿಸುತ್ತಿದ್ದು, ಸಾವಿರಕ್ಕೂ ಹೆಚ್ಚು ಜನರು ಮನೆಯನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

## ಮೊಬೈಲ್ ಗೀಳು: ಪತ್ನಿ ಕೊಂದ ಪತಿ



**ದೆಹಲಿ:** ತನ್ನ ಪತ್ನಿ ಹೆಚ್ಚಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕಾಲ ಕಳೆಯುತ್ತಾಳೆ ಎಂದು ಅಸಮಾಧಾನಗೊಂಡಿದ್ದ ಪತಿಯೊಬ್ಬ ಆಕೆಯನ್ನು ಚಾಕುವಿನಿಂದ ಇರಿದು ಕೊಂದು ತಾನೂ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ದೆಹಲಿಯ ಹಳೆ ರೋಷನ್ ಪುರದಲ್ಲಿ ನಡೆದಿದೆ. ನಜಾಫ್‌ಗಢ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉತ್ತರಪ್ರದೇಶದ ಪಿಲಿಭಿತ್ ಮೂಲದ ಅಮನ್ (35) ಎಂಬ ಆಟೋ ಚಾಲಕ ಹಳೆ ರೋಷನ್‌ಪುರದಲ್ಲಿ 30 ವರ್ಷದ ಪತ್ನಿ ಹಾಗೂ ಇಬ್ಬರು ಮಕ್ಕಳೊಡನೆ ನೆಲೆಸಿದ್ದರು. ಪತ್ನಿ ಹೆಚ್ಚಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕಾಲಕಳೆಯುತ್ತಾರೆ ಎಂದು ಪತ್ನಿಯನ್ನು ಅಮನ್ ಕೊಲೆ ಮಾಡಿದ್ದ. ಕೊಲೆಯ ನಂತರ ತಾನೂ ವಿಷ ಸೇವಿಸಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ. ಸ್ಥಳೀಯರು ಆತನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಪತ್ನಿಯ ಮೊಬೈಲ್ ಗೀಳಿನ ಸಂಬಂಧ ಇಬ್ಬರಿಗೂ ಆಗಾಗ ವಾಗ್ವಾದ ನಡೆಯುತ್ತಿತ್ತು. ಅಮನ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಸದ್ಯ ಆತ ಆರ್‌ಎಂಎಚ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ಸುಡಾನ್‌ನಲ್ಲಿ ಭಾರಿ ಭೂಕುಸಿತ: 1000ಕ್ಕೂ ಹೆಚ್ಚು ಮಂದಿ ಸಾವು



**ಪೋರ್ಟ್ ಸುಡಾನ್:** ಸುಡಾನ್‌ನ ಡಾರ್ಫುರ್ ಪ್ರದೇಶದಲ್ಲಿ ಭಾರಿ ಭೂಕುಸಿತ ಸಂಭವಿಸಿದ್ದು, ಪರಿಣಾಮ 1,000ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಈ ಭೂಕುಸಿತ ಇಡೀ ಗ್ರಾಮವನ್ನೇ ಸರ್ವನಾಶ ಮಾಡಿದೆ. ಆದರೆ, ಅದೃಷ್ಟವೆಂಬಂತೆ ವ್ಯಕ್ತಿಯೊಬ್ಬರು ಮಾತ್ರ ಬದುಕುಳಿದಿದ್ದಾರೆ. ಭಾರಿ ಮಳೆಯ ಬಳಿಕ ಸಂಭವಿಸಿದ ದುರಂತದಲ್ಲಿ ಮರ್ರಾ ಪರ್ವತ ಪ್ರದೇಶದಲ್ಲಿರುವ ತಾರಾಸಿನ್ ಗ್ರಾಮ ಸಂಪೂರ್ಣವಾಗಿ ನಾಶವಾಗಿದೆ. ಮಾಹಿತಿ ಪ್ರಕಾರ, ಸುಡಾನ್‌ನ ಡಾರ್ಫುರ್ ಗ್ರಾಮದ 1,000ಕ್ಕೂ ಹೆಚ್ಚು ನಿವಾಸಿಗಳು ಮೃತಪಟ್ಟಿದ್ದಾರೆ. ಅದರಲ್ಲಿ ಒಬ್ಬ ವ್ಯಕ್ತಿ ಮಾತ್ರ ಬದುಕುಳಿದಿದ್ದಾರೆ. ಇನ್ನು, ಬೃಹತ್ ಭೂಕುಸಿತ ಉಂಟಾದ ಪರಿಣಾಮ ನೂರಾರು ಜನರು ಮಣ್ಣಿನ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದು, ಅವರ ರಕ್ಷಣೆಗಾಗಿ ಸುಡಾನ್ ವಿಮೋಚನಾ ಸೇನೆ ವಿಶ್ವಸಂಸ್ಥೆಗಳಿಗೆ ಮನವಿ ಮಾಡಿದೆ. ಈ ಹಿಂದೆ 2018ರಲ್ಲಿ ಟೌಕೋಲಿಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ 20 ಜನರು ಮೃತಪಟ್ಟಿದ್ದರು.

ಮೈಸೂರು ಮಿತ್ರ ಬುಧವಾರ 3 ಸೆಪ್ಟೆಂಬರ್ 2025

## ಇಂದು ಕೊಡಗು ಜಿಲ್ಲೆಯಾದ್ಯಂತ ಕೈಲ್ ಪೊಳ್ದ್ ಹಬ್ಬ ಆಚರಣೆ

**ಮಡಿಕೇರಿ:** ಕೊಡಗು ಜಿಲ್ಲೆಯಾದ್ಯಂತ ಕೈಲ್ ಪೊಳ್ದ್ ಹಬ್ಬವನ್ನು ಸಂಪ್ರದಾಯ ಬದ್ಧವಾಗಿ ಬುಧವಾರ (ಸೆ.3) ಆಚರಿಸಲಾಗುತ್ತಿದೆ. ಸೆಪ್ಟಂಬರ್ ತಿಂಗಳ 3ನೇ ತಾರೀಕಿನಂದೇ ಕೊಡಗಿನ ಹೆಚ್ಚಿನ ಕಡೆಗಳಲ್ಲಿ ಹಬ್ಬಾಚರಣೆ ನಡೆಯುತ್ತದೆಯಾದರು, ನಾಲ್ಕುನಾಡ್ ಹಾಗೂ ಮುತ್ತ್‌ನಾಡ್‌ಗಳಲ್ಲಿ ಶಾಸ್ತ್ರನೋಡಿಯೇ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಹಬ್ಬಕ್ಕೆ ದಿನ ನಿಶ್ಚಯಿಸುತ್ತಾರೆ.

ಕೈಲ್‌ಪೊಳ್ದ್ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಆಯುಧಗಳಾದ ಕೋವಿ, ಒಡಿಕತ್ತಿ, ಪೀಚೆಕತ್ತಿ, ಕೃಷಿ ಪರಿಕರಗಳಾದ ನೊಗ, ನೇಗಿಲು, ಈಟಿ, ಭರ್ಜಿ ಸೇರಿದಂತೆ ಆಯುಧಗಳಿಗೆಲ್ಲ ಗಂಧ ಹಾಗೂ ವಿಶೇಷವಾದ 'ತೋಕ್‌ಪೂ'ನಿಂದ ಅಲಂಕರಿಸಲಾಗುತ್ತದೆ. ಎಲ್ಲಾ ಆಯುಧಗಳಿಗೂ ಪೂಜಿಸಿ, ಕೊಡಿಬಾಳೆ ಎಲೆಯಲ್ಲಿ ಹಬ್ಬಕ್ಕೆ ಮಾಡಿದ ವಿಶೇಷ ಭೋಜ ಹಾಗೂ ಮದ್ಯವನ್ನು ದೇವರಿಗೆ ಸಮರ್ಪಿಸಿ ನಾಳಿನ ನೆಮ್ಮದಿಗಾಗಿ ಸಾಮೂಹಿಕವಾಗಿ ಪ್ರಾರ್ಥಿಸಲಾಗುತ್ತದೆ. ಹಲವು ಕಡೆಗಳಲ್ಲಿ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ಏರ್ಪಡಿಸುವುದು ವಿಶೇಷವಾಗಿದೆ.

# ಸೆ.22 ರಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ

## ಅಗತ್ಯ ಸಿದ್ಧತೆಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ



ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ವೆಂಕಟ್‌ರಾಜಾ.

ಮಡಿಕೇರಿ, ಸೆ.2–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ರಾಜ್ಯದ ಎಲ್ಲಾ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆ ನಡೆಯಲಿದ್ದು, ಇದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದ್ದಾರೆ.

ನಗರದ ತಮ್ಮ ಕಚೇರಿ ಸಭಾಂಗಣದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಳ್ಳುವ ಸಂಬಂಧ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಎಲ್ಲಾ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಳ್ಳುವ ಪ್ರಕ್ರಿಯೆ ಶೀಘ್ರ ಆರಂಭವಾಗಲಿದೆ. ಆ ದಿಸೆಯಲ್ಲಿ ಈ ಎಲ್ಲಾ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆಗಬೇಕಿದೆ ಯಾವುದೇ ಕುಟುಂಬವು ಸಮೀಕ್ಷೆಯಿಂದ ಹೊರಗುಳಿಯದಂತೆ ಎಚ್ಚರವಹಿಸಬೇಕು. ಆ ದಿಸೆಯಲ್ಲಿ ಎಲ್ಲಾ ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕ ಇರುವುದರಿಂದ ವಾಸದ ಮನೆಗಳ ವಿದ್ಯುತ್ ಬಿಲ್ಲಿನ ಆರ್‌ಆರ್ ಸಂಖ್ಯೆ ಆಧಾರದ ಮೇಲೆ ಮನೆಗಳನ್ನು ಗುರುತಿಸಿ ಅಲ್ಲಿರುವ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಬೇಕಿದೆ. ಜೊತೆಗೆ ವಿದ್ಯುತ್ ಸಂಪರ್ಕ ಇಲ್ಲದ ಮನೆಗಳಿಗೂ ಸಹ ಗ್ರಾಮ ಆಡಳಿತ ಅಧಿಕಾರಿಗಳ ಮುಖಾಂತರ ಜಿಯೊ ಮ್ಯಾಪಿಂಗ್ ಮಾಡಬೇಕಿದೆ ಎಂದು ಹೇಳಿದರು.

ಇದರಿಂದ ಸಮೀಕ್ಷೆವ್ಯಾಪ್ತಿಯಿಂದ ಯಾರೂ ಹೊರಗುಳಿಯುವುದಿಲ್ಲ. ಜಿಲ್ಲೆಯಲ್ಲಿರುವ ಎಲ್ಲಾ ಮನೆಗಳ ವಿದ್ಯುತ್ ಮೀಟರ್ ರೀಡರ್‌ಗಳಿಂದ ಕುಟುಂಬಗಳ ಪಟ್ಟಿ ಮಾಡಿ, ಈ ಕುರಿತು ಮನೆಗಳಿಗೆ ಜಿಯೋ ಟ್ಯಾಗ್‌ಗಾಗಿ ಸ್ಟಿಕ್ಕರ್‌ಗಳನ್ನು ಅಳವಡಿಸುವ ಕಾರ್ಯ ಈಗಾಗಲೇ ಆರಂಭವಾಗಿದೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

ಜಿಲ್ಲೆಯಲ್ಲಿ ವಿದ್ಯುತ್ ಮೀಟರ್ ರೀಡರ್ ಸಿಬ್ಬಂದಿಯು ಆರ್‌ಆರ್ ನಂಬರ್ ಹೊಂದಿರುವ ಕುಟುಂಬಗಳ ಪಟ್ಟಿ ಮಾಡಲಿದ್ದಾರೆ. ಆ ದಿಸೆಯಲ್ಲಿ ಸಮೀಕ್ಷೆ ಕಾರ್ಯ ಮುಗಿಯುವವರೆಗೂ ತಮ್ಮ ಮನೆಗಳಿಗೆ ಅಂಟಿಸಲಾದ ಜಿಯೋ ಟ್ಯಾಗ್ ಸ್ಟಿಕ್ಕರ್‌ನ್ನು ತೆಗೆಯಬಾರದು ಎಂದು ಕೋರಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವು ಸೆ.22 ರಿಂದ ಆರಂಭವಾಗಿ ಅ.7 ರೊಳಗೆ ಪೂರ್ಣಗೊಳಿಸಲಾಗುತ್ತದೆ. ಸಮೀಕ್ಷಾ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸಲಾಗುತ್ತದೆ. ಸಮೀಕ್ಷೆಗಾಗಿ ವಿಶೇಷ ಆ್ಯಪ್ ನಿಗದಿಪಡಿಸಲಾಗಿದೆ ಎಂದರು.

ಸುಮಾರು 65 ಪ್ರಶ್ನಾವಳಿಗಳು ಇದ್ದು, ಕುಟುಂಬಗಳಿಂದ ಮಾಹಿತಿ ಪಡೆದು ಆ ಆ್ಯಪ್ ಮೂಲಕವೇ ಸಮೀಕ್ಷೆ ಮಾಡಲಾಗುತ್ತದೆ. ಜಿಲ್ಲೆಯಲ್ಲಿನ ಒಟ್ಟು ಕುಟುಂಬಗಳ ಸಂಖ್ಯೆಗೆ ಅನುಗುಣವಾಗಿ ಪ್ರತೀ ಸಮೀಕ್ಷೆದಾರರು ಎಲ್ಲಾ ಮನೆಗಳಿಗೆ ಖುದ್ದು ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಹೇಳಿದರು. ವಿದ್ಯುತ್ ಸಂಪರ್ಕ ಹೊಂದಿರುವ ಮನೆಗಳ ಒಟ್ಟು ಸಂಖ್ಯೆ 1,86,005, ಕಾಲಂ(2)ಕ್ಕೆ ಅನುಗುಣವಾಗಿ ಬೇಕಾಗಿರುವ ಮಾಸ್ಟರ್ ಟ್ರೈನರ್ಸ್‌ಗಳ ಒಟ್ಟು ಸಂಖ್ಯೆ 25, ಅವಶ್ಯಕತೆ ಯಿರುವ ಮೇಲ್ವಿಚಾರಕರ ಒಟ್ಟು ಸಂಖ್ಯೆ 62 ಹಾಗೂ ಅವಶ್ಯಕತೆಯಿರುವ ಗಣತಿದಾರರ ಒಟ್ಟು ಸಂಖ್ಯೆ 1240 ಆಗಿರುತ್ತದೆ ಎಂದು ವಿವರಿಸಿದರು.

ಜಿಲ್ಲಾ ಹಂತದಲ್ಲಿ ಆಯ್ಕೆ ಮಾಡಿದ ಮಾಸ್ಟರ್ ಟ್ರೈನರ್ಸ್‌ಗಳಿಗೆ ತರಬೇತಿ ನೀಡಲಾಗುವುದು. ತರಬೇತಿಯನ್ನು ಹೊಂದಿದ ಮಾಸ್ಟರ್ ಟ್ರೈನರ್ಸ್ ಗಳಿಂದ ಮೇಲ್ವಿಚಾರಕರು ಮತ್ತು ಗಣತಿದಾರರಿಗೆ ತರಬೇತಿ ನೀಡಲಾಗುತ್ತದೆ ಎಂದರು.

ಈ ಸಮೀಕ್ಷಾ ಕಾರ್ಯಕ್ಕೆ ಸರ್ಕಾರದ ಆದೇಶದಂತೆ ಸಮೀಕ್ಷೆಯ ಮೇಲ್ವಿಚಾರಣೆಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು ಮತ್ತು ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ವಿವರಿಸಿದರು.

ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಸಂಬಂಧ ಸರ್ಕಾರದ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎ.ಎಸ್.ದೀಪಕ್, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕರಾದ ಬಿ.ಬಸಪ್ಪ, ಪೌರಾಯುಕ್ತರಾದ ಎಚ್.ಆರ್.ರಮೇಶ್, ಸೆಸ್ಕ್ ಇಇ ರಾಮಚಂದ್ರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪತ್ರಾಂಕಿತ ಅಧಿಕಾರಿ ಕವಿತಾ, ವ್ಯವಸ್ಥಾಪಕರಾದ ಶಿವಶಂಕರ, ತಾಲೂಕು ಅಧಿಕಾರಿಗಳಾದ ಮೋಹನ್ ಕುಮಾರ್, ಶ್ರೀಕಾಂತ್, ಶಾಲಾ ಶಿಕ್ಷಣ ಇಲಾಖೆಯ ಡಿವೈಪಿಸಿ ಕೃಷ್ಣಪ್ಪ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ನಾರಾಯಣ ಇತರರು ಇದ್ದರು.

## ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ ಪುಣ್ಯಸ್ಮರಣೆ



**ಮಡಿಕೇರಿ:** ಭಾರತ–ಪಾಕಿಸ್ತಾನ ನಡುವೆ 1965ರಲ್ಲಿ ನಡೆದ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ (ಮರಣೋತ್ತರ) ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ 60ನೇ ಪುಣ್ಯಸ್ಮರಣೆ ಸೆ.7ರಂದು ಮಡಿಕೇರಿಯಲ್ಲಿ ನಡೆಯಲಿದೆ ಎಂದು ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಕೊಡವ ಮಕ್ಕಡ ಕೂಟ, ಅಜ್ಜಮಾಡ ಕುಟುಂಬಸ್ಥರು ಹಾಗೂ ಸ್ವಾ.ಲೀ.ಅಜ್ಜಮಾಡ ದೇವಯ್ಯ ಟ್ರಸ್ಟ್‌ನ ಸಹಯೋಗದಲ್ಲಿ ಬೆಳಗ್ಗೆ 11 ಗಂಟೆಗೆ ಸ್ವಾ ಲೀ. ಅಜ್ಜಮಾಡ ಬಿದೇವಯ್ಯ ವೃತ್ತದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಪುಣ್ಯ ಸ್ಮರಣೆಯನ್ನು ಆಚರಿಸಲಾಗುವುದು ಎಂದು ಹೇಳಿದ್ದಾರೆ. ಸಂಸದ ಯದುವೀರ್, ಶಾಸಕರಾದ ಪೊನ್ನಣ್ಣ, ಡಾ.ಮಂತರ್‌ಗೌಡ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

### ಅಕ್ರಮ ಮದ್ಯ, ಮಾದಕ ವಸ್ತುಗಳ ಸಾಗಾಟ ತಡೆಗೆ

## ಕೊಡಗು–ಕೇರಳ ಗಡಿಯಲ್ಲಿ ವಾಹನಗಳ ತಪಾಸಣೆ



ಮಡಿಕೇರಿ, ಸೆ.2– ಓಣಂ ಹಬ್ಬದ ಹಿನ್ನೆಲೆಯಲ್ಲಿ ಕೊಡಗು–ಕೇರಳ ಸಂಪರ್ಕಿಸುವ ಗಡಿ ಪ್ರದೇಶ ಪೆರುಂಬಾಡಿ ಚೆಕ್ ಪೋಸ್ಟ್‌ನಲ್ಲಿ ವಾಹನ ತಪಾಸಣೆಯನ್ನು ಬಿಗಿಗೊಳಿಸಲಾಗಿದೆ. ಕೇರಳ ಅಬಕಾರಿ ಇಲಾಖೆ ಹಾಗೂ ಕರ್ನಾಟಕ ಅಬಕಾರಿ ಇಲಾಖೆ ಜಂಟಿಯಾಗಿ ವಾಹನಗಳ ತಪಾಸಣೆ ನಡೆಸುತ್ತಿದ್ದು, ಅಕ್ರಮ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಡಲಾಗಿದೆ. ಅಕ್ರಮ ಮದ್ಯ ಹಾಗೂ ಮಾದಕ ವಸ್ತುಗಳ ಸಾಗಾಟವಾಗದಂತೆ ಎರಡು ರಾಜ್ಯಗಳ ಅಬಕಾರಿ ಇಲಾಖೆ ಅಧಿಕಾರಿಗಳು ಮತ್ತಿ ಸಿಬ್ಬಂದಿಗಳು ತಪಾಸಣೆ ನಡೆಸುತ್ತಿದ್ದಾರೆ.

ವಿರಾಜಪೇಟೆ ಅಬಕಾರಿ ಉಪ ಅಧೀಕ್ಷಕ ವಿ.ಚಂದ್ರಪ್ಪ ನೇತೃತ್ವದಲ್ಲಿ ಉಪ ವಿಭಾಗ ಮತ್ತು ಪೆರುಂಬಾಡಿ ಅಬಕಾರಿ ಠಾಣೆ ಅಧಿಕಾರಿಗಳು ಹಾಗೂ ಕೇರಳ ರಾಜ್ಯದ ಇರಟ್ಟಿಯ ಅಬಕಾರಿ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ವಾಹನಗಳ ತಪಾಸಣೆ ಕಾರ್ಯಾಚರಣೆ ನಡೆಸಿದರು.

ಕೊಡಗು ಮಾರ್ಗವಾಗಿ ಕೇರಳಕ್ಕೆ ಹೋಗುವ ಹಾಗೂ ಕೇರಳದಿಂದ ಕರ್ನಾಟಕಕ್ಕೆ ಆಗಮಿಸುವ ಪ್ರತಿ ವಾಹನ ಸಂಖ್ಯೆಗಳನ್ನು ನೋಂದಾಯಿಸಿಕೊಂಡು ತಪಾಸಣೆ ಮಾಡಲಾಯಿತು. ಕೊಡಗಿನಲ್ಲಿ ಕೈಲ್ ಮುಹೂರ್ತ ಹಬ್ಬ ಆಚರಣೆ ಸಂದರ್ಭ ಹಾಗೂ ಕೇರಳದಲ್ಲಿ ಓಣಂ ಹಬ್ಬ ಆಚರಣೆ ಜೊತೆಯಲ್ಲಿ ಇರುವುದು ಈ ಬಾರಿ ವಿಶೇಷವಾಗಿದೆ. ಕೇರಳದಲ್ಲಿ ಓಣಂ ಪ್ರಯುಕ್ತ ಮದ್ಯ ಮಾರಾಟ ನಿರ್ಬಂಧವಾಗಿದ್ದು ಕರ್ನಾಟಕದಿಂದ ಮದ್ಯ ಸಾಗಾಟವಾಗುವ ಸಾಧ್ಯತೆ ಹೆಚ್ಚಿರುವುದರಿಂದ ಎರಡು ರಾಜ್ಯದ ಅಬಕಾರಿ ಅಧಿಕಾರಿಗಳು ವಾಹನಗಳ ತಪಾಸಣೆ ನಡೆಸುತ್ತಿರುವುದು ಕಂಡು ಬಂದಿದೆ.

## ಮಡಿಕೇರಿಗೆ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ದೀಪ್ ಮಾಲಾ, ತಂಡ ಭೇಟಿ



ಮಡಿಕೇರಿ, ಸೆ.2–ಭಾರತ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ದೀಪ್ ಮಾಲಾ ನೇತೃತ್ವದ ತಂಡವು ಇತ್ತೀಚೆಗೆ ಕೊಡಗು ಜಿಲ್ಲೆಗೆ ಭೇಟಿ ನೀಡಿ ಬೂತ್ ಮಟ್ಟದ ಅಧಿಕಾರಿಗಳಿಗೆ ತರಬೇತಿ ಮತ್ತು ಚುನಾವಣಾ ಪ್ರಕ್ರಿಯೆ ಬಗ್ಗೆ ಮಾಹಿತಿ ಹಂಚಿಕೊಳ್ಳಲಾಯಿತು.

ತಂಡವು ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೂತ್ ಮಟ್ಟದ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ ನಡೆಸಿದರು.

ತಂಡದಲ್ಲಿ ದೀಪ್ ಮಾಲಾ (ಅಧೀನ ಕಾರ್ಯದರ್ಶಿ), ಸಹಾಯಕ ವಿಭಾಗಾಧಿಕಾರಿಗಳಾದ ಜ್ಯೋತ್ಸ್ನಾ ಮಿಗ್ಲಾನಿ, ಶುಭಮ್ ಮಿಶ್ರಾ (ಎಸ್‌ಒ) ಪ್ರಿನ್ಸ್ ರೈ (ಪಿಎಸ್), ಶ್ರೀ ಜಾವೇದ್ ಖಾನ್ (ಎಎಸ್‌ಒ), ಅಂಕುರ್ ಮಲಿಕ್(ಎಎಸ್‌ಒ), ಪ್ರದೀಪ್ ಕೌರ್ (ಎಸ್‌ಎಸ್‌ಒ), ಆಯುಷಿ ನಾಯಕ್(ಎಎಸ್‌ಒ) ಮತ್ತು ಮೊಹಮ್ಮದ್ ಅರ್ಷದ್ (ಜೆಎಸ್‌ಎ) ಎಂಬ 9 ಸದಸ್ಯರ ತಂಡವನ್ನು ನಿಯೋಜಿಸಲಾಗಿದೆ. ಅವರು ಮತದಾನ ಕೇಂದ್ರಗಳಿಗೆ ಭೇಟಿ ನೀಡಿದ್ದರು.

"ಭಾರತದ ವಿಶಿಷ್ಟ ದೂರಸ್ಥ ಮತಗಟ್ಟೆಗಳಿಗೆ ಭೇಟಿ ನೀಡುವುದು" ಎಂಬ ಈ ಉಪಕ್ರಮವು ಬೂತ್ ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡುವುದರೊಂದಿಗೆ ಸವಾಲಿನ ಭೌಗೋಳಿಕ ಪ್ರದೇಶಗಳಲ್ಲಿ ಪ್ರಜಾಪ್ರಭುತ್ವ ಭಾಗವಹಿಸುವಿಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದು ಅವರು ಹೇಳಿದರು.

ಈ ಸಂಘಟಿತ ಪ್ರಯತ್ನವು, ಭೌಗೋಳಿಕ ಸ್ಥಳವನ್ನು ಲೆಕ್ಕಿಸದೆ, ಎಲ್ಲಾ ನಾಗರಿಕರಿಗೂ ಸಮಗ್ರ ಮತ್ತು ಪ್ರವೇಶಿಸಬಹುದಾದ ಚುನಾವಣಾ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳುವ ಇಸಿಐನ ಬದ್ಧತೆಯನ್ನು ಒತ್ತಿಹೇಳುತ್ತದೆ ಎಂದು ವಿವರಿಸಿದರು.

ಕಾರುಗುಂದ ಮತ್ತು ಕುಂದಚೇರಿ ಹಾಗೂ ಕೋಪಟ್ಟಿ ಮತಗಟ್ಟೆಗಳಿಗೆ ಭೇಟಿ ನೀಡಿ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಇತರರು ಇದ್ದರು.

## ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ



ಅಮೀರ್



ಮುನಾವರ್

**ಮಡಿಕೇರಿ:** ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಮರಂದೋಡ ಗ್ರಾಮದಲ್ಲಿ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿದ್ದ ಅಸ್ಸಾಂ ಮೂಲದ ಇಬ್ಬರು ಆರೋಪಿಗಳನ್ನು ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ. 2 ಕೆ.ಜಿ 288 ಗ್ರಾಂ ಗಾಂಜಾ ಮಾದಕ ವಸ್ತುವನ್ನು ವಶಕ್ಕೆ ಪಡೆದಿರುವ ಪೊಲೀಸರು ಅಸ್ಸಾಂ ಧರೋಂಗ್ ಜಿಲ್ಲೆ ಮೂಲದ ಪ್ರಸ್ತುತ ಕಬ್ಬಿನ ಕಾಡು–ಮರಂದೋಡ ಗ್ರಾಮದ ನಿವಾಸಿ ಅಮೀರ್ ಹುಸೈನ್(34) ಮತ್ತು ಮುನಾವರ್ ಹುಸೈನ್(34) ಎಂಬವರುಗಳನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

## ನಾಪೋಕ್ಲು ಬಳಿ ಕಾಡಾನೆಗಳ ದಾಳಿ



ಮಡಿಕೇರಿ, ಸೆ.2– ನಾಪೋಕ್ಲು ಸಮೀಪದ ಪೇರೂರು ಗ್ರಾಮದ ತೋಟಗಳಿಗೆ ಕಾಡಾನೆಗಳ ಹಿಂಡು ದಾಳಿ ನಡೆಸಿದ್ದು, ಅಪಾರ ಪ್ರಮಾಣದ ಕೃಷಿ ಫಸಲನ್ನು ನಾಶ ಮಾಡಿರುವ ಬಗ್ಗೆ ವರದಿಯಾಗಿದೆ. ಬಲ್ಲಮಾವಟಿ ಗ್ರಾಮ ಪಂಚಾಯತಿ ಪೇರೂರು ಗ್ರಾಮದ ನಿವಾಸಿ ಬೊಟ್ಟೋಳಂಡ ರವಿ ಎಂಬುವರ ತೋಟಕ್ಕೆ ನುಗ್ಗಿದ ಕಾಡಾನೆಗಳು ಬಾಳೆ, ಕಾಫಿ, ತೆಂಗು, ಅಡಿಕೆ ಸಹಿತ ಹಣ್ಣಿನ ಗಿಡಗಳನ್ನು ತಿಂದು, ತುಳಿದು ನಷ್ಟಪಡಿಸಿವೆ.

ಪೇರೂರು ಗ್ರಾಮ ವ್ಯಾಪ್ತಿಯಲ್ಲಿ ನಿರಂತರವಾಗಿ ಕಾಡಾನೆ ಹಿಂಡು ದಾಳಿ ನಡೆಸುತ್ತಿದ್ದು ರೈತರು ಹಾಗೂ ಬೆಳೆಗಾರು ಕಂಗಾಲಾಗಿದ್ದಾರೆ. ಕಾಡಾನೆಗಳ ದಾಳಿಯಿಂದ ನಷ್ಟಕ್ಕೊಳಗಾದವರು ಅರಣ್ಯ ಇಲಾಖೆಯನ್ನು ಸಂಪರ್ಕಿಸಿ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದರು ಪರಿಹಾರ ಇದುವರೆಗೆ ಲಭಿಸಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ. ಸಂಕಷ್ಟಕ್ಕೊಳಗಾದ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಹಾಗೂ ಕಾಡಾನೆಗಳ ಹಾವಳಿ ನಿಯಂತ್ರಿಸುವಂತೆ ಬೊಟ್ಟೋಳಂಡ ರವಿ ಮತ್ತು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಸೀತವ್ವ ನಿಧನ



**ನಾಪೋಕ್ಲು:** ಇಲ್ಲಿನ ನಿವಾಸಿ ಅಜ್ಜೆಟ್ಟಿರ ದಿ ಕಾಳಪ್ಪ (ಪಾಪ) ಅವರ ಪತ್ನಿ ಸೀತವ್ವ(93) ಮಂಗಳವಾರ ಸ್ವರ್ಗಸ್ಥರಾದರು. ಮೃತರ ಅಂತ್ಯಕ್ರಿಯೆ ಬುಧವಾರ ಮೃತರ ಸ್ವಗೃಹದಲ್ಲಿ ಜರುಗಲಿದೆ. ಮೃತರು ಮೂರು ಗಂಡು, ಎರಡು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂದು ಭಾಂದವರನ್ನು ಅಗಲಿದ್ದಾರೆ.

# ಅಪರಾಧಗಳನ್ನು ಹತ್ತಿಕ್ಕುವ ಬದಲು ಎಸ್ಪಿ ಹಿಂದೂಗಳನ್ನು ಹತ್ತಿಕ್ಕಲು ಹೊರಟಿದ್ದಾರೆ

## ಬಿಜೆಪಿ ಮುಖಂಡ ನಿಜಗುಣರಾಜು ಆರೋಪ



ಸುದ್ದಿಗೋಷ್ಠಿಯಲ್ಲಿ ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು ಮಾತನಾಡಿದರು.

**ಕರ್ತವ್ಯ ಲೋಪದ ಆರೋಪ ಕಾರಣ, ಚಾ.ನಗರ ನಗರಸಭೆ ಪೌರಾಯುಕ್ತ ಎಸ್ ವಿ ರಾಮದಾಸ್ ಅವರನ್ನು ಜಿಲ್ಲಾಧಿಕಾರಿಯವರು ಕರ್ತವ್ಯದಿಂದ ಬಿಡುಗಡೆ ಮಾಡಿದ್ದಾರೆ. ಆದರೆ ಅವರನ್ನು ಮತ್ತೆ ಆ ಜಾಗಕ್ಕೆ ತರಲು ಶಾಸಕ ಸಿ. ಪುಟ್ಟರಂಗಶೆಟ್ಟಿಯವರು ಪ್ರಯತ್ನಿಸುತ್ತಿದ್ದಾರೆ. ರಾಮದಾಸ್ ಅವರು ಯಾವುದೇ ಕೆಲಸ ಮಾಡದೇ, ಅಕ್ರಮ ನಡೆಸಿ, ನಗರಸಭಾ ಅಧ್ಯಕ್ಷರೇ ಅವರ ವಿರುದ್ಧ ದೂರು ನೀಡಿದ್ದಾರೆ. ಇಂಥವರ ರಕ್ಷಣೆಗೆ ಶಾಸಕರು ನಿಲ್ಲಬಾರದು. ರಾಮದಾಸ್ ಮತ್ತೆ ಬಂದರೆ ಬಿಜೆಪಿ ಪ್ರತಿಭಟನೆ ಹಮ್ಮಿಕೊಳ್ಳುತ್ತದೆ –ನಿಜಗುಣರಾಜು**

**ಚಾಮರಾಜನಗರ:** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಅವರು ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದರೂ ಅದರ ವಿರುದ್ಧ ಕ್ರಮ ಕೈಗೊಳ್ಳದೇ ಹನುಮ ಜಯಂತಿ ಸಂದರ್ಭದಲ್ಲಿ ಪಟಾಕಿ ಹೊಡೆದ ಹಿಂದೂ ಕಾರ್ಯಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಖಂಡನೀಯ ಎಂದು ಕಾಡಾ ಮಾಜಿ ಅಧ್ಯಕ್ಷ, ಬಿಜೆಪಿ ಮುಖಂಡ ಜಿ. ನಿಜಗುಣರಾಜು ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಜನವರಿ 4 ರಂದು ನಗರದಲ್ಲಿ ನಡೆದ ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಸಂಭ್ರಮಕ್ಕೆ ಹಿಂದೂ ಕಾರ್ಯಕರ್ತರು ಪಟಾಕಿ ಹೊಡೆದಿದ್ದಾರೆ. ಕಳೆದ 8 ತಿಂಗಳಿಂದ ಸುಮ್ಮನಿದ್ದ ಎಸ್ಪಿಯವರು, ಈಗ ನನ್ನನ್ನೂ ಸೇರಿದಂತೆ 10 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಇದು ಹಿಂದೂ ಧಾರ್ಮಿಕ ಭಾವನೆಗಳನ್ನು ಹತ್ತಿಕ್ಕುವ ಕೆಲಸವಾಗಿದೆ ಎಂದು ಆರೋಪಿಸಿದರು.

ವಾಸ್ತವವಾಗಿ ಹಿಂದೂ–ಮುಸ್ಲಿಮರು ನಗರದಲ್ಲಿ ಭಾವೈಕ್ಯತೆಯಿಂದ ಇದ್ದಾರೆ. ಹನುಮ ಜಯಂತಿ ಮೆರವಣಿಗೆ ನಡೆದಾಗ ಮುಸ್ಲಿಮರು ಸಹ ಸೌಹಾರ್ದತೆಯಿಂದ ಅದಕ್ಕೆ ಸಹಕಾರ ನೀಡಿದ್ದಾರೆ. ಅವರು ಯಾವುದೇ ದೂರು ನೀಡಿಲ್ಲ ಆದರೆ ಪೊಲೀಸರು ಮಸೀದಿ ಮುಂದೆ ಪಟಾಕಿ ಹೊಡೆದರು, ಭಗವಾಧ್ವಜ ಹಾರಿಸಿದರು ಎಂದು ಮೊಕದ್ದಮೆ ದಾಖಲಿಸಿ ದ್ದಾರೆ ಎಂದರು.

ಪಟಾಕಿ ಹೊಡೆದಿದ್ದು ಕಾನೂನು ಬಾಹಿರ ಎನ್ನುವುದಾದರೆ, ಎಸ್ಪಿ ಕವಿತಾ ಅವರು ಬಂದ ಮೇಲೆ ನಗರದಲ್ಲಿ 11 ಇಸ್ಪೀಟ್ ಕ್ಲಬ್‌ಗಳು ಅಕ್ರಮವಾಗಿ ನಡೆಯುತ್ತಿವೆ. ಇದರ ವಿರುದ್ಧ ಕ್ರಮ ಜರುಗಿಸಿಲ್ಲ ಇದು ಕಾನೂನು ಬಾಹಿರವಲ್ಲವೇ? ನೆರೆಯ ಮೈಸೂರು ಜಿಲ್ಲೆಯಲ್ಲಿ ಸಿಎಂ ಸಿದ್ದರಾಮಯ್ಯ ಬಂದ ನಂತರ ಎಲ್ಲ ಇಸ್ಪೀಟ್ ಕ್ಲಬ್‌ಗಳನ್ನು ಮುಚ್ಚಿಸಿದ್ದಾರೆ. ಆದರೆ ಚಾಮರಾಜನಗರದಲ್ಲಿ ಮೂರು ಇದ್ದ ಕ್ಲಬ್‌ಗಳ ಸಂಖ್ಯೆ 11ಕ್ಕೇರಿದೆ. ಇದು ಗೊತ್ತಿದ್ದೂ ಎಸ್ಪಿಯವರು ಅವುಗಳ ವಿರುದ್ಧ ಕ್ರಮ ಕೈಗೊಳ್ಳದೇ ಇರುವುದಕ್ಕೆ ಕಾರಣವೇನು? ಎಂದು ಪ್ರಶ್ನಿಸಿದರು.

ನಗರದಲ್ಲಿ ಸರಣಿ ಕಳ್ಳತನಗಳು ನಡೆಯುತ್ತಿವೆ. ಅಕ್ರಮ ಎಂ ಸ್ಯಾಂಡ್ ಘಟಕಗಳು ತಲೆಎತ್ತಿವೆ. ಜಾನುವಾರುಗಳ ಕಳ್ಳಸಾಗಾಣಿಕೆ ನಡೆಯುತ್ತಿದೆ. ರಸಗೊಬ್ಬರ ಕಳ್ಳಸಾಗಣೆ ನಡೆಯುತ್ತಿದೆ. ಪೊಲೀಸರ ಮನೆಯಲ್ಲೇ ಕಳ್ಳತನ ನಡೆದಿದೆ. ಹಣ ದ್ವಿಗುಣ ಮಾಡುವ ಪ್ರಕರಣದಲ್ಲಿ ಪೊಲೀಸರೇ ಸಿಕ್ಕಿಬಿದ್ದು ತಲೆಮರೆಸಿಕೊಂಡಿದ್ದಾರೆ. ಇನ್ನೂ ಅವರನ್ನು ಬಂಧಿಸಿಲ್ಲ. ಇಂಥವಕ್ಕೆ ಗಮನ ಕೊಡದೇ ಎಸ್ಪಿ ಕವಿತಾ ಅವರು ನಮ್ಮಂಥವರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಸರಿಯಲ್ಲ ಎಂದು ಟೀಕಿಸಿದರು.

ಮಧುಕರಶೆಟ್ಟಿ, ಚರಣ್ ರೆಡ್ಡಿ, ಕುಲದೀಪ್‌ಕುಮಾರ್ ಜೈನ್ ರಂಥ ಪ್ರಾಮಾಣಿಕ ಅಧಿಕಾರಿಗಳು ಕೆಲಸ ನಿರ್ವಹಿಸಿದಂಥ ಜಾಗಕ್ಕೆ ಕವಿತಾ ಬಂದಿದ್ದಾರೆ. ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳ ಹೆಚ್ಚಳವಾಗುತ್ತಿದ್ದರೂ ಸ್ಥಳೀಯ ಜನಪ್ರತಿನಿಧಿಗಳು ಮೌನವಾಗಿದ್ದಾರೆ ಎಂದು ನಿಜಗುಣರಾಜು ಹೇಳಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೃಷಭೇಂದ್ರಪ್ಪ, ನಗರಸಭಾ ಸದಸ್ಯ ಮನೋಜ್‌ಪಟೇಲ್, ಎಸ್‌ಸಿ ಮೋರ್ಚಾ ವಿಶ್ವನಾಥ್, ಮುಖಂಡರಾದ ನಟರಾಜು, ಸೂರ್ಯಕುಮಾರ್, ಹನುಮ ಜಯಂತಿ ಸಮಿತಿ ಅಧ್ಯಕ್ಷ ಪೃಥ್ವಿರಾಜ್, ಮಧು ಉಪಸ್ಥಿತರಿದ್ದರು.

## ಭ್ರಷ್ಟ ಅಧಿಕಾರಿಗಳ ವರ್ಗಾವಣೆಗೆ ಆಗ್ರಹಿಸಿ ಪ್ರತಿಭಟನೆ



**ಚಾಮರಾಜನಗರ:** ಜಿಲ್ಲೆಯಲ್ಲಿ ಇರುವ ಸರ್ಕಾರಿ ಭ್ರಷ್ಟ ಅಧಿಕಾರಿಗಳನ್ನು ಜಿಲ್ಲೆಯಿಂದ ತೊಲಗಿಸಿ ಎಂದು ಕನ್ನಡ ಪರ ಸಂಘಟನೆಗಳು ಭುವನೇಶ್ವರಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಕನ್ನಡ ಹೋರಾಟಗಾರ ನಮ್ಮನೇ ಪ್ರಶಾತ್ ಮಾತನಾಡಿ ಜಿಲ್ಲೆಯಲ್ಲಿ ಭ್ರಷ್ಟ ಅಧಿಕಾರಿಗಳು ಇದ್ದು ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇಂತಹ ಅಧಿಕಾರಿಗಳನ್ನು ಸರ್ಕಾರದ ಸೇವೆಗಳಿಂದ ವಜಾಗೊಳಿಸಬೇಕು. ಹಾಗೂ ಅವರ ಸೇವಾ ಅವಧಿಯಲ್ಲಿ ನಡೆದಿರುವ ಅಕ್ರಮಗಳನ್ನು ಸಮಗ್ರ ತನಿಖೆ ನಡೆಸಬೇಕೆಂದು ಎಂದು ಒತ್ತಾಯಿಸಿದರು.

ಹೋರಾಟಗಾರ ಸುರೇಶ್ ವಾಜಪೇಯಿ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ ಭ್ರಷ್ಟ ಅಧಿಕಾರಿಗಳ ಹಾವಳಿ ಹೆಚ್ಚಾಗಿದೆ. ಸರ್ಕಾರವು ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೂ. ರಾಜಕಾರಣಿಗಳಿಗೆ ಹಣ ಕೊಟ್ಟು ಮತ್ತೆ ಅದೇ ಸ್ಥಾನಕ್ಕೆ ಬರುವುದು ವಾಡಿಕೆಯಾಗಿದೆ. ಇಂತಹ ಅಧಿಕಾರಿಗಳು ಮತ್ತೆ ಜಿಲ್ಲೆಗೆ ಬಂದರೆ. ಚಾಮರಾಜನಗರ ಬಂದ್‌ಗೆ ಕರೆ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಭ್ರಷ್ಟ ಅಧಿಕಾರಿ ಪೌರಯುಕ್ತ ರಾಮದಾಸ್ ಭಾವಚಿತ್ರ ಹರಿದು ಪ್ರತಿಭಟನೆ ಮಾಡಿದರು. ಪ್ರತಿಭಟನೆಯಲ್ಲಿ ಚಾ.ಗು.ನಾಗರಾಜು, ಮಾತನಾಡಿದರು.

# ಕೆ.ಎನ್.ರಾಜಣ್ಣ ವಜಾ ಖಂಡಿಸಿ ಚಾ.ನಗರದಲ್ಲಿ ಪ್ರತಿಭಟನೆ

## ರಾಜಣ್ಣ ಅವರನ್ನು ಸಚಿವ ಸಂಪುಟಕ್ಕೆ ಮರುಸೇರ್ಪಡೆ ಮಾಡದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ : ಎಂ.ರಾಮಚಂದ್ರ ಎಚ್ಚರಿಕೆ



ರಾಜಣ್ಣ ವಜಾ ಖಂಡಿಸಿ ಮುಖಂಡರು ಚಾಮರಾಜನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

**ಚಾಮರಾಜನಗರ:** ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿರುವುದನ್ನು ಖಂಡಿಸಿ ಹಾಗೂ ಅವರನ್ನು ಸಂಪುಟಕ್ಕೆ ಮರುಸೇರ್ಪಡೆ ಮಾಡುವಂತೆ ಒತ್ತಾಯಿಸಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಎಂ.ರಾಮಚಂದ್ರ, ಹಾಗೂ ಚಾಮರಾಜನಗರ ನಾಯಕ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನದವರಗೆ ಮೆರವಣಿಗೆ ತೆರಳಿ, ಕೆಲಹೊತ್ತು ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಜವರೇಗೌಡ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಸಹಕಾರ ಸಚಿವರಾದ ರಾಜಣ್ಣ ಅವರು ಯಾವುದೇ ರೀತಿಯ ಭ್ರಷ್ಟಾಚಾರವಾಗಲಿ, ಯಾವುದೇ ಪಕ್ಷ ವಿರೋಧಿ ಚಟುವಟಿಕೆಗಳನ್ನು ಮಾಡದೆ, ಇದ್ದುದನ್ನು ನೇರವಾಗಿ ಮಾತನಾಡುವ ಸ್ವಾಭಾವ ಅವರದ್ದಾಗಿದೆ. ಅವರಿಗೆ ಸರ್ಕಾರ ಯಾವುದೇ ಕಾರಣ ನೀಡದೆ ವಜಾಗೊಳಿಸಿರುವುದು. ನಾಯಕ ಸಮುದಾಯಕ್ಕೆ ಮಾಡಿರುವ ಅನ್ಯಾಯವಾಗಿದೆ. ರಾಜ್ಯದ ಪ್ರತಿ ಜಿಲ್ಲೆಯಲ್ಲೂ ರಾಜಣ್ಣ ಅವರನ್ನು ಬೆಂಬಲಿಸಿ ಪ್ರತಿಭಟನೆಗಳು ನಡೆಯುತ್ತಿವೆ. ಈಗಾಗಲೇ ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗಿದೆ. ರಾಜಣ್ಣ ಅವರಿಗೆ ಶಕ್ತಿ ತುಂಬುವ ಕೆಲಸವನ್ನು ಸಮುದಾಯ ಮಾಡುತ್ತಿದೆ ಎಂದರು.

ಇಲ್ಲಿ ಯಾವುದೇ ಪಕ್ಷವನ್ನು ಗುರಿಯಾಗಿಟ್ಟುಕೊಂಡು ಪ್ರತಿಭಟನೆ ಮಾಡುತ್ತಿಲ್ಲ. ಯಾವುದೇ ಸರ್ಕಾರ ಇರಬಹುದು ಸಮಾಜಕ್ಕೆ ಅನ್ಯಾಯವಾದಾಗ ಖಂಡಿಸುವುದು ನಮ್ಮ ಸಮುದಾಯದ, ಸಂಘದ ಕರ್ತವ್ಯವಾಗಿದೆ. ಎಸ್‌ಸಿ, ಎಸ್‌ಟಿಗಳು ಸಹಕಾರ ಕ್ಷೇತ್ರಕ್ಕೆ ಬರಬಾರದೆ ಸಹಕಾರ ಕ್ಷೇತ್ರದಲ್ಲಿ ದಲಿತ ಸಮುದಾಯದ ಪರ ರಾಜಣ್ಣ ಕಾನೂನು ತಂದದ್ದು ತಪ್ಪಾಯಿತೇ? ಇಂದು ಪ್ರತಿಭಟನೆ ಸಾಂಕೇತಿಕವಾಗಿದೆ. ರಾಜಣ್ಣ ಅವರಿಗೆ ಶಕ್ತಿ ತುಂಬಲು ಈ ಪ್ರತಿಭಟನೆ ಮಾಡುವ ಮೂಲಕ ರಾಜಣ್ಣ ಹಿಂದೆ ಸಮುದಾಯ ಇದೆ ಎಂಬುದನ್ನು ತೋರಿಸಲಾಗುತ್ತದೆ. ಸಮುದಾಯ ಸಚಿವರಿಗೆ, ಅಧಿಕಾರಿಗಳಿಗಾಗಿ ನೀವು ತೊಂದರೆ ಕೊಡುವುದಾದರೆ ನಾಯಕ ಸಮಾಜ ತಕ್ಕ ಬುದ್ಧಿ ಕಲಿಸುತ್ತದೆ ಎಂದರು.

ಸರ್ಕಾರದಲ್ಲಿ ಕೆ.ರಾಜಣ್ಣ ಅವರನ್ನು ಮತ್ತೆ ಸಚಿವರನ್ನಾಗಿ ಮಾಡಬೇಕು. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಮುದಾಯ ಸಚಿವರನ್ನು ನೇಮಕ ಮಾಡಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸಮುದಾಯದ ವತಿಯಿಂದ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ನಾಯಕ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ ಮಾತನಾಡಿ, ನಿರಂತರವಾಗಿ ನಾಯಕ ಸಮುದಾಯದ ರಾಜಕೀಯ ಮುಖಂಡರುಗಳನ್ನು ತುಳಿಯುವ ಪ್ರಯತ್ನವನ್ನು ಎಲ್ಲಾ ಪಕ್ಷಗಳು ಮಾಡಿಕೊಂಡು ಬಂದಿವೆ. ಶ್ರೀರಾಮುಲು ಅವರಿಂದ ಹಿಡಿದು ರಾಜಣ್ಣವರೆಗೂ, ಅಧಿಕಾರಿಗಳಲ್ಲಿ ದಯಾನಂದ ಅವರಿಂದ ರವಿಚನ್ನಣ್ಣವರೆಗೆ ಸ್ಥಳೀಯ ಅಧಿಕಾರಿಗಳನ್ನು ನಿರಂತರ ಶೋಷಣೆ ಮಾಡುತ್ತಿದ್ದಾರೆ. ಸತ್ಯವನ್ನು ಮಾತನಾಡುವುದು ಈ ಸಮುದಾಯಕ್ಕೆ ರಕ್ತಗತವಾಗಿ ಬಂದಿರುವ ರೂಢಿಯಾಗಿದೆ. ರಾಜಣ್ಣ ಸತ್ಯವನ್ನು ಮಾತನಾಡಿದರೆ. ನಾಗೇಂದ್ರನ್ನು ಬಲಿಪಶು ಮಾಡಿದ್ದೀರಿ ಎಂದು ಆರೋಪಿಸಿದರು.

ಸರ್ಕಾರ ನಡೆಸುವವರಿಗೆ ಎಸ್‌ಸಿ. ಎಸ್‌ಟಿ ಜನರ ಮತ ಮಾತ್ರ ಬೇಕಾಗಿವೆ. ಅಧಿಕಾರ ಮಾತ್ರ ಬೇರೆಯವರಿಗೆ ಬೇಕಾಗಿದೆ. ಇಂಥ ಪರಿಸ್ಥಿತಿ ರಾಜ್ಯದಲ್ಲಿ ನಡೆಯುತ್ತಿದೆ. ಸಿದ್ದರಾಮಯ್ಯ ಹಿಂದುಳಿದ ಮತ್ತು ಸಮಾಜವಾದಿ ನಾಯಕನೆಂದು ಹೆಸರು ಪಡೆದಿದ್ದಾರೆ. ಅವರ ಬೆಂಬಲಕ್ಕೆ ನಿಲ್ಲುವ ದಲಿತ ನಾಯಕರನ್ನು ಷಡ್ಯಂತ್ರ ಮಾಡಿ ಮಟ್ಟಹಾಕುವ ಪರಿಸ್ಥಿತಿ ಆಗುತ್ತಿದೆ. ರಾಜಣ್ಣ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಹದೇವನಾಯಕ ಬಿ.ಕಾಂ, ಉದ್ದೂರು ಮಹಾದೇವಸ್ವಾಮಿ ದ್ಯಾವಪ್ಪನಾಯಕ, ಜಯಸುಂದರ್, ಕೆಂಪನಾಯಕ ಮಾತನಾಡಿದರು. ನಗರಸಭಾ ಅಧ್ಯಕ್ಷ ಸುರೇಶ್, ಸದಸ್ಯ ಶಿವರಾಜ್, ಸಂಘದ ಪ್ರಧಾನ ಕಾರ್ಯದರ್ಶಿ ಆರ್.ರಾಚಪ್ಪ, ಉಪಾಧ್ಯಕ್ಷ ಎನ್.ಮಲ್ಲೇಶ್, ಆಲಗೂಡು ನಾಗರಾಜು, ಕಪನಿನಾಯ ಬುಲೆಟ್ ಚಂದ್ರನಾಯಕ, ಶಿವುವಿರಾಟ್, ಸಾಗಡೆ ನಂಜುಂಡನಾಯಕ, ಹೊಮ್ಮ ರಾಮನಾಯಕ, ಮಹೇಂದ್ರ, ಮಣಿಕಂಠ ನಾಯಕ, ಪರಶಿವನಾಯಕ ಕಟ್ಟೆಮನೆ, ಗಡಿಮನೆ ಹಾಗೂ ಜಿಲ್ಲೆಯ ಗ್ರಾಮಗಳ ಯಜಮಾನರು, ಕುಲಸ್ಥರು ಭಾಗವಹಿಸಿದ್ದರು.



ಬದನಗುಪ್ಪೆಯಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಯಿತು.

## ಬದನಗುಪ್ಪೆಯಲ್ಲಿ ನೂತನ ಬಸ್ ನಿಲ್ದಾಣಕ್ಕೆ ಗುದ್ದಲಿಪೂಜೆ

**ಚಾಮರಾಜನಗರ:** ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ನೂತನ ಬಸ್ ನಿಲ್ದಾಣ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಬದನಗುಪ್ಪೆ ಗ್ರಾಪಂ ಹಾಗೂ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಮಂಜುಶ್ರೀ ಟೆಕ್ನೊಪ್ಯಾಕ್ ಲಿಮಿಟೆಡ್ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೇಲಾಜಿಪುರ ಮಠದ ಅಧ್ಯಕ್ಷರಾದ ಮಹಾದೇವಸ್ವಾಮೀಜಿ ಅವರು ಪೂಜೆ ನೆರವೇರಿಸಿದರು. ಬಳಿಕ ಮಂಜುಶ್ರೀ ಟೆಕ್ನೊಪ್ಯಾಕ್ ಲಿಮಿಟೆಡ್ ಸಿಇಒ ಉಮೇಶ್ ಅವರು ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷೆ ರಾಜಮ್ಮ, ತಾಪಂ ಮಾಜಿ ಅಧ್ಯಕ್ಷ ಜಿ.ಬಸವಣ್ಣ, ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯ ಜಿ.ನಂಜುಂಡಸ್ವಾಮಿ, ಗ್ರಾ.ಪಂ ಮಾಜಿ ಅಧ್ಯಕ್ಷ ಎಂ.ಕುಮಾರ್, ಮುಕುಂದ ಮೂರ್ತಿ, ಮುಖಂಡರಾದ ಬಸವರಾಜಪ್ಪ, ಮಹದೇವಪ್ಪ, ಶಿವರಾಂ ನಾಯಕ, ಬದನಗುಪ್ಪೆ ಗ್ರಾಮಸ್ಥರು ಹಾಜರಿದ್ದರು.

## ದುಗ್ಗಹಟ್ಟಿ ಗ್ರಾಮದಲ್ಲಿ ಗಣಪತಿ ಮೂರ್ತಿ ವಿಸರ್ಜನೆ

**ಯಳಂದೂರು:** ತಾಲೂಕಿನ ದುಗ್ಗಹಟ್ಟಿ ಗ್ರಾಮದ ಉಪ್ಪಾರ ಬಡಾವಣೆಯಲ್ಲಿ ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಲಾಗಿದ್ದ 6ನೇ ವರ್ಷದ ಗೌರಿ–ಗಣೇಶನ ಮೂರ್ತಿಯನ್ನು ಭಾನುವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಬಹಳ ಅದ್ದೂರಿಯಾಗಿ ವಿಸರ್ಜನೋತ್ಸವ ನಡೆಯಿತು. ಗಣೇಶನ ಮೂರ್ತಿಯನ್ನು, ಗೌರಿ ಗಣೇಶನ ಹಬ್ಬದ ದಿನ ಪ್ರತಿಷ್ಠಾಪನೆ ಮಾಡಿ ಪ್ರತಿ ದಿನ ವಿಶೇಷ ಪೂಜೆ, ಮಂಗಳಾರತಿ, ಪಂಚಾಮೃತ ಅಭಿಷೇಕ, ಪ್ರಸಾದ ವಿನಿಯೋಗ ನಡೆಸಲಾಯಿತು, ತೆರದ ವಾಹನದಲ್ಲಿ ಗಣೇಶನ ಮೂರ್ತಿಯನ್ನು, ಮೆರವಣಿಗೆ ಮೂಲಕ ಕೊಂಡೊಯ್ದು ವಿಸರ್ಜಿಸಲಾಯಿತು.



## ರಾಷ್ಟ್ರಪತಿ ದ್ರೌಪದಿ ಮುರ್ಮು ಬೀಳ್ಕೊಟ್ಟ ರಾಜ್ಯಪಾಲ, ಸಿಎಂ ಸಿದ್ದರಾಮಯ್ಯ



ಮೈಸೂರು ವಿಮಾನ ನಿಲ್ದಾಣದಲ್ಲಿ ಮಂಗಳವಾರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ಅಧಿಕಾರಿಗಳು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಬೀಳ್ಕೊಟ್ಟರು.

ಮೈಸೂರು,ಸೆ.2(ಬಿಎಲ್‌ಯು)– ಎರಡು ದಿನಗಳ ಮೈಸೂರು ಪ್ರವಾಸ ಮುಗಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಚೆನ್ನೈಗೆ ಪ್ರಯಾಣಿಸಿದರು.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವ ಸಮಾರಂಭದಲ್ಲಿ ನಿನ್ನೆ ಪಾಲ್ಗೊಂಡ ನಂತರ ಅವರು ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು.

ಮೈಸೂರು ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಅವರ ಆಹ್ವಾನದ ಮೇರೆಗೆ ಇಂದು ಬೆಳಿಗ್ಗೆ ಮೈಸೂರು ಅರಮನೆಗೆ ಭೇಟಿ ನೀಡಿ ಬೆಳಗಿನ ಉಪಾಹಾರದ ಆತಿಥ್ಯ ಸ್ವೀಕರಿಸಿದರು.

ತರುವಾಯ ಬೆಳಿಗ್ಗೆ 11 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ಚೆನ್ನೈಗೆ ಪ್ರಯಾಣ ಬೆಳೆಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ರಾಷ್ಟ್ರಪತಿಗಳಿಗೆ ಹೃದಯ ಸ್ಪರ್ಶಿ ಬೀಳ್ಕೊಟ್ಟರು.

**ಸಿಎಂ ಬೆಂಗಳೂರಿಗೆ:** ಇದೇ ವೇಳೆ ಮೂರು ದಿನಗಳ ಮೈಸೂರು ಪ್ರವಾಸ ಮುಗಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಇಂದು ಬೆಂಗಳೂರಿಗೆ ತೆರಳಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಬೀಳ್ಕೊಟ್ಟ ಬಳಿಕ ಅವರು, 11.30 ಗಂಟೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

## ಆಟೋಟ ವಿಜೇತರಿಗೆ ಬಹುಮಾನ




ಮೈಸೂರು ಗೌರಿಶಂಕರನಗರದ ವಕ್ರತುಂಡ ಗೆಳೆಯರ ಬಳಗದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಗೌರಿ-ಗಣೇಶ ಮೂರ್ತಿಯನ್ನು ಸೋಮವಾರ ವಿಸರ್ಜನೆ ಮಾಡಲಾಯಿತು. ಇದಕ್ಕೂ ಮುನ್ನ ಮಹಿಳೆಯರು ಮತ್ತು ಮಕ್ಕಳಿಗೆ ಆಯೋಜಿಸಿದ್ದ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಬಹುಮಾನ ವಿತರಿಸಿ, ಪೂಜಾ ಕಾರ್ಯಕ್ಕೆ ವೈಯಕ್ತಿಕ ದೇಣಿಗೆ ನೀಡಿದರು. ಈ ವೇಳೆ ಪ್ರಜ್ವಲ್, ಪ್ರವೀಣ್, ಕಾಮಗೆರೆ ಮಹದೇವಪ್ಪ ಚಾಂದಿನಿ, ಅನನ್ಯ, ಸೌಭಾಗ್ಯ, ಶ್ರೇಯಸ್, ಭಾಗ್ಯ, ನಿತಿನ್, ಮಹೇಶ್, ವಿಜಯ್, ಸ್ನೇಕ್ ಲೋಕೇಶ್, ನಾಗಣ್ಣ, ಚನ್ನಾಜಿ ಮತ್ತಿತರರಿದ್ದರು.

## ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಹೊಸ ಮೌಲ್ಯಮಾಪನಕ್ಕೆ ಸುಪ್ರೀಂಕೋರ್ಟ್ ಆದೇಶ



ದೇವರಾಜ ಮಾರುಕಟ್ಟೆ



ಲ್ಯಾನ್ಸ್‌ಡೌನ್ ಕಟ್ಟಡ

ಮೈಸೂರು, ಸೆ.2– ಮೈಸೂರಿನ ಪಾರಂಪರಿಕ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳ ಸಂಬಂಧ ಹೊಸ ಮೌಲ್ಯಮಾಪನಕ್ಕೆ ಸುಪ್ರೀಂಕೋರ್ಟ್ ಆದೇಶಿಸಿದ್ದು, ಈ ಜವಾಬ್ದಾರಿಯನ್ನು ಉತ್ತರಾಖಂಡದ ಐಐಟಿ ರೂರ್ಕಿಗೆ ವಹಿಸಿದೆ.

ಈ ಪಾರಂಪರಿಕ ಕಟ್ಟಡಗಳ ಮೌಲ್ಯಮಾಪನ ನಡೆಸಿ ವಿವರವಾದ ವರದಿ ಸಲ್ಲಿಸುವಂತೆ ಐಐಟಿ ರೂರ್ಕಿಗೆ ನಿರ್ದೇಶನ ನೀಡಿದೆ. ಅಲ್ಲದೆ ಮೌಲ್ಯಮಾಪನ ಕೈಗೊಳ್ಳಲು ಮೈಸೂರು ನಗರ ಪಾಲಿಕೆಯು ಐಐಟಿ ರೂರ್ಕಿಗೆ 5 ಲಕ್ಷ ರೂ. ಠೇವಣಿ ಇಡುವಂತೆ ನಿರ್ದೇಶಿಸಿ, ವಿಚಾರಣೆಯನ್ನು ಸೆ.18ಕ್ಕೆ ಮುಂದೂಡಿದೆ.

ಕರ್ನಾಟಕ ಹೈಕೋರ್ಟ್ 2023ರ ಆಗಸ್ಟ್ 8 ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾದ ವಿಶೇಷ ಮೇಲ್ಮನವಿ ಸಂಬಂಧ ತಜ್ಞರ ಅಭಿಪ್ರಾಯವನ್ನು ಆಧರಿಸಿ ನ್ಯಾಯಾಲಯವು ರಿಟ್ ವ್ಯಾಪ್ತಿಯಲ್ಲಿ ಮೇಲ್ಮನವಿ ಸಂಸ್ಥೆಯಾಗಿ ನಿರ್ಧರಿಸಲು ಸಾಧ್ಯವಿಲ್ಲ ಎಂದು ಇಂದು(ಸೆ.2) ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಮತ್ತು ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರ ಪೀಠ ಅಭಿಪ್ರಾಯಪಟ್ಟಿದೆ.

ಸುಪ್ರೀಂಕೋರ್ಟ್‌ನಿಂದ ಪಾರ್ಟಿ ಮಾಡಿದ್ದ ಬೆಂಗಳೂರಿನ ಇಂಟಾಕ್ (INTACH) ಸಂಸ್ಥೆ ಸಲ್ಲಿಸಿರುವ ವಿವರವಾದ ವರದಿಯಲ್ಲಿ ಪಾರಂಪರಿಕ ಕಟ್ಟಡದ ಪುನರ್‌ಸ್ಥಾಪನೆ ಮತ್ತು ಸಂರಕ್ಷಣೆ ಅವಕಾಶದ ಬಗ್ಗೆ ತಿಳಿಸಲಾಗಿದೆ. ಆದರೆ ರಾಜ್ಯದ ಪರ ವಕೀಲರು ಖಾಸಗಿ ಸಂಸ್ಥೆ ಮೌಲ್ಯಮಾಪನ ನಡೆಸಿ ಸಲ್ಲಿಸಿರುವ ವರದಿ ಬಗ್ಗೆ ಆಕ್ಷೇಪಿಸಿದ ಹಿನ್ನೆಲೆಯಲ್ಲಿ ಹೊಸ ಮೌಲ್ಯಮಾಪನಕ್ಕೆ ಕೋರ್ಟ್ ಐಐಟಿ ರೂರ್ಕಿಗೆ ವಹಿಸಿದೆ.

ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ನಿರ್ಣಯದಂತೆ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮಗೊಳಿಸಿ, ಹೊಸದಾಗಿ ಪುನರ್ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿತ್ತು. ಜೀವನೋಪಾಯ ಕಳೆದುಕೊಳ್ಳುವ ಭಯದಲ್ಲಿರುವ ದೇವರಾಜ ಮಾರುಕಟ್ಟೆ ವ್ಯಾಪಾರಿಗಳು ಕಟ್ಟಡ ನೆಲಸಮಗೊಳಿಸುವುದನ್ನು ವಿರೋಧಿಸಿದ್ದಲ್ಲದೆ ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸುತ್ತಿರುವ ಸುಪ್ರೀಂಕೋರ್ಟ್, ಎರಡೂ ಕಟ್ಟಡಗಳ ಸಂರಕ್ಷಣೆ ವಿಚಾರವಾಗಿ ಭಾರತೀಯ ಪುರಾತತ್ವ ಸಮೀಕ್ಷೆ ಮತ್ತು ಭಾರತೀಯ ರಾಷ್ಟ್ರೀಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆ ಟ್ರಸ್ಟ್(ಇಂಟಾಕ್)ನಿಂದ ಮೂರನೇ ವ್ಯಕ್ತಿಯ ವರದಿ ಕೇಳಿತ್ತು. ಅದರಂತೆ ಇಂಟಾಕ್ ಸದಸ್ಯರು ಮಾದರಿ ಸಂಗ್ರಹಿಸಿದ್ದರು.

## ಸಿಪೆಟ್‌ನಲ್ಲಿ ಓಣಂ ಆಚರಣೆ



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕೇಂದ್ರ ಸರ್ಕಾರದ ಅಧೀನ ಸಂಸ್ಥೆ ಸಿಪೆಟ್‌ನಲ್ಲಿ ಮಂಗಳವಾರ ಸಿಬ್ಬಂದಿ ವರ್ಗ ಓಣಂ ಆಚರಿಸಿದರು.

### ದೇಶದ ರಕ್ಷಣೆ ಸಂಬಂಧ ಮೋದಿಯವರ ಸರ್ಕಾರ ಕಳೆದ 11 ವರ್ಷಗಳಲ್ಲಿ

# ವೀರ ಸಾವರ್ಕರ್ ನೀತಿ ನಿರೂಪಣೆ ಅಳವಡಿಸಿಕೊಂಡ ಕಾರಣಕ್ಕೆ ಆಪರೇಷನ್ ಸಿಂಧೂರ್ ಯಶಸ್ವಿಯಾಯ್ತು

### ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅಭಿಮತ


ಮೈಸೂರು,ಸೆ.2(ಪಿಎಂ)–ದೇಶದ ರಕ್ಷಣೆ ಸಂಬಂಧ ಅಂದು ವೀರ ಸಾವರ್ಕರ್ ಅವರು ಹಾಕಿಕೊಟ್ಟಂತಹ ನೀತಿ ನಿರೂಪಣೆಯನ್ನು ಪ್ರಧಾನಿ ನರೇಂದ್ರ ಮೋದಿಯವರ ಕೇಂದ್ರ ಸರ್ಕಾರವು ಕಳೆದ 11 ವರ್ಷಗಳಲ್ಲಿ ಅಳವಡಿಸಿಕೊಂಡ ಕಾರಣ ಆಪರೇಷನ್ ಸಿಂಧೂರ್ ಸಫಲತೆ ಕಾಣುವಂತಾಯಿತು ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ವಿಚಾರಗೋಷ್ಠಿಯಲ್ಲಿ 'ಸಾವರ್ಕರ್ ಕಲ್ಪನೆಯ ಭಾರತೀಯ ಸೇನೆ ಮತ್ತು ಆಪರೇಷನ್ ಸಿಂಧೂರ್' ಕುರಿತು ಅವರು ಮುಖ್ಯ ಭಾಷಣ ಮಾಡಿದರು.

ಸಾವರ್ಕರ್ ಅವರ ಅಭಿಯಾನದ ಕಾರಣಕ್ಕೆ ಹಿಂದೂ ಯುವಕರು ಭಾರತದ ಸೇನೆಗೆ ಸೇರ್ಪಡೆಯಾದರು. ಅವರ ಪ್ರೇರೇಪಣೆ ಕಾರಣದಿಂದ ಆದಂತಹ ಮರಾಠ ರೆಜಿಮೆಂಟ್, ಜಾಟ ರೆಜಿಮೆಂಟ್, ರಜಪೂತ್ ರೆಜಿಮೆಂಟ್ ಇವೆಲ್ಲವೂ ಇಂದಿಗೂ ಕೂಡ ನಮ್ಮ ಸೈನ್ಯದಲ್ಲಿ ಮುಂದುವರೆಯುತ್ತಿವೆ. ಅಂತಹ ಸಾವರ್ಕರ್ ಅವರನ್ನು ಕಾಂಗ್ರೆಸ್‌ನವರು ಟೀಕೆ ಮಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಬ್ರಿಟಿಷರೊಂದಿಗೆ ಸಾವರ್ಕರ್ ಅವರು ಕೈಜೋಡಿಸದೇ ಇದ್ದರೂ ಬ್ರಿಟಿಷರ ಏಜೆಂಟ್ ಎಂದು ಕಾಂಗ್ರೆಸ್‌ನವರು ಅಪಪ್ರಚಾರ ಮಾಡಿದರು. ಸಾವರ್ಕರ್ ಅವರು ಎರಡನೇ ಮಹಾಯುದ್ಧ ಉಪಯೋಗಿಸಿಕೊಂಡು ಹಿಂದು ಯುವಕರನ್ನು ಸೈನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. 1950ರಲ್ಲಿ ಭಾರತ ಗಣರಾಜ್ಯ ಆದಾಗ, ಗಡಿಗಳು ಇನ್ನು ಸುರಕ್ಷಿತವಾಗಿಲ್ಲ ಎಂದು ಅಂದಿನ ಸರ್ಕಾರಕ್ಕೆ ಪತ್ರ ಬರೆದು ಎಚ್ಚರಿಸಿದ್ದರು.

ಗಣರಾಜ್ಯವಾದ ಭಾರತದ ಮೊಟ್ಟ ಮೊದಲ ಕರ್ತವ್ಯ ತನ್ನ ಆರ್ಮಿ, ನೇವಿ ಮತ್ತು ಏರ್ ಫೋರ್ಸ್ ಅನ್ನು ಸಶಕ್ತಗೊಳಿಸಿ ನಮ್ಮ ಗಡಿಗಳನ್ನು ಸುರಕ್ಷಿತವಾಗಿ ಕಾಯ್ದುಕೊಳ್ಳುವಂತೆ ಸಾವರ್ಕರ್ ಸಲಹೆ ನೀಡಿದ್ದರು. ಈ ಸಂಬಂಧ 1959ರಲ್ಲಿ ನೆಹರು ಅವರಿಗೂ ಪತ್ರ ಬರೆದು, ಸೈನ್ಯಕ್ಕೆ ಇರಬೇಕಾದ ತೀಕ್ಷ್ಣತೆ ಸಾಲದು ಎಂದು ತಿಳಿಸಿದ್ದರು. ಸ್ವಾತಂತ್ರ್ಯದ ಬಳಿಕ ದೊಡ್ಡ ಪ್ರಮಾಣದಲ್ಲಿ ಯುವಕರು ಭಾರತದ ಸೇನೆಯಲ್ಲಿ ಉಳಿದುಕೊಳ್ಳಲು ಸಾವರ್ಕರ್ ಅವರ ಪ್ರೇರೇಪಣೆ ಕಾರಣವಾಯಿತು. ಇಂದು ದೇಶ ಅತ್ಯಂತ ದೊಡ್ಡ ಕೃತಜ್ಞತೆಯಲ್ಲಿ ಸಾವರ್ಕರ್ ಅವರನ್ನು ಸ್ಮರಣೆ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.



ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಸಾವರ್ಕರ್ ಕಲ್ಪನೆಯ ಭಾರತೀಯ ಸೇನೆ ಮತ್ತು ಆಪರೇಷನ್ ಸಿಂಧೂರ್' ಕುರಿತ ವಿಚಾರಗೋಷ್ಠಿಯಲ್ಲಿ ವೀರ ಸಾವರ್ಕರ್ ಹಾಗೂ ತಾಯಿ ಭಾರತಾಂಬೆ ಫೋಟೋಗಳಿಗೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಸಾವರ್ಕರ್ ಅವರ ಸಲಹೆಗಳ ಕಾರಣಕ್ಕೆ ಅಂದು ದೇಶದ ಸೇನೆ ಸಶಕ್ತಗೊಂಡಿತು. ಇಲ್ಲವಾಗಿದ್ದರೆ ಶ್ರೀನಗರ, ಹೈದರಾಬಾದ್ ಪ್ರಾಂತ್ಯಗಳು ನಮ್ಮ ದೇಶದ ಭಾಗವಾಗುತ್ತಿರಲಿಲ್ಲ. ದೇಶದ ಪ್ರೌಢಶಾಲಾ ಮತ್ತು ಕಾಲೇಜು ಮಕ್ಕಳಿಗೆ ಒಂದು ಅಥವಾ ಎರಡು ವರ್ಷದ ಮಿಲ್ಟ್ರಿ ತರಬೇತಿ ನೀಡಬೇಕೆಂದು ಸಾವರ್ಕರ್ ಅಂದೇ ಹೇಳಿದ್ದಾರೆ ಎಂದರು.

ಏ.22ರಂದು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ದಾಳಿ ನಡೆಯಿತು ಎಂದು ಹೇಳುವವರಿದ್ದಾರೆ. ಆದರೆ ಅಲ್ಲಿ 500 ಜನ ಪ್ರವಾಸಿಗರಿದ್ದರೂ ಕೇವಲ 22 ಮಂದಿಯನ್ನು ಏಕೆ ಕೊಲ್ಲಲಾಯಿತು? ಧರ್ಮ ಯಾವುದು? ಎಂದು ಕೇಳಿ ಹಿಂದುಗಳನ್ನು ಹತ್ಯೆ ಮಾಡಲಾಯಿತು. ಹತ್ಯೆಗೊಳಗಾದವರ ಕುಟುಂಬದ ಹೆಣ್ಣು ಮಕ್ಕಳೇ ಅದನ್ನು ಹೇಳಿದ್ದಾರೆಯೇ ಹೊರತು ಮೋದಿ ಸರ್ಕಾರವಾಗಲೀ, ಬಿಜೆಪಿಯವರಾಗಲೀ ಹೇಳಿದ್ದಲ್ಲ ಎಂದು ತಿಳಿಸಿದರು.

ಪಹಲ್ಗಾಮ್‌ನಲ್ಲಿ ಹಿಂದೂಗಳನ್ನೇ ಗುರಿಯಾಗಿಸಿ ಹತ್ಯೆ ಮಾಡಲಾಗಿದೆ. ಈ ಸತ್ಯ ಹೇಳಲು ಧೈರ್ಯಬೇಕು. ಅಂತಹ ಧೈರ್ಯ ಕಾಂಗ್ರೆಸ್‌ಗೆ ಅಂದೂ ಇರಲಿಲ್ಲ, ಇಂದೂ ಇಲ್ಲ. ಇದು ಸತ್ಯವಷ್ಟೇ ಇದರಲ್ಲೇನು ಕೋಮುವಾದವಿದೆ. ಪಹಲ್ಗಾಮ್‌ನಲ್ಲಿ ಹತ್ಯಾಕಾಂಡ ನಡೆಸಿದ ಮೂವರು ಭಯೋತ್ಪಾದಕರನ್ನು ಶ್ರೀನಗರ ಬಳಿ ನಮ್ಮ ಸೈನಿಕರು ಕಾರ್ಯಾಚರಣೆ ನಡೆಸಿ ಹತ್ಯೆ ಮಾಡುವಲ್ಲಿ ಯಶಸ್ವಿಯಾದರು. ಪಹಲ್ಗಾಮ್‌ನಲ್ಲಿ ಅನ್ಯಧರ್ಮದ ಸಾಕಷ್ಟು ವ್ಯಾಪಾರಿಗಳು ಇದ್ದರು. ಅವರಲ್ಲಿ ಯಾರನ್ನು ಏಕೆ ಹತ್ಯೆ ಮಾಡಿಲ್ಲ? ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ದೇಶದ ಜನತೆಯ ಅಪೇಕ್ಷೆಯಂತೆ ಕೇಂದ್ರ ಸರ್ಕಾರ ಹಾಗೂ ನಮ್ಮ ಸೇನೆ ನಿಶ್ಚಯದೊಂದಿಗೆ ದಿಟ್ಟವಾಗಿ ಮೇ 7ರಂದು ಪ್ರತೀಕಾರ ಆರಂಭಿಸಿ, ಆಪರೇಷನ್ ಸಿಂಧೂರ್ ಯಶಸ್ವಿಗೊಳಿಸಿತು. ಕಳೆದ 11 ವರ್ಷಗಳಲ್ಲಿ ನಮ್ಮ ದೇಶದ ಸೈನ್ಯ, ಗೂಢಚಾರ್ಯ ಸೇರಿದಂತೆ ರಕ್ಷಣಾ ವ್ಯವಸ್ಥೆಯಲ್ಲಿ ಉನ್ನತ ಬದಲಾವಣೆಯಾಗಿದೆ. ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ನಮ್ಮ ದೇಶದ ವಾಯುಪಡೆ ನಮ್ಮ ಗಡಿಯನ್ನೇ ದಾಟದೇ ಪಾಕಿಸ್ತಾನದ ಭಯೋತ್ಪಾದನಾ ನೆಲೆಗಳ ಮೇಲೆ ನಿಖರವಾಗಿ ದಾಳಿ ನಡೆಸುವಲ್ಲಿ ಯಶಸ್ವಿಯಾಗಿದೆ ಎಂದರು.

ಇದಕ್ಕೂ ಮುನ್ನ ಸುಪ್ರೀಮ್ ಕಾನ್ವೆಂಟ್ ಶಾಲೆ ಮಕ್ಕಳು ವೀರ ಸಾವರ್ಕರ್ ಕುರಿತ ಕಿರುನಾಟಕ ಪ್ರದರ್ಶಿಸಿದರು. ರಾಷ್ಟ್ರೋತ್ಥಾನ ಶಾಲಾ ಮಕ್ಕಳು ವಾದ್ಯ ಸಂಗೀತ ನಡೆಸಿಕೊಟ್ಟರು. ಆದಿತ್ಯ ಅಧಿಕಾರಿ ಆಸ್ಪತ್ರೆ ವೈದ್ಯ ಡಾ.ಚಂದ್ರಶೇಖರ್, ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಎಸ್.ಯಶಸ್ವಿನಿ ವೇದಿಕೆಯಲ್ಲಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಇಡೀ ಸಭಾಂಗಣ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿತ್ತು.

## ಸಾವರ್ಕರ್ ಬಗೆಗಿನ ಟೀಕೆಗೆ ಬಿ.ಎಲ್.ಸಂತೋಷ್ ಕಿಡಿ

ಮೈಸೂರು,ಸೆ.2(ಪಿಎಂ)– ಲಂಗು ಲಗಾಮು ಇಲ್ಲದ ಕಾಂಗ್ರೆಸ್‌ನ ನಾಲಿಗೆಗಳು ಸಾವರ್ಕರ್ ಅವರನ್ನು ದೇಶದ್ರೋಹಿ ಎಂದು ಟೀಕಿಸುತ್ತವೆ ಎಂದು ಬಿ.ಎಲ್.ಸಂತೋಷ್ ಕಿಡಿಕಾರಿದರು.

ಬಚ್ಚಲ ಬಾಯಿಗಳು ಎಂದು ಕನ್ನಡದಲ್ಲಿ ಒಂದು ಶಬ್ದ ಇದೆ. ಆ ರೀತಿಯಲ್ಲಿ ಮೂವರು ಮಂತ್ರಿಗಳು ಸಾವರ್ಕರ್ ಅವರ ವಿಚಾರದಲ್ಲಿ ವರ್ತಿಸುತ್ತಾರೆ. ಅವರ ಹೆಸರು ಕೂಡ ನಿಮ್ಮಂತಹ ಪುಣ್ಯಾತ್ಮರ ಮುಂದೆ ಹೇಳುವುದು ಸರಿಯಲ್ಲ. ಮೊದಲು ಇಬ್ಬರು ಇದ್ದರು. ಈಗ ಮತ್ತೊಬ್ಬರು ಸೇರಿಕೊಂಡಿದ್ದಾರೆ. ಅನೇಕ ಸಾರಿ ಅವರಿಗೆ ನೇತೃತ್ವವನ್ನು ಮುಖ್ಯಮಂತ್ರಿಗಳು ವಹಿಸುತ್ತಾರೆ. ಅವರು ಸಾವರ್ಕರ್ ಅವರನ್ನು ದಿನ ಬೆಳಗಾದರೆ ಟೀಕಿಸುತ್ತಾರೆ ಎಂದು ಕಿಡಿಕಾರಿದರು.

ಸಾವರ್ಕರ್ ಹೆಸರನ್ನು ಒಂದು ಮೇಲ್ಸೇತುವೆಗೆ ನಾಮಕರಣ ಮಾಡಬೇಕೆಂದರೆ ಅದಕ್ಕೂ ವಿರೋಧ. ಸಣ್ಣ ಹಳ್ಳಿಗಳಿಗೆ ಹೋದರೂ ಅಲ್ಲಿ ಇಂದಿರಾ ಗಾಂಧಿನಗರ, ರಾಜೀವ್‌ಗಾಂಧಿನಗರ ಎಂದಿವೆ ಎಂದು ಬೇಸರ ವ್ಯಕ್ತಪಡಿಸಿದರು. ಸಿಎಂ ಸಿದ್ದರಾಮಯ್ಯ ವಿರೋಧ ಭಕ್ತಿಯಿಂದ ಸಾವರ್ಕರ್ ಹೆಚ್ಚು ಜನರಿಗೆ ತಲುಪುತ್ತಿದ್ದಾರೆ. ಬಿಜೆಪಿಯ ನಾಯಿ ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿಲ್ಲವೆಂದು ಖರ್ಗೆಯವರು ಹೇಳುತ್ತಾರೆ. ನಾವೆಲ್ಲಿ ಹೇಳಿದ್ದೆವು ನಮ್ಮ ಮನೆ ನಾಯಿ ಪಾಲ್ಗೊಂಡಿತ್ತು ಎಂದು. ನಾನು ಹುಟ್ಟಿದ್ದು ಸ್ವಾತಂತ್ರ್ಯ ಬಂದ ಬಳಿಕ. ನಾನು ಹೇಗೆ ಪಾಲ್ಗೊಳ್ಳಲು ಸಾಧ್ಯ? ಎಂದು ಪ್ರಶ್ನಿಸಿದರು.

ದಿನ ಬೆಳಗಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಾರೆ, ಬಿಜೆಪಿಯವರೇನು ಸ್ವಾತಂತ್ರ್ಯ ಹೋರಾಟಗಾರರಾ ಎಂದು. ಆದರೆ ಬಿಜೆಪಿ (ಭಾರತೀಯ ಜನಸಂಘ) ಆರಂಭವಾಗಿದ್ದೇ 1951ರಲ್ಲಿ. ನಾವು ಹೇಗೆ ಪಾಲ್ಗೊಳ್ಳಲು ಸಾಧ್ಯ. ಶ್ಯಾಮ್ ಪ್ರಸಾದ್ ಮುಖರ್ಜಿಯವರು ಕಾಂಗ್ರೆಸ್‌ನಲ್ಲೇ ಇದ್ದರು. ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಹಣೇಬರಹ ನೋಡಲಾಗದೇ ಭಾರತೀಯ ಜನಸಂಘ ಆರಂಭ ಮಾಡಿದರು. ಭಾರತೀಯ ಜನತಾ ಪಾರ್ಟಿ ಆರಂಭವಾಗಿದ್ದೇ 1980ರಲ್ಲಿ. ನಾವು ಹೇಗೆ ಸ್ವಾತಂತ್ರ್ಯ ಹೋರಾಟ ಮಾಡಲು ಸಾಧ್ಯ ಆದರೆ ನಮ್ಮ ಹಿರಿಯರು ಪಾಲ್ಗೊಂಡಿದ್ದರು ಎಂದರು.

ಯುದ್ಧ ತಯಾರಿ ಸಂದರ್ಭದಲ್ಲಿ ಸಾಕ್ಷಿ ಕೊಡಬೇಕೆಂದು ತಯಾರಿ ಮಾಡಬೇಕಾಗುತ್ತದೆ. ಏಕೆಂದರೆ ಸಾಕ್ಷಿ ಕೇಳುವ ಅನೇಕ ನಾಚಿಕೆಗೇಡಿನ ಶಕ್ತಿಗಳು ನಮ್ಮ ದೇಶದಲ್ಲಿವೆ. ಅಂತಹವರಿಗೆ ಬಾಯಿ ಮುಚ್ಚಿಸುವಂತೆ ಸೇನೆಯು ಸಾಕ್ಷಿಗಳನ್ನು ನೀಡಿತು ಎಂದು ಹೇಳಿದರು.

## ಸೆ.16ಕ್ಕೆ ಕಲಾಮಂದಿರದಲ್ಲಿ 'ಪೌರಕಾರ್ಮಿಕರ ದಿನಾಚರಣೆ'



ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ–3ರ ಸಭಾಂಗಣದಲ್ಲಿ 'ಪೌರ ಕಾರ್ಮಿಕರ ದಿನ'ದ ಪೋಸ್ಟರ್ ಬಿಡುಗಡೆ ಮಾಡಲಾಯಿತು

ಮೈಸೂರು, ಸೆ.2– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸೆ.16ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ 'ಪೌರಕಾರ್ಮಿಕರ ದಿನ' ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಪ್ರತಿವರ್ಷ ಸೆ.23ರಂದು 'ಪೌರಕಾರ್ಮಿಕರ ದಿನ' ಆಯೋಜಿಸಲಾಗುತ್ತಿತ್ತು. ಆದರೆ ಈ ಬಾರಿ ಸೆ.22ರಿಂದ ದಸರಾ ಮಹೋತ್ಸವ ಆರಂಭವಾಗಲಿರುವ ಕಾರಣ ವಾರದ ಮುಂಚೆಯೇ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಉತ್ತಮ ಸೇವೆ ಸಲ್ಲಿಸಿದ ಪೌರಕಾರ್ಮಿಕರನ್ನು ಸನ್ಮಾನಿಸಲಾಗುವುದು. ಇದೇ ವೇಳೆ ಪೌರಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರು ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ. ಮೈಸೂರನ್ನು ಭಾರತದ ಅತ್ಯಂತ ಸ್ವಚ್ಛ ನಗರಗಳಲ್ಲಿ ಒಂದಾಗಿಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿರುವ ಪೌರಕಾರ್ಮಿಕರಿಗೆ ಭೋಜನ ಕೂಟವನ್ನೂ ನಡೆಸಲಾಗುವುದು.

ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಮಂಗಳವಾರ 'ಪೌರಕಾರ್ಮಿಕರ ದಿನ'ದ ಪೋಸ್ಟರ್ ಬಿಡುಗಡೆ ಮಾಡಿ, ಪೌರಕಾರ್ಮಿಕರು ನಗರದ ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯದ ಬೆನ್ನೆಲುಬೆಂದು ಬಣ್ಣಿಸಿ, ಈ ಕಾರ್ಯಕ್ರಮವು ನಿಮ್ಮ ಅಮೂಲ್ಯ ಸೇವೆಗೆ ಸಮಾಜದ ವತಿಯಿಂದ ಕೃತಜ್ಞತೆ ಸಲ್ಲಿಸುವ ಸಂಕೇತವಾಗಿದೆ ಎಂದರು. ಈ ವೇಳೆ ಪಾಲಿಕೆ ಉಪ ಆಯುಕ್ತರು, ಮುಖ್ಯ ಆರೋಗ್ಯಾಧಿಕಾರಿಗಳು ಹಾಗೂ ಇನ್ನಿತರ ಅಧಿಕಾರಿಗಳಿದ್ದರು.

### ಸೆ.10ಕ್ಕೆ ಕ್ರೀಡಾ ಸಂಭ್ರಮ

**ಪೌರಕಾರ್ಮಿಕರ ದಿನದ ಭಾಗವಾಗಿ ಸೆ.10ರಂದು ಮೈಸೂರು ವಿವಿ ಪೆವಿಲಿಯನ್ ಮೈದಾನದಲ್ಲಿ ಕ್ರಿಕೆಟ್, ಥ್ರೋಬಾಲ್, ವಾಲಿಬಾಲ್, ಅಥ್ಲೆಟಿಕ್ಸ್ ಸೇರಿದಂತೆ ವಿವಿಧ ಕ್ರೀಡೆ ಹಾಗೂ ಮೋಜಿನ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಪೌರಕಾರ್ಮಿಕರಲ್ಲಿ ಆರೋಗ್ಯ ಕಾಳಜಿ ಜೊತೆಗೆ ಸೌಹಾರ್ದತೆ ಹಾಗೂ ತಂಡದ ಮನೋಭಾವವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕ್ರೀಡಾ ಸಂಭ್ರಮ ನಡೆಸಲಾಗುತ್ತಿದೆ ಎಂದು ನಗರ ಪಾಲಿಕೆ ಪ್ರಕಟಣೆ ತಿಳಿಸಿದೆ.**

## ಕುಡಿದ ನಶೆಯಲ್ಲಿ ಚಾಕು ಇರಿತ

ಮೈಸೂರು, ಸೆ.2(ಬಿಎಲ್‌ಯು)– ಮದ್ಯಪಾನ ಮಾಡಿದ್ದ ಸಮಯದಲ್ಲಿ ಮಾತಿನ ಚಕಮಕಿ ನಡೆದು, ನಾಲ್ವರು ಸೇರಿ ಯುವಕನಿಗೆ ಚಾಕುವಿನಿಂದ ಇರಿದಿರುವ ಘಟನೆ ಮೈಸೂರಿನ ಮಹದೇವಪುರದಲ್ಲಿ ಸಂಭವಿಸಿದೆ. ಮಹದೇವಪುರದ ವಾಸಿ ರವಿ ಎಂಬಾತ ಗಾಯಗೊಂಡಿದ್ದು, ಕೆ.ಆರ್.ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಗಾಯಗೊಂಡಿರುವ ರವಿ ಹಾಗೂ ಇವನ ಸ್ನೇಹಿತರಾದ ಪ್ರಶಾಂತ್, ನಾಗ, ಸುದೀಪ್, ಕಿರಣ್ ನಡುವೆ ಮಹದೇವಪುರ ರೈಲ್ವೆ ಬ್ರಿಡ್ಜ್ ಬಳಿ ಮಾತಿನ ಚಕಮಕಿ ನಡೆದಿದೆ. ಎಲ್ಲರೂ ಪಾನಮತ್ತರಾಗಿದ್ದ ವೇಳೆ ಎಲ್ಲರ ವರ್ತನೆ ಅತಿರೇಕಕ್ಕೆ ಹೋಗಿ ಕೈಕೈ ಮಿಲಾಯಿಸುವ ಹಂತ ತಲುಪಿದೆ. ಈ ವೇಳೆ ರವಿಗೆ ಸ್ನೇಹಿತರಾದ ಪ್ರಶಾಂತ್, ನಾಗ, ಸುದೀಪ್, ಕಿರಣ್ ಚಾಕುವಿನಿಂದ ಇರಿದಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ವಿದ್ಯಾರಣ್ಯಪುರಂ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ಈಗ ನಾಲ್ವರು ಜೈಲು ಸೇರಿದ್ದಾರೆ.

## ಪೈ.ಬಸವಯ್ಯನವರ ಚಿಕ್ಕಗರಡಿಯಲ್ಲಿ ಮಟ್ಟಿ ಪೂಜೆ...



ಮೈಸೂರಿನ ಜಯನಗರದ 2ನೇ ಮುಖ್ಯರಸ್ತೆಯ 3ನೇ ಕ್ರಾಸ್‌ನಲ್ಲಿರುವ ಶ್ರೀ ಪೈಲ್ವಾನ್ ಬಸವಯ್ಯನವರ ಚಿಕ್ಕಗರಡಿಯಲ್ಲಿ ಇತ್ತೀಚೆಗೆ ಮಟ್ಟಿ ಪೂಜಾ ಕಾರ್ಯಕ್ರಮ ನೆರವೇರಿಸಲಾಯಿತು. ಮುಖಂಡರಾದ ಚಿನ್ನಪ್ಪ, ಬೋರಪ್ಪ, ಕೆಂಪ, ರವಿ, ದಿಲೀಪ, ಶಂಭು, ಚಂದ್ರ, ಗಿರಿ, ಕುಮಾರ, ಆನಂದ, ಗೋಪಿ ಮತ್ತಿತರರು ಹಾಜರಿದ್ದರು.

# ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್ ಘೋಷಣೆ



'ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್'ನ 66ನೇ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಹಿರಿಯ ಸದಸ್ಯರನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.2– ಮೈಸೂರಿನ ಜಗನ್ಮೋಹನ ಅರಮನೆ ರಸ್ತೆಯ 'ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್'ನ ಸದಸ್ಯರಿಗೆ ಶೇ.25ರಷ್ಟು ಲಾಭಾಂಶ (ಡಿವಿಡೆಂಡ್)ವನ್ನು ಘೋಷಿಸಲಾಗಿದೆ.

ಜೆ.ಪಿ.ನಗರದ ಶಿವಣ್ಣ ಬಸಂತ್ ಕನ್ವೆನ್ಷನ್ ಸೆಂಟರ್‌ನಲ್ಲಿ ಭಾನುವಾರ ನಡೆದ 66ನೇ ಸರ್ವ ಸದಸ್ಯರ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕ್ ಅಧ್ಯಕ್ಷ ಸಿ.ವಿ.ಸೋಮಶೇಖರ್, ಡಿವಿಡೆಂಡ್ ಪ್ರಮಾಣ ಘೋಷಿಸಿದರು.

ಉತ್ತಮ ಸೇವೆ ಹಾಗೂ ಸದಸ್ಯರ ಸಹಕಾರದ ಫಲವಾಗಿ 2024–25ನೇ ಸಾಲಿನಲ್ಲಿ ನಮ್ಮ ಬ್ಯಾಂಕ್ ಆರೂವರೆ (6.50) ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಇದರಲ್ಲಿ ಶೇ.25ರಷ್ಟನ್ನು ಸದಸ್ಯರಿಗೆ ಡಿವಿಡೆಂಟ್ ನೀಡಲಾಗುವುದು. 91.55 ಕೋಟಿ ರೂ. ಬ್ಯಾಂಕ್‌ನ ಸ್ವಂತ ಬಂಡ ವಾಳವಾಗಿದ್ದು, 446.74 ಕೋಟಿ ಠೇವಣಿ ಹೊಂದಿದೆ. ಕಳೆದ ಮಾ.31ರವರೆಗೆ 339.53 ಕೋಟಿ ರೂ. ಸಾಲ ನೀಡಲಾಗಿದೆ. ಅನುತ್ಪಾದಕ (ಎನ್‌ಪಿಎ) ನಿವ್ವಳ ಶೂನ್ಯವಾಗಿದ್ದು, ದುಡಿಯುವ ಬಂಡವಾಳ 566.19 ಕೋಟಿ. ರೂ. ಆಗಿದೆ ಎಂದು ವಿವರಿಸಿದರು.

**ತುಸು ಬಡ್ಡಿ ಇಳಿಕೆ:** ಆಧಾರ ಸಾಲ, ಆಸ್ತಿ ಮೇಲಿನ ಸಾಲ(ಎಲ್‌ಎಪಿ) ಮತ್ತು ವಾಹನ ಸಾಲದ ಮೇಲಿನ ಬಡ್ಡಿ ದರವನ್ನು ವಾರ್ಷಿಕ ಶೇ.0.5ರಷ್ಟು ಕಡಿಮೆಗೊಳಿಸಲಾಗಿದೆ ಎಂದು ಇದೇ ವೇಳೆ ಸಭೆಗೆ ತಿಳಿಸಿದರು.

**ಹಿರಿಯರಿಗೆ ಅಭಿನಂದನೆ:** ಸಭೆಯಲ್ಲಿ ಬ್ಯಾಂಕ್‌ನ ಹಿರಿಯ ಸದಸ್ಯರಾದ ಬಿ.ಸಿ. ರಾಮಕೃಷ್ಣ, ಅನಿಲ್ ಕೊಠಾರಿ, ಆರ್. ಸತ್ಯನಾರಾಯಣ, ಬಿ.ರಮೇಶ್, ಕೆ.ವಿ. ಮಂಜುನಾಥರಾವ್, ಎಲ್.ಜಯರಾಮ್, ಮಹದೇವಪ್ಪ, ಎಂ.ಕೃಷ್ಣೇಗೌಡ, ಬಿ.ಎಂ. ಯಶೋಧ, ಹೆಚ್.ಶಂಕರ್, ಎಂ.ಎಸ್.ಗಂಗಾಧರ್, ನಾಗರತ್ನ, ಎಂ.ಹೆಚ್.ಶಂಕರಪ್ಪ ಮತ್ತು ಪಿ.ಶಿವಾನಂದ ಅವರಿಗೆ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಲಾಯಿತು.

ಬ್ಯಾಂಕ್‌ನ ಉಪಾಧ್ಯಕ್ಷ ಎಂ.ಎನ್. ಮಹೇಶ್, ನಿರ್ದೇಶಕರಾದ ಆರ್. ಆನಂದ್, ಬಿ.ಆರ್.ನಂದೀಶ್, ಬಿ. ಕೋದಂಡ ರಾಮ, ಶ್ರೀಮತಿ ಎನ್.ಸುಧಾ, ಎ.ಪ್ರಭು ಪ್ರಸಾದ್, ಕೆ.ಪ್ರೇಮಕುಮಾರ್, ಎನ್. ಕಣ್ಣನ್, ಸಿ.ಎಸ್.ಗಂಗಾಂಬಿಕೆ, ಆರ್.ಪಿ.ಕೃಷ್ಣಮೂರ್ತಿ, ಎನ್.ರಾಘವ, ಎಸ್.ರಾಚಪ್ಪಾಜಿ, ಶ್ರೀಮತಿ ಎಂ.ಆರ್. ವಿಜಯಲಕ್ಷ್ಮೀ, ಶ್ರೀಮತಿ ಎಸ್.ಅನುರಾಧ, ಪ್ರಭಾರ ಪ್ರಧಾನ ವ್ಯವಸ್ಥಾಪಕ ಬಿ.ಪಿ.ಶಿವಕುಮಾರ್, ಸಿಬ್ಬಂದಿ ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

# 10 ಕೋಟಿ ಕಾಮಗಾರಿಗೆ ಗುದ್ದಲಿ ಪೂಜೆ



ಬೆಟ್ಟದತುಂಗ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.


ಬೆಟ್ಟದಪುರ, ಸೆ.2– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಹುಟ್ಟೂರು ಬೆಟ್ಟದತುಂಗ ಸೇರಿದಂತೆ ಪಿರಿಯಾಪಟ್ಟಣ ತಾಲೂಕಿನ ವಿವಿಧ ಗ್ರಾಮಗಳಲ್ಲಿ 10 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಪಿರಿಯಾಪಟ್ಟಣ ತಾಲೂಕಿನ ಮಲದೂರು, ಮೂಡ್ಲುಕೊಪ್ಪಲು, ವಡ್ಡರಹಳ್ಳಿ, ಬೆಟ್ಟದತುಂಗ, ಬೆಟ್ಟದ ತುಂಗ ಕೆಳಗಲಕೊಪ್ಪಲು, ಚಿಕ್ಕಮಳಲಿ, ಗೊರಹಳ್ಳಿ, ಹಡಗನಹಳ್ಳಿ, ಕೌಲನಹಳ್ಳಿ ಹಾಗೂ ಹರಿನಹಳ್ಳಿ ಗ್ರಾಮಗಳಲ್ಲಿ 10 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ನೂರಾರು ಕೋಟಿ ಅನುದಾನ ತಂದು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಮುಂದಿನ 3 ವರ್ಷಗಳ ನನ್ನ ಅಧಿಕಾರಾವಧಿಯಲ್ಲಿ ತಾಲೂಕಿನ ಮತ್ತಷ್ಟು ಅಭಿವೃದ್ಧಿಗೆ ಶ್ರಮಿಸುತ್ತೇನೆ. ಅಲ್ಲದೆ ತಾಲೂಕಿನಲ್ಲಿ ಚುನಾಯಿತರಾದ ಶಾಸಕರ ಪೈಕಿ ಹೆಚ್ಚಿನ ಕೆಲಸ ಮಾಡಿದ ಹೆಮ್ಮೆ ನನಗಿದೆ. ಎಲ್ಲಾ ಗ್ರಾಮಗಳಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ನಾಮಫಲಕಗಳಲ್ಲಿ ನನ್ನ ಹೆಸರಿದ್ದು, ಮಾಜಿ ಸಚಿವ ದಿ.ಹೆಚ್.ಎನ್.ಚನ್ನಬಸಪ್ಪನವರ ಅವಧಿಯ ಕೆಲಸಗಳಿಗಿಂತಲೂ ನಾನು ಹೆಚ್ಚು ಕೆಲಸಗಳನ್ನು ಮಾಡಿರುವುದಾಗಿ ಸಚಿವರು ತಿಳಿಸಿದರು.

ಇದೇ ವೇಳೆ ಹರಿನಹಳ್ಳಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಕಾಮಗಾರಿ ನಿರ್ಮಾಣಕ್ಕೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು. ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮದ್ ಜಾನ್ ಬಾಬು, ಪಿರಿಯಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮೇಗೌಡ, ಹಲಗನಹಳ್ಳಿ ಗ್ರಾಪಂ ಅಧ್ಯಕ್ಷೆ ವೀಣಾ ವೆಂಕಟೇಶ್, ಅತ್ತಿಗೋಡು ಗ್ರಾಪಂ ಅಧ್ಯಕ್ಷ ರಾಜೇಗೌಡ, ಅತ್ತಿಗೋಡು ಫಣೀಶ್, ಚಿಕ್ಕಮಳಲಿ ಚಂದ್ರಹಾಸ್, ತಾಪಂ ಮಾಜಿ ಸದಸ್ಯ ಸುರ್ನಿಲ್ಲ ಶಂಕರೇಗೌಡ, ಹಲಗನಹಳ್ಳಿ ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಜಾವೀದ್, ಸುಹೇಲ್ ಪಾಷಾ, ತಾಲೂಕು ಕೃಷಿಕರ ಸಮಾಜದ ಅಧ್ಯಕ್ಷ ಶಫಿವುಲ್ಲಾ ಖಾನ್, ಸರ್ದಾರ್ ಪಾಷಾ, ಬೆಟ್ಟದತುಂಗ ಗ್ರಾಮದ ಚಿಕ್ಕೇಗೌಡ, ಕೃಷ್ಣೇಗೌಡ, ಮಲ್ಲಿಕಾರ್ಜುನ್, ರಾಮೇಗೌಡ, ಹೇಮಾವತಿ, ಶೇಖರ್, ವಿಎಸ್‌ಎಸ್‌ಎನ್ ಸಹಕಾರ ಸಂಘದ ಅಧ್ಯಕ್ಷ ಅರವಿಂದ್ ರಾಜ್ ಅರಸ್, ತಹಸೀಲ್ದಾರ್ ನಿಸರ್ಗಪ್ರಿಯ, ಇಓ ಸುನೀಲ್ ಕುಮಾರ್, ತಾಲೂಕು ಲೋಕೋಪಯೋಗಿ ಇಲಾಖೆಯ ದಿನೇಶ್, ಕುಮಾರ್, ಜಿಪಂ ಇಲಾಖೆಯ ಮಲ್ಲಿಕಾರ್ಜುನ್, ವಿದ್ಯುತ್ ಇಲಾಖೆಯ ಲಕ್ಷ್ಮೀಶ್, ಪ್ರಶಾಂತ್, ಹರಿನಹಳ್ಳಿ ಗ್ರಾಮದ ಜೈಕುಮಾರ್, ಬಸವರಾಜ್, ರಮೇಶ್, ವೆಂಕಟೇಶ್ ಸೇರಿದಂತೆ ಇತರರಿದ್ದರು.

# ಕೇಂದ್ರ ಸಚಿವ ಹೆಚ್‌ಡಿಕೆ ಭೇಟಿ ಮಾಡಿದ ನರೆಡ್ಕೊ ತಂಡ

## ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ, ಪೆರಿಫೆರಲ್ ರಿಂಗ್ ರಸ್ತೆ ತ್ವರಿತ ಅಭಿವೃದ್ಧಿಗೆ ಕ್ರಮದ ಭರವಸೆ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ತಿನರಸೀಪುರ, ಸೆ.2– ಮೈಸೂರಿನ ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ, ಮೈಸೂರು ಪೆರಿಫೆರಲ್ ರಿಂಗ್ ರೋಡ್ ಮತ್ತು ಬೆಂಗಳೂರಲ್ಲಿ 2ನೇ ವಿಮಾನ ನಿಲ್ದಾಣಕ್ಕೆ ಬೇಕಾದ ಜಮೀನನ್ನು ರಾಜ್ಯ ಸರ್ಕಾರ ಒದಗಿಸಿದರೆ ಸಮರೋಪಾದಿಯಲ್ಲಿ ಕೆಲಸ ಮಾಡಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದ್ದಾರೆ.

ನರೆಡ್ಕೊ ಮೈಸೂರು ಅಧ್ಯಕ್ಷ ಆದಿಶೇಷನ್‌ಗೌಡರ ನೇತೃತ್ವದಲ್ಲಿ ತಂಡದ ಸದಸ್ಯರಾದ ದಿವ್ಯೇಶ್, ಕಾರ್ಯಪ್ಪ ಸಂದೀಶ್, ಆಕಾಶ್ ಚಂದ್ರು, ಉಮಾಶಂಕರ್, ಅಜಯ್ ಚಂದ್ರಶೇಖರ್, ಶೇಖರ್ ಅವರುಗಳ ನಿಯೋಗವು ದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿತು. ಮೈಸೂರು ನಗರದ ಪೆರಿಫೆರಲ್ ರಿಂಗ್ ರಸ್ತೆ, ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ, ಮೈಸೂರು ಮಂಡ್ಯದಲ್ಲಿ ಬೃಹತ್ ಕೈಗಾರಿಕೆಗಳ ಪಾರ್ಕ್ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಸಲ್ಲಿಸಿದ ಮನವಿ ಸ್ವೀಕರಿಸಿದ ಕುಮಾರಸ್ವಾಮಿಯವರು ಇದಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರ ಒದಗಿಸಿದರೆ ತಾವು ಕೇಂದ್ರ ಸರ್ಕಾರದ ಜೊತೆ ಮಾತನಾಡಿ ತ್ವರಿತಗತಿಯಲ್ಲಿ ಕೆಲಸ ಪ್ರಾರಂಭಿಸುವೆ ಎಂದರು.

ಅಲ್ಲದೆ ಮಂಡ್ಯದ ಬಳಿ ರೇರ್ ಮ್ಯಾಗ್ನೆಟ್ ತಯಾರಿಕಾ ಕಾರ್ಖಾನೆ ಸ್ಥಾಪಿಸಲು ಕ್ರಮ ಕೈಗೊಳ್ಳುವೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಜೊತೆ ಚರ್ಚಿಸಿ 60 ಸಾವಿರ ಕೋಟಿ ರೂ. ವೆಚ್ಚದಲ್ಲಿ ಹೆದ್ದಾರಿ ಅಭಿವೃದ್ಧಿ ಬಗ್ಗೆ ಯೋಜನೆ ತಯಾರಿಸಿರುವೆ ಎಂದ ಅವರು 6 ತಿಂಗಳ ಕಾಲಾವಕಾಶ ನೀಡಿ. ನೀವು ನನ್ನ ಮುಂದಿಟ್ಟಿರುವ ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತೇನೆ ಎಂದರು. ಇದೇ ವೇಳೆ ತಮ್ಮ ಆರೋಗ್ಯ ಕುರಿತು ಮಾತನಾಡಿದ ಅವರು ನನ್ನ ಆರೋಗ್ಯ ಈಗ ಸುಧಾರಿಸುತ್ತಿದೆ. ವೈದ್ಯರ ಸಲಹೆ ಮೇರೆಗೆ ಕಾರ್ಯ ನಿರ್ವಹಿಸುತ್ತೇನೆ ಎಂದ ಕುಮಾರಸ್ವಾಮಿ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಸದಾ ನಿಮ್ಮೊಂದಿಗಿರುವೆ ಎಂದರು.

# ಗುಣಮಟ್ಟದ ಹಾಲಿನೊಂದಿಗೆ ಸಂಘದ ಅಭಿವೃದ್ಧಿಗೆ ಶ್ರಮಿಸಿ



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಕೆ.ವಿ.ಸೀತಾರಾಂ ಮಾತನಾಡಿದರು.

ಸರಗೂರು, ಸೆ.2– ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಂಘದ ಸಹಾಯಕ ಕೆ.ವಿ.ಸೀತಾರಾಂ ತಿಳಿಸಿದರು.

ತಾಲೂಕಿನ ಕಿತ್ತೂರು ತೆರಣಿಮುಂಟಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಹಕಾರ ಸಂಘದಲ್ಲಿ 144 ಮಂದಿ ಷೇರುದಾರರಿದ್ದು, ನಿತ್ಯ 260 ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸಂಘ ನಿವ್ವಳ ಲಾಭದತ್ತ ಸಾಗಿದೆ ಎಂದರು.

ಹಾಲು ಉತ್ಪಾದಕರು ಮೈಮುಲ್‌ನಿಂದ ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಅಲ್ಲದೇ ಯಶಸ್ವಿನಿ ಯೋಜನೆ ಮಾಡಿಸಿಕೊಳ್ಳಲು ಮುಂದಾಗಬೇಕು ಎಂದ ಅವರು ನಮ್ಮ ಡೇರಿಯಿಂದ ಲೋಕಲ್ ಡೇರಿಗೆ ಹೋಗಿದ್ದ 69 ಸದಸ್ಯರನ್ನು ಉಪನಿಬಂಧಕರು ಅಮಾನತುಗೊಳಿಸಿದ್ದಾರೆ. ಈ ಪೈಕಿ ಮೂವರು ಸಂಘದ ನಿಯಮಾನುಸಾರ ಪ್ರಮಾಣ ಪತ್ರ ಸಲ್ಲಿಸಿ ಸಂಘಕ್ಕೆ ಸೇರ್ಪಡೆಗೊಂಡು ಹಾಲು ಸರಬರಾಜು ಮಾಡುತ್ತಿದ್ದಾರೆ ಎಂದರು.

ಈ ವೇಳೆ ಡೇರಿ ಅಧ್ಯಕ್ಷೆ ಲೀಲಾವತಿ, ಉಪಾಧ್ಯಕ್ಷೆ ನಾಗಮ್ಮ, ನಿರ್ದೇಶಕರಾದ ಪ್ರೇಮ, ಪುಟ್ಟಮಣ್ಣಮ್ಮ, ರೇಖಾ, ಸುಂದ್ರಮ್ಮ, ನೀಲಮ್ಮ, ಮಹದೇವಮ್ಮ, ಭಾಗ್ಯ, ನಾಗಮ್ಮ, ಸಿಇಓ ಪಿ.ವಿ.ಸುಮಿತಾ, ಸದಸ್ಯರು ಸೇರಿದಂತೆ ಇನ್ನಿತರರಿದ್ದರು.

# ನಿಯಮ ಉಲ್ಲಂಘಿಸಿದ ರಸಗೊಬ್ಬರ ಅಂಗಡಿ ಪರವಾನಗಿ ರದ್ದು




ಬಸವೇಶ್ವರ ಆಗ್ರೋ ಟ್ರೇಡರ್ಸ್‌ಗೆ ಸಹಾಯಕ ಕೃಷಿ ನಿರ್ದೇಶಕ ವೈ.ಪ್ರಸಾದ್ ಭೇಟಿ ನೀಡಿ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಸೆ.2– ನಿಯಮ ಉಲ್ಲಂಘಿಸಿದ ಚಿಲ್ಲರೆ ರಸಗೊಬ್ಬರ ಮಾರಾಟ ಮಳಿಗೆ ಪರವಾನಿಗೆಯನ್ನು ಸಹಾಯಕ ಕೃಷಿ ನಿರ್ದೇಶಕ ವೈ.ಪ್ರಸಾದ್ ರದ್ದುಗೊಳಿಸಿದ್ದಾರೆ.

ತಾಲೂಕಿನ ಕಸಬಾ ಹೋಬಳಿ ಹ್ಯಾಂಡ್ ಪೋಸ್ಟ್ ಯರಹಳ್ಳಿ ಕಾವಲ್‌ನಲ್ಲಿರುವ ಶ್ರೀಬಸವೇಶ್ವರ ಆಗ್ರೋ ಟ್ರೇಡರ್ಸ್‌ಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದ ಅವರು ನಿಯಮ ಉಲ್ಲಂಘಿಸಿದ ಹಿನ್ನಲೆಯಲ್ಲಿ ಅಂಗಡಿ ಪರವಾನಗಿಯನ್ನು ರದ್ದುಗೊಳಿಸಿದ್ದಾರೆ.

ಸಹಾಯಕ ಕೃಷಿ ನಿರ್ದೇಶಕ ವೈಪ್ರಸಾದ್ ಮಾತನಾಡಿ, ಸಹಾಯಧನದ ರಸಗೊಬ್ಬರಗಳನ್ನು ಮಾರಾಟ ಮಾಡುವಾಗ ರೈತರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ರಸಗೊಬ್ಬರ ನೀಡಿಲ್ಲ ಮತ್ತು ರಸಗೊಬ್ಬರ ದಾಸ್ತಾನು ನಿರ್ವಹಣೆಯಲ್ಲಿಯೂ ವ್ಯತ್ಯಾಸವಾಗಿರುವುದನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗಿದೆ.

ತಾಲೂಕಿನ ಎಲ್ಲಾ ಚಿಲ್ಲರೆ ರಸಗೊಬ್ಬರ ಮಾರಾಟ ಪರವಾನಗಿದಾರರು ರಸಗೊಬ್ಬರ ನಿಯಂತ್ರಣ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ತಪ್ಪಿದಲ್ಲಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ಸೆ.5ಕ್ಕೆ ಮಿಸ್ಟರ್ ಗುಂಡಣ್ಣ ನಾಟಕ

ಕಂಪಲಾಪುರ, ಸೆ.2– ಕಂಪಲಾಪುರ ಕೊಪ್ಪಲು ಏಕದಂತ ಗೆಳೆಯರ ಬಳಗದಿಂದ ಪ್ರಥಮ ವರ್ಷದ ಗಣೇಶೋತ್ಸವದ ಅಂಗವಾಗಿ ಸೆ.5ರಂದು ಸಂಜೆ 7.30ಕ್ಕೆ ಚಿತ್ರನಟ ಹುಣಸೂರಿನ ಕುಮಾರ್ ಅರಸೇಗೌಡ ಮಿತ್ರ ಬಳಗದಿಂದ ಮಿಸ್ಟರ್ ಗುಂಡಣ್ಣ ಹಾಸ್ಯಭರಿತ ನಾಟಕ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಪದವಿಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಗೆಲುವು

# ಎಂಎಂಕೆ ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ ಆಯ್ಕೆ



ಕ್ರೀಡಾಕೂಟದಲ್ಲಿ ಗೆಲುವು ಸಾಧಿಸಿದ ವಿದ್ಯಾರ್ಥಿಗಳನ್ನು ಕಾಣಬಹುದು.

ಹೆಚ್.ಡಿ.ಕೋಟೆ, ಸೆ.2– ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಕ್ರೀಡಾ ರಂಗದಲ್ಲಿ ಸಾಧನೆಯ ಹಾದಿಯಲ್ಲಿದ್ದು, ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ತಂಡ ತಾಲೂಕು ಮಟ್ಟದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸುವ ಮೂಲಕ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದೆ ಎಂದು ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ಪಿ.ಪ್ರಕಾಶ್ ತಿಳಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಇತ್ತೀಚೆಗೆ ನಡೆದ ಪದವಿಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾದ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ನಮ್ಮ ಕಾಲೇಜಿನಲ್ಲಿ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗುತ್ತಿದ್ದು, ಕ್ರೀಡಾರಂಗದಲ್ಲಿಯೂ ವಿದ್ಯಾರ್ಥಿಗಳು ಸಾಧನೆಯ ಹಾದಿಯಲ್ಲಿದ್ದಾರೆ. ಅದರಲ್ಲಿಯೂ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ತಂಡ ಸತತ 3 ಬಾರಿ ತಾಲೂಕು ಮಟ್ಟದಲ್ಲಿ ಗೆಲುವು ಸಾಧಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದು, ಕಳೆದ 2 ಬಾರಿಯೂ ಜಿಲ್ಲಾ ಮಟ್ಟದಲ್ಲಿಯೂ ಗೆದ್ದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಕಾಲೇಜಿಗೆ, ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದರು.

ಈ ಬಾರಿಯೂ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, ಬಾಲಕಿಯರ ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ, ಬಾಲ್ ಬ್ಯಾಡ್ಮಿಂಟನ್ ಬಾಲಕ ಮತ್ತು ಬಾಲಕಿಯರು ಪ್ರಥಮ, ಬಾಲಕಿಯರ ಕಬ್ಬಡಿ ದ್ವಿತೀಯ ಸ್ಥಾನ, ಅಥ್ಲೆಟಿಕ್ಸ್ 3000 ಮೀಟರ್ ಓಟದಲ್ಲಿ ಸಿಂಚನ ಪ್ರಥಮ ಸ್ಥಾನ, ಮಾನ್ಯ ತೃತೀಯ ಸ್ಥಾನ, 1,500 ಮೀಟರ್ ಓಟದಲ್ಲಿ ಸಿಂಚನ ತೃತೀಯ ಸ್ಥಾನ, 200 ಮೀಟರ್ ಓಟದಲ್ಲಿ ಕೀರ್ತನ ತೃತೀಯ ಸ್ಥಾನ, ಗುಂಡು ಎಸೆತ ಐಶ್ವರ್ಯ ಪ್ರಥಮ, 1,500 ಮೀಟರ್ ಓಟದಲ್ಲಿ ಹೇಮಂತ್ ಪ್ರಥಮ, 200 ಮೀಟರ್ ಓಟದಲ್ಲಿ ಮಹಮ್ಮದ್ ಯಾಸಿನ್ ತೃತೀಯ ಸ್ಥಾನ, ಜಾವಲಿನ್ ಥ್ರೋ ಮಹದೇವಸ್ವಾಮಿ ತೃತೀಯ ಸ್ಥಾನ ಹಾಗೂ ಉದ್ದ ಜಿಗಿತದಲ್ಲಿ ವಿನೋದ್ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಸಂಸ್ಥೆ ಅಧ್ಯಕ್ಷ ಕೆ.ಆರ್. ಸತೀಶ್, ದೈಹಿಕ ಶಿಕ್ಷಣ ಶಿಕ್ಷಕ ಕೆ.ಎಸ್. ಹರೀಶ್ ಕುಮಾರ್, ಉಪನ್ಯಾಸಕರಾದ ಪ್ರಸನ್ನ, ವಿರೂಪಾಕ್ಷ, ಸಿದ್ದಾರ್ಥ, ಸಿದ್ದರಾಜು, ಮೋಹನ್, ಮನೋಜ್, ಜಾನ್ ಬೋಸ್ಕೋ, ಕುಮಾರ್, ಮಹಾದೇವಿ, ಮುಸ್ಕಾನ್, ಸುಪ್ರಿಯಾ, ತನುಜಾ, ನೀಲಮಣಿ, ಸೌಜನ್ಯ, ಭಾಗ್ಯ, ಸಹಾಯಕ ಅನಿಲ್ ಹಾಜರಿದ್ದರು.

# ಚಾಲಕರು ಕಡ್ಡಾಯವಾಗಿ ಸಂಚಾರ ನಿಯಮ ಪಾಲಿಸಿ

## ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ಇನ್ಸ್‌ಪೆಕ್ಟರ್ ಮುನಿಯಪ್ಪ ಸಲಹೆ



ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಇನ್ಸ್‌ಪೆಕ್ಟರ್ ಮುನಿಯಪ್ಪ ಮಾತನಾಡಿದರು.

ಹುಣಸೂರು, ಸೆ.2– ಬಸ್ ಚಾಲನೆ ವೇಳೆ ಚಾಲಕರು ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸಬೇಕು. ಇದರಿಂದ ಅಪಘಾತಗಳನ್ನು ತಡೆಗಟ್ಟಲು ಸಾಧ್ಯವಾಗಲಿದೆ ಎಂದು ನಗರದ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ತಿಳಿಸಿದರು.

ನಗರದ ಕೆಎಸ್‌ಆರ್‌ಟಿಸಿ ಬಸ್ ಡಿಪೋದಲ್ಲಿ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಆಯೋಜಿಸಿದ್ದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಚಾರಿ ನಿಯಮಗಳ ಪಾಲನೆಯಿಂದಾಗಿ ನಿಮ್ಮನ್ನೇ ನಂಬಿ ಬಂದಿರುವ 50ಕ್ಕೂ ಹೆಚ್ಚು ಪ್ರಯಾಣಿಕರ ಕುಟುಂಬ ಸುರಕ್ಷಿತವಾಗಿರುವ ಜೊತೆಗೆ ನಿಮ್ಮ ಕುಟುಂಬವೂ ನಿಮ್ಮನ್ನೇ ನಂಬಿ ಮನೆಯಲ್ಲಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದರು.

ನೀವು ನಿತ್ಯ ಸಂಚರಿಸುವ ರಸ್ತೆಯಲ್ಲಿ ಅನಾಹುತಗಳಿಗೆ ಎಡೆಯುಂಟು ಮಾಡಿಕೊಡುವ ಪರಿಸ್ಥಿತಿಗಳಿದ್ದರೇ ಅದನ್ನು ನಮ್ಮ ಇಲಾಖೆ ಅಥವಾ ಸಂಬಂಧಪಟ್ಟ ಇಲಾಖೆಗೆ ತಿಳಿಸುವುದನ್ನು ಮರೆಯಬೇಡಿ. ರಸ್ತೆಯಲ್ಲಿ ಆಳೆತ್ತರದ ಗುಂಡಿ ಇರುವುದು, ಸಂಚಾರಿ ನಿಯಮಗಳನ್ನು ತಿಳಿಸುವ ನಾಮಫಲಕದ ಸುತ್ತ ಗಿಡಗಂಟಿ ಬೆಳೆದಿರುವುದು, ನೆಲದಲ್ಲಿ ಬಿದ್ದಿರುವುದು ಹೀಗೆ ಹಲವು ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಎಂದರು. ಸಮಯ ಉಳಿಸುವ ಉದ್ದೇಶದಿಂದ ಅತಿಯಾದ ವೇಗದಲ್ಲಿ ವಾಹನ ಚಾಲನೆ ಬೇಡ. ರಸ್ತೆ ತುಂಬಾ ನೀವೇ ಚಲಿಸುತ್ತಿದ್ದರೆ ಅಕ್ಕಪಕ್ಕದ ದ್ವಿಚಕ್ರ ವಾಹನ ಸವಾರರು ಗಲಿಬಿಲಿಗೊಂಡು ಅಪಘಾತಗಳಿಗೆ ಒಳಗಾಗುತ್ತಾರೆ. ಕಾಲೇಜು ಹುಡುಗರು ಹುಡುಗಾಟಿಕೆ ನಡೆಸುತ್ತಿದ್ದರೆ, ಅವರಿಗೆ ದಾರಿಬಿಟ್ಟು ಬಿಡುವ ಮೂಲಕ ಆಗಬಹುದಾದ ಅನಾಹುತ ತಡೆಯಿರಿ. ಫುಟ್‌ಪಾತ್ ಮೇಲೆ ವಾಹನಗಳು, ತಳ್ಳುವ ಗಾಡಿಗಳ ಹಾವಳಿ ಹೆಚ್ಚಾಗಿ ಚಾಲನೆ ಕಷ್ಟ ಸಾಧ್ಯವಾಗಿರುವ ಜಾಗಗಳ ಕುರಿತು ನಮಗೆ ಮಾಹಿತಿ ನೀಡಿ. ಬಸ್ ನಿರ್ವಾಹಕರು ಮತ್ತು ಚಾಲಕರು ಇಬ್ಬರೂ ಜವಾಬ್ದಾರಿಯಿಂದ ಗಮನಿಸಿದಲ್ಲಿ ಮಾತ್ರ ಅಪಘಾತಗಳನ್ನು ತಡೆಯಲು ಸಾಧ್ಯ. ಡಿಪೋದಲ್ಲಿ ಕರ್ತವ್ಯ ನಿರ್ವಹಿಸುವ ಮೆಕ್ಯಾನಿಕ್‌ಗಳು ಕೂಡ ಬಸ್‌ಗಳು ಸುಸ್ಥಿತಿಯಲ್ಲಿರುವಂತೆ ಹೆಚ್ಚಿನ ಕಾಳಜಿ ವಹಿಸಿ ಎಂದರು.

ಈ ವೇಳೆ ಸಹಾಯಕ ಕಾರ್ಯ ಅಧೀಕ್ಷಕ ಸ್ವಾಮಿ, ಪ್ರಕಾಶ್ ಸೇರಿದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ಇತರರಿದ್ದರು.

## ಒಳ ಮೀಸಲಾತಿ ಜಾರಿ: ಸಿಎಂ, ಸಚಿವರಿಗೆ ಅಭಿನಂದನೆ

ನಂಜನಗೂಡು, ಸೆ.2– ಪ.ಜಾತಿಯ ಯಾವುದೇ ಜನಾಂಗಕ್ಕೆ ಅನ್ಯಾಯವಾಗದಂತೆ ಒಳ ಮೀಸಲಾತಿ ಜಾರಿಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಲ್ಲಾ ಸಚಿವರು ಮತ್ತು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ಪುರಸಭೆ ಮಾಜಿ ಉಪಾಧ್ಯಕ್ಷ ದೇವರಾಜು ತಿಳಿಸಿದರು.

ಒಳ ಮೀಸಲಾತಿ ಜಾರಿಗೊಳಿಸುವಂತೆ ಕಳೆದ 35 ವರ್ಷಗಳಿಂದ ನಿರಂತರವಾಗಿ ನಮ್ಮ ಮಾದಿಗ ಸಮಾಜ, ಆದಿ ಜಾಂಬವ ಸಂಘಗಳ ಒಕ್ಕೂಟ ಮತ್ತು ಎಲ್ಲಾ ಹಂತದ ಸಮಾಜದ ಮುಖಂಡರ ಹೋರಾಟದ ಫಲವಾಗಿ ಒಳ ಮೀಸಲಾತಿ ದೊರಕಿದೆ. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅವರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮಾದಿಗ ಜನಾಂಗದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ಗುಂಡ್ಲುಪೇಟೆಯ ಅಂಕಹಳ್ಳಿ ಗ್ರಾಮದಲ್ಲಿ ಮಾದಿಗ ಸಮಾಜದ ಮೇಲೆ ದೌರ್ಜನ್ಯ ನಡೆದಾಗ ಹಾಗೂ ನಂಜನಗೂಡು ತಾಲೂಕಿನ ಹುಳಿಮಾವು ಗ್ರಾಮದಲ್ಲಿ ಡಾ.ಬಾಬು ಜಗಜೀವನ ರಾಂ ಪುತ್ಥಳಿ ವಿರೂಪಗೊಳಿಸಿದಾಗ ಅದರ ನೇತೃತ್ವ ವಹಿಸಿ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಲು ಶ್ರಮಿಸಿದ್ದಾರೆ. ಜೊತೆಗೆ ಒಳ ಮೀಸಲಾತಿ ಜಾರಿ ಹೋರಾಟದಲ್ಲಿ ಡಾ.ಡಿ.ತಿಮ್ಮಯ್ಯನವರು ನೇತೃತ್ವ ವಹಿಸಿಕೊಂಡು ಶ್ರಮಿಸಿದ್ದಾರೆ. ಹೀಗಾಗಿ ಅವರಿಗೆ ಮಾದಿಗ ಸಮುದಾಯ ಕೃತಜ್ಞತೆ ಸಲ್ಲಿಸುತ್ತದೆ ಎಂದು ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

ಬನ್ನೂರು, ಸೆ.2– ಪಟ್ಟಣದ ಪ.ಜಾತಿ ನೌಕರರ ಬಳಗದಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪ.ಜಾತಿ ಬಲಗೈ ಸಮುದಾಯ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಬನ್ನೂರು ಹೋಬಳಿ ಮತ್ತು ಸುತ್ತಮುತ್ತ ವಾಸವಿರುವ ಅರ್ಹ ಅಭ್ಯರ್ಥಿಗಳು ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿಯೊಂದಿಗೆ ಸೆ.30ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಮಾಹಿತಿಗೆ 9880729022, 8748837598 ಸಂಪರ್ಕಿಸಬಹುದು.

## ಶ್ರೀಸ್ವರ್ಣಗೌರಿ ಅಮ್ಮನವರಿಗೆ ವಿಶೇಷ ಪೂಜೆ



ಮೂಗೂರಿನಲ್ಲಿ ಗೌರಿ–ಗಣೇಶ ಹಬ್ಬದ ಅಂಗವಾಗಿ ಗ್ರಾಮದ ಶ್ರೀಸ್ವರ್ಣಗೌರಿ ಮಂದಿರದಲ್ಲಿ (ಗೌರಿ ಗುಡಿ) ಪ್ರತಿಷ್ಠಾಪಿಸಿದ್ದ ಶ್ರೀಸ್ವರ್ಣಗೌರಿ ಅಮ್ಮನವರಿಗೆ ಹೂವಿನ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ರೈಸ್‌ಮಿಲ್ ಮಾಲೀಕರು ಹಾಗೂ ಉದ್ಯಮಿ ಮೂಗೂರು ಸುಧಾಕರ್ ಕುಟುಂಬ ವರ್ಗದವರಿದ್ದರು.

# ಶ್ರೀಕುಮಾರ ಚಂದ್ರಶೇಖರನಾಥಸ್ವಾಮಿಗಳ ಪುಣ್ಯಾರಾಧನೆ



ಸಾಲಿಗ್ರಾಮದಲ್ಲಿ ಶ್ರೀಕುಮಾರ ಚಂದ್ರಶೇಖರನಾಥ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮ ನಡೆಯಿತು.

ಸಾಲಿಗ್ರಾಮ, ಸೆ.2– ಶ್ರೀಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರು ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಸಮಾಜದ ಸಾಮರಸ್ಯ ಕಾಪಾಡಿಕೊಂಡು ಬಂದಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಗಾಂಧಿ ಪ್ರತಿಮೆ ಬಳಿ ವಿಶ್ವ ಒಕ್ಕಲಿಗರ ಸಂಘದಿಂದ ಆಯೋಜಿಸಿದ್ದ ಶ್ರೀಕುಮಾರ ಚಂದ್ರಶೇಖರನಾಥ ಮಹಾಸ್ವಾಮಿಗಳ 16ನೇ ದಿನದ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೌಮ್ಯ ಸ್ವಭಾವದ ವ್ಯಕ್ತಿತ್ವ ಹೊಂದಿದ್ದ ಸ್ವಾಮೀಜಿಗಳು ಸರ್ವ ಜನಾಂಗವನ್ನು ಸರಿ ಸಮಾನವಾಗಿ ಕಾಣುವ ಜೊತೆಗೆ ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದರು.

ಸಂಘದ ಅಧ್ಯಕ್ಷ ಕುಪ್ಪಳ್ಳಿ ಸೋಮಶೇಖರ್ ಮಾತನಾಡಿ, ಶ್ರೀಕುಮಾರ ಚಂದ್ರಶೇಖರನಾಥ ಮಹಾಸ್ವಾಮಿಗಳ ಪುಣ್ಯಾರಾಧನೆಯನ್ನು ಪಟ್ಟಣದಲ್ಲಿ ಎಲ್ಲರೂ ಜೊತೆಗೂಡಿ ಆಚರಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ. ಶ್ರೀಗಳ ಸಂಬಂಧಿಕರು ಸಾಲಿಗ್ರಾಮದಲ್ಲಿದ್ದಾರೆ ಎಂದರು.

ಈ ವೇಳೆ ಮಾಜಿ ಸಚಿವ ಸಾ.ರಾ. ಮಹೇಶ್ ಅನ್ನದಾನಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಂ, ಉಪಾಧ್ಯಕ್ಷ ಹೊಸೂರು ಕುಚೇಲ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್.ಕೆ.ಮಧುಚಂದ್ರ, ವಿಶ್ವ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಸಾ.ರಾ. ಗುರುಪ್ರಸಾದ್, ಪದಾಧಿಕಾರಿಗಳಾದ ಪ್ರಕಾಶ್, ನಾಗೇಶ್, ಮಂಜುನಾಥ್, ಸಾ.ರಾ.ಸತೀಶ್, ಅನಂತ್, ನಾಗೇಂದ್ರ, ಹರೀಶ್, ರಾಮೇಗೌಡ, ವಾಸು, ಕುಮಾರಣ್ಣ, ನರಸಿಂಹ, ಗ್ರಾಪಂ ಸದಸ್ಯರಾದ ಲೋಕೇಶ್, ಹರೀಶ್, ಗಂಗಾಧರ್, ಶಕೀಲ್, ಮುಖಂಡರಾದ ಲಾಲೂ ಸಾಹೇಬ್ ಸೇರಿದಂತೆ ಹಲವರಿದ್ದರು.

## ಚೆನ್ನೈ ಅಕಾಡೆಮಿಯಿಂದ ಗೌರವ ಡಾಕ್ಟರೇಟ್

# ಮಾದಿಗ ಸಮುದಾಯದಿಂದ ಬಿ.ಮರಯ್ಯಗೆ ಸನ್ಮಾನ



ಡಾಕ್ಟರೇಟ್ ಪಡೆದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರನ್ನು ಮಾದಿಗ ಸಮಾಜದ ಮುಖಂಡರು ಸನ್ಮಾನಿಸಿದರು.

ತಿ.ನರಸೀಪುರ, ಸೆ.2– ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ. ಮರಯ್ಯ ಅವರ ಸಮಾಜಸೇವೆ ಗುರ್ತಿಸಿ ಚೆನ್ನೈನ ಏಷ್ಯಾ ಇಂಟರ್ನೆಟ್ ಕಲ್ಚರ್ ಸರ್ಚ್ ಅಕಾಡೆಮಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.


ಈ ಹಿನ್ನೆಲೆಯಲ್ಲಿ ಪಟ್ಟಣದ ಅತಿಥಿ ಗೃಹದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮಾದಿಗ ಸಮುದಾಯದ ಮುಖಂಡರು ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಮರಯ್ಯನವರನ್ನು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮರಯ್ಯ, ಕಳೆದ 40 ವರ್ಷಗಳ ನಿರಂತರ ಸಮಾಜ ಸೇವೆಗೆ ಇದೀಗ ಪ್ರತಿಫಲ ದೊರಕಿದೆ. ಸಾಮಾಜಿಕ, ಶೈಕ್ಷಣಿಕವಾಗಿ ಯಾವುದೇ ಜಾತಿ, ಧರ್ಮ ನೋಡದೆ ಎಲ್ಲರನ್ನು ಸಮಾನವಾಗಿ ನೋಡಿದ್ದೇನೆ. ಅಲ್ಲದೇ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ನಿರ್ವಂಚನೆಯಿಂದ ಮಾಡುತ್ತಾ ಬಂದಿದ್ದೇನೆ. ನನ್ನ ಸಮಾಜ ಸೇವೆ ಗುರ್ತಿಸಿ ಚೆನ್ನೈನ ಏಷ್ಯಾ ಇಂಟರ್ನೆಟ್ ಕಲ್ಚರ್ ಸರ್ಚ್ ಅಕಾಡೆಮಿಯವರು ಡಾಕ್ಟರೇಟ್ ಪದವಿ ನೀಡಿದ್ದಾರೆ. ಅವರಿಗೆ ನಾನು ಆಭಾರಿಯಾಗಿದ್ದೇನೆ. ಕುಟುಂಬಸ್ಥರೊಡಗೂಡಿ ಸ್ವಂತ ಖರ್ಚಿನಲ್ಲಿ ಗೋಪಾಲಪುರ ಗ್ರಾಮದ ಪ್ರವೇಶ ದ್ವಾರದಲ್ಲಿ ಡಾ.ಬಾಬು ಜಗಜೀವನರಾಂ ಪ್ರತಿಮೆ ನಿರ್ಮಾಣ ಮಾಡಿದ್ದು, ಜಿಲ್ಲೆಯಲ್ಲೇ ಬಾಬೂಜಿ ಪ್ರತಿಮೆ ನಿರ್ಮಾಣ ಮಾಡಿರುವುದು ಹೆಗ್ಗಳಿಕೆಯಾಗಿದೆ. ಪ್ರತಿಮೆ ನಿರ್ಮಾಣದ ನಂತರ ನನ್ನ ಸಾಮಾಜಿಕ ಜವಾಬ್ದಾರಿ ಹೆಚ್ಚಾಗಿ ಮತ್ತಷ್ಟು ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡೆ ಎಂದರು.

ಎಂಬಿಬಿಎಸ್ ಅಥವಾ ಪಿಹೆಚ್‌ಡಿ ಪಡೆದವರಿಗೆ ಡಾಕ್ಟರೇಟ್ ಕೊಡುತ್ತಾರೆಂದು ಕೇಳಿದ್ದೆ. ಆದರೆ ಏಷ್ಯಾ ಇಂಟರ್ನೆಟ್ ಅಕಾಡೆಮಿಯವರು ನನ್ನನ್ನು ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಿದಾಗ ಆಶ್ಚರ್ಯವಾಗಿತ್ತು. ಸ್ವೀಕಾರ ಮಾಡುವುದು ಬೇಡವೆಂದು ನಿರ್ಧರಿಸಿದ್ದೆ. ಆದರೆ ಎಡಗೈ ಸಮಾಜದ ನಾನು ನನ್ನ ಸಮಾಜವನ್ನು ಗುರುತಿಸಿ ಪ್ರಶಸ್ತಿ ಕೊಡುತ್ತಿರುವಾಗ ಅದನ್ನು ಹೆಮ್ಮೆಯಿಂದ ಸ್ವೀಕಾರ ಮಾಡಿದ್ದೇನೆ.

ಈ ಪ್ರಶಸ್ತಿಯಿಂದ ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ. ಮುಂದೆಯೂ ಸಮಾಜ ಸೇವೆ ಮಾಡುತ್ತಲೇ ಇರುತ್ತೇನೆ. ಸಮಾಜಕ್ಕೋಸ್ಕರ ಯಾವುದೇ ಸಹಾಯ ಮಾಡಲು ನಾನು ಸದಾ ಸಿದ್ಧನಾಗಿದ್ದೇನೆ. ನನಗೆ ಪ್ರಶಸ್ತಿ ಸಿಕ್ಕ ಹಿನ್ನೆಲೆಯಲ್ಲಿ ನನಗೆ ಅಭಿನಂದಿಸಿ ಕರೆ ಮಾಡಿದ ಹಾಗೂ ನನ್ನನ್ನು ಭೇಟಿಯಾಗಿ ಆತ್ಮೀಯವಾಗಿ ಸನ್ಮಾನಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

## ನಾಗರಾಜು ನಿಧನ



ಹೆಚ್.ಡಿ.ಕೋಟೆ, ಸೆ.2– ಪಟ್ಟಣದ ಒಂದನೇ ಮುಖ್ಯರಸ್ತೆ ನಿವಾಸಿ ಲಾಂಡ್ರಿ ನಾಗರಾಜು(75) ಮಂಗಳವಾರ ನಿಧನರಾದರು.

ಮೃತರು ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ಪಟ್ಟಣದ ಶಿವಾಜಿ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಸರ್ಕಾರದ ಜನಪರ ಕಾರ್ಯಕ್ರಮಗಳ ವ್ಯಾಪಕವಾಗಿ ಜನರಿಗೆ ತಲುಪಿಸುವ ಗುರುತರ ಕಾರ್ಯವನ್ನು ಪ್ರಚಾರ ಸಮಿತಿ ಮಾಡುತ್ತಿದೆ

## ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್‌ಕುಮಾರ್ ಸೊರಕೆ ಸಮರ್ಥನೆ

ಮೈಸೂರು, ಸೆ.2(ಎಂಕೆ)– ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದ ಚಟುವಟಿಕೆಗಳನ್ನು ನೇರವಾಗಿ ಜನರಿಗೆ ತಲುಪಿಸಿ, ಪಕ್ಷ ಸಂಘಟನೆ ಮಾಡುವಂತಹ ವ್ಯಾಪಕವಾದ ಪ್ರಚಾರ ಸಮಿತಿ ರೂಪುಗೊಳ್ಳಬೇಕು ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಏರ್ಪಡಿಸಿದ್ದ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಸಭೆ ಮತ್ತು ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಸಿದ್ಧಾಂತ ಇಟ್ಟುಕೊಂಡು ಪಕ್ಷ ಕಟ್ಟುವ ಕೆಲಸ ಮಾಡಬೇಕಿದೆ ಎಂದರು.

ಪ್ರಚಾರ ಸಮಿತಿ ಚುನಾವಣಾ ಸಂದರ್ಭದಲ್ಲಿ ಮಾತ್ರವೇ ಉಪಯೋಗಿಸಿಕೊಳ್ಳುವ ಘಟಕವಲ್ಲ. ಸದಾಕಾಲ ಪಕ್ಷದ ಮತ್ತು ಸರ್ಕಾರದ ಚಟುವಟಿಕೆಗಳನ್ನು ನೇರವಾಗಿ ಜನರಿಗೆ ತಲುಪಿಸಿ ಪಕ್ಷ ಸಂಘಟನೆ ಮಾಡುವಂತಹ ಒಂದು ವ್ಯಾಪಕವಾದ ವಿಭಾಗ ಎಂದರು.

ಚುನಾವಣಾ ಆಯೋಗವು ಒಂದು ಪಕ್ಷದ ಕೈಪಿಡಿಯಾಗಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು, ಜನರ ಮತದಾನದ ಹಕ್ಕು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ. ಬಿಹಾರ ಪಾದಯಾತ್ರೆಯಲ್ಲಿ ಮತಗಳ್ಳತನದ ಬಗ್ಗೆ ಜನಸಾಮಾನ್ಯರನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಈ ಬಗ್ಗೆ ಅಭಿಯಾನ ನಡೆಯಬೇಕು ಎಂದು ಸಲಹೆ ನೀಡಿದರು.



ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಸಭೆ ಮತ್ತು ಪದಗ್ರಹಣ ಸಮಾರಂಭ ನಡೆಯಿತು.

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಚುನಾವಣೆ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಆರು ತಿಂಗಳಲ್ಲಿ ಜಾರಿಗೊಳಿಸಿದ್ದು, ಪ್ರತಿಪಕ್ಷಗಳ ಆರೋಪಗಳನ್ನು ಮೆಟ್ಟಿ ನಿಲ್ಲುವ ಸಾಧನೆಗಳಾಗಿವೆ. ಆದರೆ ವಿರೋಧ ಪಕ್ಷಗಳು ಅಪಪ್ರಚಾರಕ್ಕಷ್ಟೇ ಸೀಮಿತವಾಗಿವೆ ಎಂದು ಟೀಕಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ರೂಪಿಸಿಕೊಂಡಿರುವುದರಿಂದಾಗಿಯೇ ಅವರು, ಜಾರಿಗೆ ತರುವ ಎಲ್ಲಾ ಯೋಜನೆಗಳು ಬಡವರು ಮತ್ತು ಜನಪರವಾದ ಯೋಜನೆಗಳಾಗಿ ಪ್ರಸಿದ್ಧಿ ಪಡೆದಿವೆ ಎಂದು ಶ್ಲಾಘಿಸಿದರಲ್ಲದೆ, ಮೈಸೂರಿಗೆ ಕಾಂಗ್ರೆಸ್‌ನಲ್ಲಿ ತನ್ನದೇ ಮಹತ್ವವಿದ್ದು, ಈ ಜಿಲ್ಲೆಯಿಂದ ಹಲವಾರು ಮಹಾ ನಾಯಕರು ಹೊರಹೊಮ್ಮಿದ್ದಾರೆ ಎಂದು ಸ್ಮರಿಸಿದರು.

ಮಾಜಿ ಸಚಿವ ಕೋಟೆ ಎಂ. ಶಿವಣ್ಣ ಮಾತನಾಡಿ, ಮುಂದಿನ ದಿನಗಳಲ್ಲಿ ಪ್ರಚಾರ ಸಮಿತಿ ವತಿಯಿಂದ ಸಂಚಾರಿ ವಾಹನಕ್ಕೆ ಚಾಲನೆ ನೀಡಲಿದ್ದು, ಆ ವಾಹನಗಳು ಪ್ರತಿ ಬ್ಲಾಕ್‌ಗಳಿಗೂ ಸಂಚರಿಸಿ, ಸಾರ್ವಜನಿಕರಿಗೆ ಸರ್ಕಾರದ ಜನಪರ ಕಾರ್ಯಗಳ ಬಗ್ಗೆ ತಿಳಿಸಿಕೊಡುವ ಕೆಲಸವಾಗಬೇಕಿದೆ ಎಂದರು.

**ಸ್ಥಳೀಯ ಸಂಸ್ಥೆಗಳಲ್ಲಿ ಸ್ಪಷ್ಟ ಬಹುಮತ:** ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಬಹಳ ಗಟ್ಟಿಯಾಗಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪಷ್ಟ ಬಹುಮತ ಬರಲಿದೆ. ಮೈಸೂರು ಜಿಲ್ಲೆಯಲ್ಲಿ ಸುಮಾರು 10 ಸಾವಿರ ಪದಾಧಿಕಾರಿಗಳಿದ್ದಾರೆ ಎಂದು ತಿಳಿಸಿದರು.

ಬಳಿಕ ಕೌಶಲಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತನಾಯಕ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮುಡಾ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮಾಜಿ ಮೇಯರ್‌ಗಳಾದ ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್. ಸಿ.ಬಸವರಾಜು, ನರೇಂದ್ರ, ಕೆಪಿಸಿಸಿ ಪ್ರಚಾರ ಸಮಿತಿಯ ಮುನೀರ್, ಜಾವಿದ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ರವಿ ಸಿ.ಮಾವಿನಹಳ್ಳಿ, ನಗರ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಸೇವಾದಳದ ಅಧ್ಯಕ್ಷ ಸಾ.ಮ.ಯೋಗೇಶ್, ಮುಖಂಡರಾದ ಹುಣಸೂರು ಬಸವಣ್ಣ, ಮೋಹನ್, ಲತಾ ರಂಗನಾಥ್, ಹೆಡತಲೆ ಮಂಜುನಾಥ್, ನಾಗೇಶ್, ತಲಕಾಡು ಮಂಜುನಾಥ್, ರಮೇಶ್, ಗಿರೀಶ್, ಮಂಜು, ಲಕ್ಷ್ಮಣ್ ಮತ್ತಿತರರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಕೂಲಿ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಅಂದೊಂದಿತ್ತು ಕಾಲ(ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಕೂಲಿ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಉಸಿರು (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕೂಲಿ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ರಿಪ್ಪನ್ ಸ್ವಾಮಿ (ಕ) | 4 ಪ್ರದರ್ಶನಗಳು |
| **ಸಂಗಂ** | |
| ಸು ಫ್ರಮ್ ಸೋ (ಕ) | 4 ಪ್ರದರ್ಶನಗಳು |
| **ಲಿಡೋ** | |
| ವಿಷ್ಣುವರ್ಧನ(ಕ) + ಸಿಂಹರೂಪಿಣಿ (ಕ) | 2+2 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಉಸಿರು (ಕ) | 2+2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ. |
| ಸ್ಕ್ರೀನ್ 2 | ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ. |
| ಸ್ಕ್ರೀನ್ 3 | ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ. |
| ಸ್ಕ್ರೀನ್ 4 | ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ. |
| ಸ್ಕ್ರೀನ್ 2 | ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ. |
| ಸ್ಕ್ರೀನ್ 3 | ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ. |
| ಸ್ಕ್ರೀನ್ 4 | ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಟ್ರಕ್ ಬಾಡಿ ತಾಗಿ ಉರುಳಿ ಬಿದ್ದ ಮರ: ಅದೃಷ್ಟವಶಾತ್ ಯಾವ ಹಾನಿಯೂ ಇಲ್ಲ



ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಟ್ರಕ್ ಬಾಡಿ ತಾಗಿ ಮುರಿದು ಬಿದ್ದಿರುವ ಮರ ಕಾಣಬಹುದು.

ಮೈಸೂರು, ಸೆ.2(ಎಂಕೆ)– ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಮಂಗಳವಾರ ಟ್ರಕ್ ಡಿಕ್ಕಿ ಹೊಡೆದ ರಭಸಕ್ಕೆ ಮರವೊಂದು ಬುಡಸಮೇತ ಮುರಿದು ಬಿದ್ದಿದೆ.

ಮಧ್ಯಾಹ್ನ 2 ಗಂಟೆ ಸುಮಾರಿಗೆ ರೈಲ್ವೆ ಗೂಡ್ಸ್ ಅನ್‌ಲೋಡ್ ಮಾಡಿ ಶೇಷಾದ್ರಿ ಅಯ್ಯರ್ ರಸ್ತೆ ಮೂಲಕ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ರಿಂಗ್ ರಸ್ತೆಯತ್ತ ತೆರಳುತ್ತಿದ್ದ ಟ್ರಕ್‌ನ ಮೇಲ್ಭಾಗ ರಸ್ತೆ ಬದಿಯಲ್ಲಿ ಬಾಗಿದ್ದ ಗುಲ್‌ಮೊಹರ್ ಮರದ ಕೊಂಬೆಗೆ ತಾಗಿದೆ. ಪರಿಣಾಮ ಬುಡ ಸಮೇತ ಮರ ನೆಲಕ್ಕುರುಳಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ರೈಲ್ವೆ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಚೇರಿ ಎದುರಿದ್ದ ಮರದ ಬುಡ ದುರ್ಬಲವಾಗಿದ್ದು, ಟ್ರಕ್‌ನ ಮೇಲ್ಭಾಗ ತಾಗಿದ್ದಕ್ಕೆ ಉರುಳಿ ಬಿದ್ದಿದೆ. ಅದೃಷ್ಟವಶಾತ್ ಮರದ ಕೆಳಗೆ ಯಾರು ಇರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

**ಪರದಾಡಿದ ಟ್ರಕ್ ಡ್ರೈವರ್:** ಟ್ರಕ್‌ನ ಮೇಲ್ಭಾಗ ತಾಗಿ ಮರ ರಸ್ತೆಗೆ ಅಡ್ಡವಾಗಿ ಮುರಿದು ಬಿದ್ದರೆ, ಹಿಂಬದಿಯಲ್ಲಿದ್ದ ಮರದ ಕೊಂಬೆಗಳಿಂದಾಗಿ ಟ್ರಕ್ ಮುಂದೆ–ಹಿಂದೆ ಚಲಿಸಲಾಗದೆ ಟ್ರಕ್ ಡ್ರೈವರ್ ಕೆಲಕಾಲ ಪರದಾಡುವಂತಾಯಿತು. ಮುಂದೆ ಮುರಿದು ಬಿದ್ದಿದ್ದ ಮರ, ಹಿಂದೆ ಟ್ರಕ್ ಮೇಲ್ಭಾಗಕ್ಕೆ ತಾಗುತ್ತಿದ್ದ ಮರಗಳ ಕೊಂಬೆಗಳಿಂದ ಟ್ರಕ್ ರಸ್ತೆಯಲ್ಲಿ ಗಂಟೆಗೂ ಹೆಚ್ಚುಕಾಲ ನಿಂತಲ್ಲೆ ನಿಲ್ಲುವಂತಾಯಿತು. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ನಗರಪಾಲಿಕೆ ಸಿಬ್ಬಂದಿ ಮರ ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರು.

## ಬಿ.ಎಂ.ಶ್ರೀನಗರದಲ್ಲಿ ಗೌರಿ–ಗಣೇಶೋತ್ಸವ



ಮೈಸೂರಿನ ಬಿಎಂಶ್ರೀ ನಗರ ಎರಡನೇ ಮುಖ್ಯರಸ್ತೆಯ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ 6 ದಿನಗಳ ಕಾಲ 29ನೇ ವರ್ಷದ ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಗಣೇಶ ಹಬ್ಬದ ಪೂಜಾ ಮಹೋತ್ಸವ ನೆರವೇರಿಸಿ, ಗೌರಿ–ಗಣೇಶ ಮೂರ್ತಿಗಳನ್ನು ಅದ್ದೂರಿ ಮೆರವಣಿಗೆಯೊಂದಿಗೆ ಶ್ರೀರಂಗಪಟ್ಟಣ ಪಶ್ಚಿಮವಾಹಿನಿಯಲ್ಲಿ ವಿಸರ್ಜಿಸಲಾಯಿತು. ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಪದಾಧಿಕಾರಿಗಳು, ಮುಖಂಡರು ಸೇರಿದಂತೆ ಅಪಾರ ಭಕ್ತರು ಪಾಲ್ಗೊಂಡಿದ್ದರು.

# ಕೃತಕ ಬುದ್ಧಿಮತ್ತೆಯನ್ನು ಸದ್ಬಳಕೆ ಮಾಡಿಕೊಳ್ಳಿ

## ವಿದ್ಯಾರ್ಥಿಗಳಿಗೆ ವಿಶ್ರಾಂತ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಸಲಹೆ

ಮೈಸೂರು, ಸೆ.2(ಬಿಎಲ್‌ಯು)– ಕೃತಕ ಬುದ್ಧಿಮತ್ತೆಯ ಬಹು ಉಪಯೋಗವನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕು ಎಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಸಲಹೆ ನೀಡಿದರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ಯುಗದಲ್ಲಿ ಬೋಧನೆ, ಸಂಶೋಧನೆ ಸೇರಿದಂತೆ ಎಲ್ಲಾ ಮಾಹಿತಿಗಳು ಅಂಗೈನಲ್ಲಿ ದೊರೆಯುತ್ತದೆ. ಇದನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಎಐ ನಲ್ಲಿ ಚಾಟ್ ಜಿಟಿಪಿಯಿಂದ ಪಡೆಯುವ ಜ್ಞಾನ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸುತ್ತದೆ. ಚಾಟ್ ಜಿಟಿಪಿಯನ್ನು ಸಮರ್ಪಕವಾಗಿ ಬಳಸಿಕೊಂಡು ಉದ್ಯೋಗಾವಕಾಶ ಗಿಟ್ಟಿಸಿಕೊಳ್ಳಬಹುದು ಎಂದು ಪ್ರೊ.ಲಿಂಗರಾಜ ಗಾಂಧಿ ಅಭಿಪ್ರಾಯಪಟ್ಟರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಕೆ–ಸೆಟ್ ಮತ್ತು ಯುಜಿಸಿ– ನೆಟ್ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಅವರು ಅಧ್ಯಯನ ಪುಸ್ತಕ ಬಿಡುಗಡೆ ಮಾಡಿದರು.

ಇಂದಿನ ಪರಿಸ್ಥಿತಿಯಲ್ಲಿ ವಿದ್ಯಾರ್ಹತೆ ಹಾಗೂ ಕೌಶಲ ಬಹಳ ಮುಖ್ಯ. ಸರ್ಕಾರಿ ಉದ್ಯೋಗವೇ ಆಗಲಿ ಅಥವಾ ಸ್ವಯಂ ಉದ್ಯೋಗವೇ ಆಗಲಿ ಕೌಶಲವಿಲ್ಲದಿದ್ದರೆ ಗುರಿ ಮುಟ್ಟಲು ಸಾಧ್ಯವಿಲ್ಲ. ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಮೈಸೂರಿನ ಪತ್ರಿಕೋದ್ಯಮ ಉತ್ತೇಜನ ನೀಡುತ್ತಿದೆ ಎಂದು ಪ್ರೊ.ಲಿಂಗರಾಜ ಗಾಂಧಿ ಹೇಳಿದರು.

ಇದೇ ವೇಳೆ ಮಾತನಾಡಿದ ಕರ್ನಾಟಕ ಕೌಶಲಾಭಿವೃದ್ಧಿ ಮಂಡಳಿ ಅಧ್ಯಕ್ಷೆ ಕಾಂತಾ ನಾಯಕ್, ಶಿಕ್ಷಣದ ಕಲಿಕೆ ಜೊತೆಗೆ ಕೌಶಲ ಕೂಡಿದರೆ ಇನ್ನಷ್ಟು ಪ್ರಗತಿ ಸಾಧಿಸಬಹುದು. ವಿದ್ಯಾರ್ಥಿಗಳು ವೈಫಲ್ಯಕ್ಕೆ ಹೆದರದೆ ಸವಾಲುಗಳನ್ನು ಎದುರಿಸಿ ಗುರಿ ಸಾಧಿಸಬೇಕು ಎಂದು ಸಲಹೆ ನೀಡಿದರು.

ನಂತರ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರು, ಇಂದಿನ ಕಾಲಘಟ್ಟದಲ್ಲಿ ತಂತ್ರಜ್ಞಾನ ಜೀವನದ ಅವಿಭಾಜ್ಯ ಅಂಗವಾಗಿದೆ. ಇಂದಿನ ಆಧುನಿಕ ಯುಗಕ್ಕೆ ತಂತ್ರಜ್ಞಾನ ಅಗತ್ಯವಾಗಿದೆ. ತಂತ್ರಜ್ಞಾನದ ಜೊತೆಗೆ ನಾವು ಸಾಗಬೇಕೇ ವಿನಃ ಅದನ್ನು ವಿರೋಧಿಸಬಾರದು ಎಂದು ಹೇಳಿದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಗುರಿ ಜೊತೆಗೆ ಸಮಯ ಪಾಲನೆ ಮಾಡುವುದು ಅತ್ಯವಶ್ಯ. ನಿಮ್ಮ ಶ್ರಮದ ಬಗ್ಗೆ ನಿಮಗೆ ನಂಬಿಕೆ ಇರಬೇಕು ಎಂದು ಕಿವಿಮಾತು ಹೇಳಿದರು.

ಡೀನ್‌ಗಳಾದ ಡಾ.ಎಂ. ರಾಮನಾಥ ನಾಯ್ಡು, ಎನ್.ಆರ್.ಚಂದ್ರೇಗೌಡ, ಕಾರ್ಯಕ್ರಮದ ಸಂಯೋಜಕ ಜೈನಹಳ್ಳಿ ಸತ್ಯನಾರಾಯಣಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಯುವಕನ ಕೂದಲು ಕತ್ತರಿಸಿ, ಬಸ್ಕಿ ಹೊಡೆಸಿ ಹಣ ಕಸಿದು ಪರಾರಿಯಾದ ದುಷ್ಕರ್ಮಿಗಳು!

ಮೈಸೂರು, ಸೆ.2(ಬಿಎಲ್‌ಯು)– ಯುವಕನನ್ನು ಅಡ್ಡಗಟ್ಟಿದ ಮೂವರು ದುಷ್ಕರ್ಮಿಗಳು ಮದ್ಯಪಾನ ಮಾಡಲು ಹಣಕ್ಕಾಗಿ ಪೀಡಿಸಿ, ಆತನ ತಲೆಗೂದಲು ಕತ್ತರಿಸಿ, ಬಸ್ಕಿ ಹೊಡೆಸಿ ಕೊನೆಗೆ ಹಣ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದೆ.

ನಗರದ ಮಸ್ಜೀದ್ ಬ್ಲಾಕ್‌ನ ಮೊಹಮ್ಮದ್ ಸಾಕ್ಲೇನ್ ಕೆಲಸ ಮುಗಿಸಿ ಮನೆಗೆ ತೆರಳುವಾಗ ಪುಲಕೇಶಿ ರಸ್ತೆಯಲ್ಲಿ ರಾತ್ರಿ 11.30 ಗಂಟೆಯಲ್ಲಿ ಮೂವರು ಅಡ್ಡಗಟ್ಟಿದ್ದಾರೆ. ಮೊಹಮ್ಮದ್ ಸಾಕ್ಲೇನ್ ಕೂದಲು ಕತ್ತರಿಸಿದ ದುಷ್ಕರ್ಮಿಗಳು, ಬಸ್ಕಿ ಹೊಡೆಸಿ ದೈಹಿಕವಾಗಿ ಹಿಂಸೆ ನೀಡಿದ್ದಾರೆ. ತರುವಾಯ ಮೊಹಮ್ಮದ್ ಸಾಕ್ಲೇನ್ ಜೇಬಿನಲ್ಲಿದ್ದ ಒಂದೂವರೆ ಸಾವಿರ ರೂಪಾಯಿಗಳನ್ನು ಬಲವಂತದಿಂದ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಈ ಸಂಬಂಧ ಮೊಹಮ್ಮದ್ ಸಾಕ್ಲೇನ್ ಮಂಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಮೂವರು ತಲೆಮರೆಸಿಕೊಂಡಿದ್ದು, ಆರೋಪಿಗಳ ಪೂರ್ತಿ ಹೆಸರು ಹಾಗೂ ಇತರೆ ಮಾಹಿತಿ ದೊರೆತಿಲ್ಲ. ಪೊಲೀಸರು ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

## ವಾರ್ಷಿಕ ಸರ್ವ ಸದಸ್ಯರ ಸಭೆ

ಮೈಸೂರು, ಸೆ. 2– ಗುರುಕುಲ ಪತ್ತಿನ ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಸಂಘದ ಅಧ್ಯಕ್ಷ ಡಾ. ಎಂ.ಎಸ್.ಮಹದೇವಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸೆ. 14 ರಂದು ಬೆಳಗ್ಗೆ 11 ಗಂಟೆಗೆ ಗುರುಕುಲ ಅಕಾಡೆಮಿ ಶಾಲೆಯ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಈಜುಕೊಳಕ್ಕೆ ಅತ್ಯಾಧುನಿಕ ಚಾವಣಿ

## ಈಜುಪಟುಗಳಿಗೆ ಇನ್ನು ಆಹ್ಲಾದಕರ ವಾತಾವರಣ ಭಾಗ್ಯ



ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಟೆನ್‌ಸೈಲ್ ಚಾವಣಿ ಒಳಗೊಂಡ ಸ್ವಿಮ್ಮಿಂಗ್ ಪೂಲ್.

> ಟೆನ್‌ಸೈಲ್ ಚಾವಣಿ ಈಜುಕೊಳ ಕ್ರೀಡಾಪಟುಗಳ ಆರೋಗ್ಯದ ದೃಷ್ಟಿಯಿಂದಲೂ ಅನುಕೂಲಕರವಾಗಿದೆ. ಏಪ್ರಿಲ್‌ನಿಂದ ಕಾಮಗಾರಿ ಆರಂಭವಾಗಿದ್ದು ಭರದಿಂದ ಸಾಗಿದೆ. ಈ ಬಾರಿ ದಸರಾ ಈಜು ಸ್ಪರ್ಧೆಯನ್ನು ಅತ್ಯಾಧುನಿಕ ಸೌಲಭ್ಯದ ಈಜುಕೊಳದಲ್ಲಿಯೇ ಆಯೋಜಿಸಲು ನಿರ್ಧರಿಸಲಾಗಿದೆ.
> – ಭಾಸ್ಕರ್ ನಾಯಕ್, ಸಹಾಯಕ ನಿರ್ದೇಶಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಮೈಸೂರು, ಸೆ.2(ಎಂಕೆ)– ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಟೆನ್‌ಸೈಲ್ ಚಾವಣಿ(ಹೊದಿಕೆ) ಒಳಗೊಂಡ ಅಂತರರಾಷ್ಟ್ರೀಯ ಗುಣಮಟ್ಟದ ಈಜುಕೊಳ ದಸರಾ ಕ್ರೀಡಾಕೂಟದ ವೇಳೆಗೆ ಲಭ್ಯವಾಗಲಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಈಜುಕೊಳಕ್ಕೆ ಸುಮಾರು 8 ಕೋಟಿ ರೂ.ವೆಚ್ಚದಲ್ಲಿ ಅತ್ಯಾಧುನಿಕ ಸ್ಪರ್ಶ ನೀಡಲಾಗುತ್ತಿದ್ದು, ನಾಡಹಬ್ಬ ಮೈಸೂರು ದಸರಾ ಕ್ರೀಡಾಕೂಟಕ್ಕೆ ಟೆನ್‌ಸೈಲ್ ಸ್ವಿಮ್ಮಿಂಗ್ ಪೂಲ್ ಸಿದ್ಧವಾಗಲಿದೆ. ರಾಜ್ಯದಲ್ಲಿಯೇ ಅತ್ಯಂತ ಸುಸಜ್ಜಿತ ಹಾಗೂ ನಗರದ ಏಕೈಕ ಅಂತಾರಾಷ್ಟ್ರೀಯ ಗುಣಮಟ್ಟದ ಈಜುಕೊಳ ಎಂಬ ಖ್ಯಾತಿಗೆ ಪಾತ್ರವಾಗಲಿದೆ.

ಈಜುಕೊಳಕ್ಕೆ ನೆರಳನ್ನು ಒದಗಿಸುವ ವ್ಯವಸ್ಥೆ ಇದಾಗಿದ್ದು, ಉಕ್ಕು ಅಥವಾ ಅಲ್ಯೂಮಿನಿಯಂ ಚೌಕಟ್ಟಿನಿಂದ ಕೂಡಿದ ಫ್ಯಾಬ್ರಿಕ್ ವಸ್ತುಗಳನ್ನು ಬಳಸಿಕೊಂಡು ಈಜುಕೊಳದ ಮೇಲೆ ಚಾವಣಿಯನ್ನು ನಿರ್ಮಿಸಲಾಗುತ್ತದೆ. ಹೊರಾಂಗಣದಲ್ಲಿ ಬಳಕೆಯಾಗುತ್ತಿದ್ದ ಈಜುಕೊಳ ಇನ್ನು ಮುಂದೆ ಒಳಾಂಗಣ ಈಜುಕೊಳದ ಮಾದರಿಯಲ್ಲಿ ಬಳಕೆ ಮಾಡಲು ಸಾಧ್ಯವಾಗುತ್ತದೆ.

ಟೆನ್‌ಸೈಲ್ ಸ್ವಿಮ್ಮಿಂಗ್ ಪೂಲ್‌ನಿಂದ ಈಜುಗಾರರಿಗೆ ನೆರಳು ಲಭ್ಯವಾಗುವ ಜೊತೆಗೆ ಸೂರ್ಯನಿಂದ ಬರುವ ಹಾನಿಕಾರಕ ನೇರಳಾತೀತ (ಅಲ್ಟ್ರಾ ವೈಲೆಟ್) ಕಿರಣಗಳಿಂದ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಚಾವಣಿಗಳಲ್ಲಿ ಬಳಸಲಾಗುವ ಫ್ಯಾಬ್ರಿಕ್ ಹಾನಿಕಾರಕ ನೇರಳಾತೀತ ಕಿರಣಗಳ ನಿರೋಧಕವಾಗಿ ಕೆಲಸ ಮಾಡುವುದರಿಂದ ಕೈ–ಕಾಲು ಟ್ಯಾನ್ ಆಗುವುದೂ ತಪ್ಪಲಿದೆ. ಜೊತೆಗೆ ಸುರಕ್ಷಿತ ಮತ್ತು ಆಹ್ಲಾದಕರ ವಾತಾವರಣವನ್ನು ಒದಗಿಸುತ್ತದೆ.

**ಹವಾಮಾನ ವೈಪರೀತ್ಯ ನಿರೋಧಕ:** ಟೆನ್‌ಸೈಲ್ ಚಾವಣಿ(ಹೊದಿಕೆ) ಒಳಗೊಂಡ ಸ್ವಿಮ್ಮಿಂಗ್ ಪೂಲ್ ಮಳೆ, ಗಾಳಿ ಮತ್ತು ತೀವ್ರವಾದ ಸೂರ್ಯನ ಬೆಳಕಿನಂತಹ ನಾನಾ ಹವಾಮಾನ ಪರಿಸ್ಥಿತಿಗಳನ್ನು ತಡೆಯಲಿದ್ದು, ಹವಾಮಾನ ವೈಪರೀತ್ಯ ನಿರೋಧಕವಾಗಿ ಬಳಕೆಯಾಗಲಿದೆ. ಹಾಗೆಯೇ ವಾತಾವರಣವನ್ನು ತಂಪಾಗಿಡಲು ಅನುಕೂಲವಾಗಲಿದೆ.

### ಎಸ್‌ಪಿವಿಜಿಎಂಸಿ ಟ್ರಸ್ಟ್‌ನ ಪಾರಂಪರಿಕ ಸಂಗೀತೋತ್ಸವ

# ವಿದ್ವಾನ್ ವಿಠ್ಠಲ್ ರಾಮಮೂರ್ತಿ ಮತ್ತು ವಿದುಷಿ ಪದ್ಮ ಶಂಕರರ ಪಿಟೀಲು ಮೋಡಿಗೆ ಮಾರುಹೋದ ಪ್ರೇಕ್ಷಕ ಬಾಂಧವರು

ಮೈಸೂರು, ಸೆ.2(ವಿವಿಹೆಚ್)– 'ಶ್ರೀ ಮಹಾಗಣಪತಿರವತುಮಾಮ್', 'ಎಂಥಾ ಮುದ್ದೋ ಎಂಥಾ ಸೊಗಸೋ', 'ಮಾನಸ ಸಂಚಾರೆ', 'ಜಗದೋದ್ಧಾರನ' ಎಂಬಂತಹ ಕೃತಿಗಳನ್ನು ನುಡಿಸಿದ ವಿದ್ವಾನ್ ವಿಠ್ಠಲ್ ರಾಮಮೂರ್ತಿ ಮತ್ತು ವಿದುಷಿ ಪದ್ಮ ಶಂಕರ್ ಅವರ ದ್ವಂದ್ವ ಪಿಟೀಲು ಮೋಡಿಗೆ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರು ಚಪ್ಪಾಳೆ ಮೂಲಕ ಹರ್ಷೋದ್ಗಾರಗೈದರು.

ಮೈಸೂರಿನ ವಾಣಿವಿಲಾಸ ಮೊಹಲ್ಲಾದ (ವಿವಿ ಮೊಹಲ್ಲಾ) 8ನೇ ಕ್ರಾಸ್‌ನಲ್ಲಿ ಶ್ರೀಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ ಟ್ರಸ್ಟ್) ವತಿಯಿಂದ ಆಯೋಜಿಸಿರುವ 64ನೇ ಪಾರಂಪರಿಕ ಸಂಗೀತೋತ್ಸವದ ಏಳನೇ ದಿನದಂದು(ಮಂಗಳವಾರ) ಕರ್ನಾಟಕ ಶಾಸ್ತ್ರೀಯ ಸಂಗೀತದ ದ್ವಂದ್ವ ಪಿಟೀಲು ಕಮಾಲು ಮಾಡಿತು.

ಈ ಜೋಡಿ ಲಾಲ್ಗುಡಿ ಜಯರಾಮನ್ ಅವರ ಗರುಡಧ್ವನಿ ರಾಗದ ವರ್ಣ ನುಡಿಸುವ ಮೂಲಕ ಕಛೇರಿ ಆರಂಭಿಸಿತು. ಮೈಸೂರು ವಾಸುದೇವಾಚಾರ್ಯ ಅವರ 'ಭಜನಸೇಯರಾಧ' ಕೀರ್ತನೆಯನ್ನು ಧರ್ಮಾವತಿ ರಾಗದಲ್ಲಿ, ತ್ಯಾಗರಾಜರ 'ಊರಜುಪು' ಕೃತಿಯನ್ನು ಕನ್ನಡ ಗೌಳ ರಾಗದಲ್ಲಿ ನುಡಿಸಿದರು. ನಂತರ ಪಿಟೀಲು ನುಡಿಸುತ್ತಾ ನೆರೆದಿದ್ದ ಪ್ರೇಕ್ಷಕರಿಗೆ ಸಂಗೀತ ವಾದನಗಳ ರಸದೌತಣ ಉಣಬಡಿಸಿದರು.



ದ್ವಂದ್ವ ಪಿಟೀಲು ವಾದನ ನುಡಿಸುತ್ತಿರುವ ವಿದ್ವಾನ್ ವಿಠ್ಠಲ್ ರಾಮಮೂರ್ತಿ, ವಿದುಷಿ ಪದ್ಮ ಶಂಕರ್

ಇವರಿಗೆ ವಿದ್ವಾನ್ ಬೆಂಗಳೂರು ಪ್ರವೀಣ್ (ಮೃದಂಗ), ವಿದ್ವಾನ್ ಭಾರದ್ವಾಜ್ ಆರ್. ಸಾತವಲ್ಲಿ (ಮೋರ್ಚಿಂಗ್), ಮೇದಾ ಭಟ್ (ತಂಬೂರಿ) ಸಾಥ್ ನೀಡಿದರು.

**ಗಮಕ ವಾಚನ:** ಇದಕ್ಕೂ ಮುನ್ನಾ ವಿದ್ವಾನ್ ಡಾ.ಮಂಜುನಾಥ ಹಾಗೂ ವಿದ್ವಾನ್ ಡಾ.ರಾಮಶೇಷನ್ ಅವರಿಂದ 'ಕೌಶಿಕ ರಾಮಾಯಣ–ಭರತ ಪಾದುಕೆ' ಗಮಕ ವಾಚನ ಕಾರ್ಯಕ್ರಮ ನಡೆಯಿತು. ವಾಲ್ಮೀಕಿ ರಾಮಾಯಣದ ಬಗ್ಗೆ ಎಲ್ಲರಿಗೂ ತಿಳಿದಿದೆ. ಆದರೆ ಕೌಶಿಕ ರಾಮಾಯಣದ ಬಗ್ಗೆ ಹಲವರಿಗೆ ತಿಳಿದಿಲ್ಲ. ಕೌಶಿಕ ಎಂಬುದು ವಿಶ್ವಾಮಿತ್ರರ ಮತ್ತೊಂದು ಹೆಸರಾಗಿದ್ದು, ರಾಮಾಯಣದಲ್ಲಿ ವಿಶ್ವಾಮಿತ್ರರು ರಾಮ–ಸೀತೆಗೆ ಮದುವೆ ಮಾಡಿಸಿ, ಅಯೋಧ್ಯೆಗೆ ಕರೆತರುವುದಾಗಿ ಕಥೆಗಳಲ್ಲಿ ಉಲ್ಲೇಖಿಸಲಾಗಿದೆ.

ಇಲ್ಲಿ ವಿಶ್ವಾಮಿತ್ರರು ರಚಿಸಿದರು ಎನ್ನಲಾದ ಕೌಶಿಕ ರಾಮಾಯಣದ ಬಗ್ಗೆ 1511ರ ಅವಧಿಯಲ್ಲಿ ಕುಮಾರವ್ಯಾಸ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಈ ಕೃತಿಯಲ್ಲಿ ರಾಮನಿಗೆ ಪಟ್ಟಾಭಿಷೇಕ ಮಾಡುವ ಸಂದರ್ಭದಲ್ಲಿ ಕೈಕೆಯ ಆಸೆಯಂತೆ ಆಕೆಯ ಮಗನಾದ ಭರತನಿಗೆ ಪಟ್ಟಾಭಿಷೇಕ ಮಾಡುವಂತೆ ದಶರಥನಲ್ಲಿ ತನ್ನ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಈ ಹಿಂದೆ ಕೈಕೆಯಿಂದ ಸಹಾಯಕ್ಕೊಳಗಾಗಿದ್ದ ದಶರಥ, ಆಕೆಗೆ ನೀಡಿದ್ದ ಮಾತಿನಂತೆ ಒಲ್ಲದ ಮನಸ್ಸಿನಲ್ಲಿ ರಾಮನನ್ನು ಕಾಡಿಗೆ ಕಳುಹಿಸಲು, ಭರತನಿಗೆ ಪಟ್ಟಾಭಿಷೇಕ ಮಾಡಲು ಆಜ್ಞಾಪಿಸುತ್ತಾನೆ. ಇದನ್ನು ಪಾಲಿಸುವ ರಾಮ ಅಯೋಧ್ಯೆ ತ್ಯಜಿಸಿ ವನವಾಸಕ್ಕೆ ತೆರಳುತ್ತಾನೆ.

ಈ ವಿಚಾರ ತಿಳಿದ ಭರತ ತನ್ನ ಅಣ್ಣನನ್ನು ಹುಡುಕಿಕೊಂಡು ಕಾಡಿಗೆ ತೆರಳುತ್ತಾನೆ. ಈ ಸಂದರ್ಭದಲ್ಲಿ ರಾಮ ತಂದೆಯ ಆಜ್ಞೆಯಂತೆ 14 ವರ್ಷ ವನವಾಸ ಅನುಭವಿಸುವುದಾಗಿ ತಿಳಿಸುತ್ತಾನೆ. ಈ ವೇಳೆ ರಾಮಚಂದ್ರನ ಪಾದುಕೆ ಬೇಡಿದ ಭರತನಿಗೆ ಶ್ರೀರಾಮಚಂದ್ರ ತನ್ನ ಪಾದುಕೆಗಳನ್ನು ನೀಡಿದ. ಅದನ್ನು ಕೊಂಡುಹೋದ ಭರತ ಅಯೋಧ್ಯೆಯ ಆಚೆಗಿನ ನಂದಿ ಗ್ರಾಮದಲ್ಲಿರಿಸಿ, 14 ವರ್ಷ ಅಧಿಕಾರ ನಡೆಸುವ ಸಂದರ್ಭದಲ್ಲಿನ ಪದ್ಯಗಳನ್ನು ಆಯ್ದು ವಾಚಿಸಲಾಯಿತು. ಆ ಮೂಲಕ ರಾಮಾಯಣದ ಮಹತ್ವವನ್ನು ಸಾರಲಾಯಿತು.

# ಧರ್ಮಸ್ಥಳ ಪ್ರಕರಣ: ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಎರಡು ಪ್ರತ್ಯೇಕ ಪ್ರಕರಣ ದಾಖಲು



ಮಹೇಶ್ ಶೆಟ್ಟಿ



ಗಿರೀಶ್

ಮಂಗಳೂರು, ಸೆ.2– ಸಾಮಾಜಿಕ ಮಾಧ್ಯಮದಲ್ಲಿ ಕೋಮು ಸಾಮರಸ್ಯವನ್ನು ಕದಡುವ ಮತ್ತು ಸಾರ್ವಜನಿಕ ಭಾವನೆಗಳಿಗೆ ಧಕ್ಕೆ ತರುವ ವಿಡಿಯೋಗಳನ್ನು ಹಂಚಿಕೊಂಡ ಆರೋಪದ ಮೇಲೆ ಹೋರಾಟಗಾರರಾದ ಗಿರೀಶ್ ಮಟ್ಟಣ್ಣನವರ್ ಮತ್ತು ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಬೆಳ್ತಂಗಡಿಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಮೊದಲ ದೂರು ಆಗಸ್ಟ್ 30ರಂದು ಧರ್ಮಸ್ಥಳದ ಪ್ರವೀಣ್ ಕೆಆರ್ ಎಂಬುವವರು ದಾಖಲಿಸಿದ್ದಾರೆ ಎಂದು ಅವರು ಹೇಳಿದರು.

ಗಿರೀಶ್ ಮಟ್ಟಣ್ಣನವರ್ ಅವರು ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಇತರರೊಂದಿಗೆ ಸೇರಿ, ಹಲವಾರು ದಿನಗಳಿಂದ ಬೆಳ್ತಂಗಡಿಯ ಬ್ಲಾಗಿಗರನ್ನು ಕರೆತಂದು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಸುಳ್ಳು ಮತ್ತು ಪ್ರಚೋದನಕಾರಿ ವಿಡಿಯೋಗಳನ್ನು ಪ್ರಸಾರ ಮಾಡಿದ್ದಾರೆ. ಈ ವಿಡಿಯೋಗಳು ಶಾಂತಿ ಮತ್ತು ಧಾರ್ಮಿಕ ಸಾಮರಸ್ಯ ಕದಡುವ ಉದ್ದೇಶವನ್ನು ಹೊಂದಿವೆ ಎಂದು ಆರೋಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.


ದೂರಿನ ಆಧಾರದ ಮೇಲೆ ಬೆಳ್ತಂಗಡಿ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಮತ್ತೊಂದು ದೂರು ದಾಖಲು:** ಸೆಪ್ಟೆಂಬರ್ 1ರಂದು ಧರ್ಮಸ್ಥಳದ ರಾಜೇಂದ್ರ ದಾಸ್ ಡಿ. ಎಂಬುವವರು ಸಲ್ಲಿಸಿದ ಎರಡನೇ ದೂರಿನಲ್ಲಿ, ಮಟ್ಟಣ್ಣನವರ್ ಅವರು ವಿಡಿಯೋ ಕ್ಲಿಪ್‌ನಲ್ಲಿ ಅಶ್ಲೀಲ ಮತ್ತು ಆಕ್ಷೇಪಾರ್ಹ ರೀತಿಯಲ್ಲಿ ಮಾತ ನಾಡಿದ್ದಾರೆ ಎಂದು ಆರೋಪಿಸಲಾಗಿದೆ. ನಂತರ ಅದನ್ನು ಸ್ಥಳೀಯ ಮಾಧ್ಯಮ ಚಾನೆಲ್‌ನಲ್ಲಿ ಪ್ರಸಾರ ಮಾಡಲಾಯಿತು. ಈ ವಿಡಿಯೋ ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡಿದೆ ಎಂದು ದೂರಿನಲ್ಲಿ ಹೇಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತೆಯ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಎರಡೂ ಪ್ರಕರಣಗಳ ತನಿಖೆ ನಡೆಯುತ್ತಿದೆ. ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ ಮತ್ತು ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಇತ್ತೀಚಿನ ತಿಂಗಳುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಮಾಜಿಕ ಮಾಧ್ಯಮ ಚಟುವಟಿಕೆಯು ಹೆಚ್ಚಾಗಿದೆ. ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವಂತಹ ವಿಷಯಗಳ ಪ್ರಸಾರದ ವಿರುದ್ಧ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

## ವಾರ್ಷಿಕ ಮಹಾಸಭೆ

ಮೈಸೂರು, ಸೆ. 2– ಬೋಗಾದಿಯಲ್ಲಿರುವ ಬಾಪೂಜಿ ಬಡಾವಣೆಯ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ. 14 ರಂದು ಬೆಳಗ್ಗೆ 11 ಗಂಟೆಗೆ ಸಂಘದ ಸಭಾಂಗಣದಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ.ಕೆ. ಶಿವಕುಮಾರ್ ವಹಿಸುವರು.











**1ನೇ ವರ್ಷದ ಪುಣ್ಯಸ್ಮರಣೆ**

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ಶ್ರೀ ಡಿ.ಲೋಕೇಶ್

ದುಃಖತಪ್ತರು: ಪತ್ನಿ ಶ್ರೀಮತಿ ಮಮತಾ.ಎಂ ಮಕ್ಕಳಾದ ನಂದಿತ.ಎಲ್, ಕೃತಿ.ಎಲ್ ಹಾಗೂ ಅಕ್ಕಂದಿರು, ಅಣ್ಣಂದಿರು ಮತ್ತು ದೊಡ್ಡಮೂಗೇಗೌಡರ ದೇವೇಗೌಡರ ಕುಟುಂಬ, ಕೆ.ಜಿ.ಕೊಪ್ಪಲು ಗ್ರಾಮಸ್ಥರು ಹಾಗೂ ಸ್ನೇಹಿತರು

**ಶ್ರೀ ಮದ್ದಾನೇಶ್ವರ ವಿದ್ಯಾರ್ಥಿ ನಿಲಯ**

ಝಾನ್ಸಿ ರಾಣಿ ಲಕ್ಷ್ಮೀಬಾಯಿ ರಸ್ತೆ, (ಮೆಟ್ರೋಪೋಲ್ ಹೋಟೆಲ್ ಹತ್ತಿರ), ಮೈಸೂರು– 570005

2025–26ನೇ ಸಾಲಿನಲ್ಲಿ ಮೈಸೂರು ನಗರದಲ್ಲಿ ಬಿಸಿಎ, ಎಂಸಿಎ, ಎಂಬಿಎ, ಬಿ.ಎಡ್., ಬಿ.ಇ. ಮತ್ತು **ಸ್ನಾತಕೋತ್ತರ** ತರಗತಿಗಳಲ್ಲಿ ಓದುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ತಿಂಡಿ, ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಪ್ರವೇಶ ಅರ್ಜಿಗಳನ್ನು ನಿಲಯಪಾಲಕರು, ಶ್ರೀ ಮದ್ದಾನೇಶ್ವರ ವಿದ್ಯಾರ್ಥಿನಿಲಯ, ಝಾನ್ಸಿ ರಾಣಿಲಕ್ಷ್ಮಿಬಾಯಿ ರಸ್ತೆ, (ಹೋಟೆಲ್ ಮೆಟ್ರೋಪೋಲ್ ಹತ್ತಿರ) ಮೈಸೂರು–05 ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಂಪರ್ಕಿಸಬೇಕಾದ ದೂರವಾಣಿ ಮತ್ತು ಮೊಬೈಲ್ ಸಂಖ್ಯೆಗಳು : 8884565185, 9980971176, 0821–2442012

ಸಹಿ/– ಕಾರ್ಯದರ್ಶಿ



**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು**

#918, ಮೊದಲನೇ ಮಹಡಿ, ಸಾಹುಕಾರ್ ಚೆನ್ನಯ್ಯ ರಸ್ತೆ, ಬ್ರಹ್ಮಸ್ಥಾನ ಕಲ್ಯಾಣ ಮಂಟಪದ ಹತ್ತಿರ, ಟಿ.ಕೆ. ಲೇಔಟ್, ಮೈಸೂರು – 570009 PH: 0821-4256440

ಮಾನ್ಯರೇ,

2024–2025ನೇ ಸಾಲಿನ **ವಾರ್ಷಿಕ ಮಹಾಸಭೆಯನ್ನು**, ದಿನಾಂಕ: 07–09–2025 ರಂದು **ಭಾನುವಾರ ಬೆಳಿಗ್ಗೆ 10:30 ಗಂಟೆಗೆ** ಪಂಡಿತ್ ಶ್ರೀ ನಾರಾಯಣಾಚಾರ್ಯ ಕಲ್ಯಾಣ ಮಂದಿರ, ದಿವಾನ್ಸ್ ರಸ್ತೆ, ಚಾಮರಾಜ ಜೋಡಿ ರಸ್ತೆ, (100 ಅಡಿ ರಸ್ತೆ) ಮೈಸೂರು–570024 ಇಲ್ಲಿ ಏರ್ಪಡಿಸಲಾಗಿದೆ. ಮಹಾಸಭೆಯ ನೋಟಿಸ್ಸನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ. ಒಂದು ವೇಳೆ ನೋಟಿಸು ತಲುಪದಿದ್ದರೆ ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.

ಸಹಿ/–
(ಡಿ.ವೀಣಾ)
ಮುಖ್ಯಕಾರ್ಯನಿರ್ವಹಣಾಧಿಕಾರಿ



**ಸಾರ್ವಜನಿಕ ಪ್ರಕಟಣೆ**

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲೂಕು, ತೊರೆಯನ ಕಟ್ಟೂರು [ಟಿ.ಕಾಟೂರು] ಮನೆ ನಂ.236 ರಲ್ಲಿ ವಾಸವಾಗಿರುವ ಲೇಟ್ ಶ್ರೀ. ಹನುಮಂತನಾಯಕ ರವರ ಧರ್ಮಪತ್ನಿಯಾದ ಸುಮಾರು 59 ವರ್ಷದ ಶ್ರೀಮತಿ. ಶಂಬಮ್ಮ ಹಾಗೂ ಡಿಟ್ಟೋ ವಿಳಾಸದಲ್ಲಿ ವಾಸವಾಗಿರುವ ಲೇಟ್ ಶ್ರೀ. ಹನುಮಂತನಾಯಕ ರವರ ಮಗಳಾದ ಸುಮಾರು **41** ವರ್ಷ ವಯಸ್ಸಿನ ಶ್ರೀಮತಿ. ಲಕ್ಷ್ಮಿ ರವರುಗಳಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಲು ತಯಾರಿರುತ್ತೇವೆ, ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 7 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಜಿಲ್ಲೆ, ಮೈಸೂರು ತಾಲೂಕು, ಜಯಪುರ ಹೋಬಳಿ, ತೊರೆಯನ ಕಟ್ಟೂರು ಗ್ರಾಮದ ಸರ್ವೆ ನಂ.27/8 ರಲ್ಲಿ ವಿಸ್ತೀರ್ಣ 01–03 (ಒಂದು ಎಕರೆ ಮೂರು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂದಿ:– **ಪೂರ್ವಕ್ಕೆ :** 10 ಅಡಿ ರಸ್ತೆ, **ಪಶ್ಚಿಮಕ್ಕೆ :** ಮಾದೇಶ ನಾಯಕ ರವರ ಜಮೀನು, **ಉತ್ತರಕ್ಕೆ :** ನೀರು ಹರಿಯುವ ಹಳ್ಳ, **ದಕ್ಷಿಣಕ್ಕೆ :** ಚಿಕ್ಕಣ್ಣ ನಾಯಕ ರವರ ಜಮೀನು.

ಸಹಿ/– ದಿನೇಶ್ ಸೋಲಂಕಿ, ವಕೀಲರು,
ನಂ.1197, 12/2, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ, ಮೈಸೂರು.
ಮೊ: 9343430011

ದಿನಾಂಕ: 02–09–2025, ಸ್ಥಳ : ಮೈಸೂರು



## PUBLIC NOTICE

This is to notify to the General Public that our client K.Kishan Cariappa, son of Late K.K. Cariappa, Residing at #20 MIG, 3d stage. Kuvempunagar, Mysore, presently residing at #813. 1 floor, Maple A. Tata Sherwood Apartments, Basava nagar, Bangalore, is the absolute owner in possession of survey No.215, measuring 2 acres situated at Huyilalu village, Mysore taluk by virtue of a registered sale deed dated 16.11.2000 vide Document No.4706/2000 at page 14 to 16 Volume 192 of Book-1 before the Sub registrar Mysore which was executed in favour of our client by its then owners H.S.Shivaramaiah, H.S.Manjunath, H.S.Mahesh & H.S.Lokanath and their children's. After the said sale, our client was put in possession of the schedule property.

Now it is reliably learnt that the persons mentioned above who had executed the sale deed of the schedule property in favour of our client clandestinely without disclosing the existence of the above said sale deed now making all efforts to sell the schedule property in favour of the third party.

In spite of this notice if anyone enters into any type of sale transaction with respect to the schedule property, the said third party will not get any right over the schedule property. Wherefore, our client hereby intimates to the general public, not to enter into any type of sale transaction with respect to the schedule property.

## SCHEDULE

All that piece and parcel of Survey No.215. measuring 2 acres situated at Huyilalu village, Mysore Taluk and bounded on:

East by: Land belonging to Gowramma bearing Survey No.215/2, ; West by:Land belonging to Devaraju s/o late Kariyappa Gowda ; North by:Land belonging to K.C.Subbaiah, K.Kishan Cariappa,K.Kiran Cariappa ; South by: Land bearing Survey No.214

Sd/- P.K.PONNAIAH
ADVOCATE, Office: No.1662/1A, 1st Floor, Radhamadav Connect, N.S. Road, Beside Secure Hospital (Old Seetharanga Hospital), Mysoe -04, Mob:9448773611

ಐ.ಎಸ್./ಐ.ಎಸ್.ಓ 9001–2015 & 14001–2015 ಐ.ಎಸ್.ಓ ಪ್ರಮಾಣಿತ ಸಂಸ್ಥೆ

**ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ**

ಘಟಕ: ರೇಷ್ಮೆ ನೇಯ್ಗೆ ಕಾರ್ಖಾನೆ, ಮಾನಂದವಾಡಿ ರಸ್ತೆ, ಮೈಸೂರು – 570008

GSTNo. 29AACK6554 AIZP Ph: 0821-2481803, Fax: 0821-2483544, Email: gmksic@gmail.com

ಸಂಖ್ಯೆ: ಕೆಎಸ್‌ಐಸಿ/ಎಸ್‌ಡಬ್ಲ್ಯೂಎಫ್/ಡಿಸಿಎ/2025–26/3645 ದಿ: 29.08.2025

**ಮರು ಟೆಂಡರ್ ಹರಾಜು ಪ್ರಕಟಣೆ**

**ಕಿಟ್ಟದ ಜೊತೆಗೆ ಕಲ್ಲಿದ್ದಲು ಬೂದಿಯ ಮರು ಟೆಂಡರ್ ಹಾಗೂ ಹರಾಜು ಪ್ರಕಟಣೆ** ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು ನಲ್ಲಿ ಲಭ್ಯವಿರುವ ಕಿಟ್ಟ ಮತ್ತು ಕಲ್ಲಿದ್ದಲು ಬೂದಿಯನ್ನು, ಎಲ್ಲಿ ಹೇಗಿದೆಯೋ ಹಾಗೆ ತೂಕದ ಆಧಾರದ ಮೇಲೆ ಖರೀದಿಸಲು ಇಚ್ಛೆಯುಳ್ಳವರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಈ ಘಟಕಗಳಲ್ಲಿನ ಅಂದಾಜು ಪರಿಮಾಣ, ನಿಗಧಿಪಡಿಸಿದ ಇ.ಎಂ.ಡಿ ಮತ್ತು ಹರಾಜು ದಿನಾಂಕಗಳನ್ನು ಈ ಕೆಳಕಂಡಂತಿರುತ್ತದೆ.

**ಕ್ರ.ಸಂ.1 ಘಟಕದ ಹೆಸರು:** ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು. **ಅಂದಾಜು ಪರಿಮಾಣ:** 80 ಮೆಟ್ರಿಕ್ ಟನ್. **ನಿಗಧಿತ ಇ.ಎಂ.ಡಿ ರೂ.ಗಳಲ್ಲಿ:** 20000/– ನಗದು ಅಥವಾ ಡಿ.ಡಿ. **ಟೆಂಡರ್ ಮತ್ತು ಹರಾಜಿನ ದಿನಾಂಕ:** 17.09.2025 ಇಚ್ಛೆಯುಳ್ಳ ಪಾನ್ ಕಾರ್ಡ್ ಹೊಂದಿರುವ ಬಿಡ್ಡುದಾರರು ಟೆಂಡರ್ ಫಾರಂಗಳನ್ನು ಮತ್ತು ನೀತಿ ನಿಯಮಾವಳಿಗಳ ಪ್ರತಿಗಳನ್ನು ಸಂಬಂಧಪಟ್ಟ ಘಟಕಗಳ ಪ್ರಧಾನ ವ್ಯವಸ್ಥಾಪಕರಿಂದ ಆಯಾ ಘಟಕಗಳ ಮುಂದೆ ಸೂಚಿಸಿರುವ ದಿನಾಂಕದೊಳಗೆ ಮಧ್ಯಾಹ್ನ 1.00 (ಒಂದು) ಗಂಟೆಯೊಳಗಾಗಿ ರೂ.100.00ಗಳ ಅರ್ಜಿ ಶುಲ್ಕ (ತೆರಿಗೆ ಸೇರಿ) ಪಾವತಿ ಮಾಡಿ ಪಡೆಯತಕ್ಕದ್ದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಆಯಾ ಘಟಕದ ಪ್ರಧಾನ ವ್ಯವಸ್ಥಾಪಕರ ಹೆಸರಿಗೆ ರೂ.20,000/–ಗಳ ಡಿ.ಡಿ ಯನ್ನು ಅಥವಾ ಆಯಾ ಘಟಕದ ನಗದು ಪಾವತಿಸಿದ ರಶೀದಿಯನ್ನು ಲಗತ್ತಿಸಿ ಮಧ್ಯಾಹ್ನ 2.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಹರಾಜು ಮಾಡಲಾಗುವುದು ಹರಾಜು ನಡೆದ ತಕ್ಷಣ ಟೆಂಡರ್‌ಗಳನ್ನು ತೆರೆಯಲಾಗುವುದು. ಟೆಂಡರ್ ಫಾರಂಗಳನ್ನು ದಿ: 17.09.2025 ರಿಂದ ಆಯಾ ಘಟಕಗಳಲ್ಲಿ ವಿತರಿಸಲಾಗುವುದು. ಈ ಬಗ್ಗೆ ಯಾವುದೇ ವಿವಾದ ಬಂದರೆ ನಮ್ಮ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು

DIPR/DDMYS/886/KSMCA/487/2025-26